ಸಂಪುಟ: 14 Volume | ಸಂಚಿಕೆ: 05 Issue | ಪುಟಗಳು 08 Pages | ಸೋಮವಾರ 06 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಜೀವನದಲ್ಲಿಬುದ್ಧಿವಂತಿಕೆಯೊಂದೇ ಸಾಲದು. ತಾಳ್ಮೆ ಮತ್ತು ವಿವೇಚನೆ ಕೂಡ ಮುಖ್ಯ.

–ವಿನೋಬಾ ಭಾವೆ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಹಣದ ಹಿಂದೆ ಹೋಗಬೇಡಿ: ಬಸವಲಿಂಗ ಅವಧೂತರು 6
ಪ್ರಕಾಶ್ ಮಾಳಗೆ ಮಾಧ್ಯಮ ಸಂಘದಿಂದ ಸನ್ಮಾನ 7
ತಂಗುದಾಣ ಇಲ್ಲದೆ ಪ್ರಯಾಣಿಕರ ಪರದಾಟ 8



ಇಂದು ಹುಣಸಗಿ ಪಟ್ಟಣದಲ್ಲಿ ನಮ್ಮ ಮಲ್ಲಮ್ಮ ನುಡಿ ಯುಗಾದಿ ವಿಶೇಷ ಸಂಚಿಕೆಯನ್ನು ಪ.ಪಂಚಾಯತ ಸದಸ್ಯ ಶರಣು ಸಾಹುಕಾರ ದಂಡಿನ ಹಾಗೂ ಪ. ಪಂಚಾಯತ ಅಧ್ಯಕ್ಷರು ಮರಿಲಿಂಗಪ್ಪ ನಾಟೆಕರ, ಮುಖ್ಯ ಅಧಿಕಾರಿ ಅರುಣಕುಮಾರ,ಪ.ಪ. ಸದಸ್ಯ ಖಾಸಿಂಸಾಬ ಟೋಣ್ಣೂರು ಅವರಿಗೆ ವಿತರಣೆ ಮಾಡಲಾಯಿತು.

## ಎಲ್‌ಪಿಜಿ ಸಮಸ್ಯೆ ಪರಿಹರಿಸಬೇಕು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮಧ್ಯಪ್ರಾಚ್ಯದಲ್ಲಿನಡೆಯುತ್ತಿರುವಯುದ್ಧದಪರಿಣಾಮವಾಗಿ ಉಂಟಾಗಿರುವ ಎಲ್‌ಪಿಜಿ ಸಂಕಷ್ಟವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಗ್ಯಾಸ್ ಲಭ್ಯವಿಲ್ಲದಿದ್ದರೂ ಇದೆ ಎಂದು ಹೇಳುವುದು ಸರಿಯಲ್ಲ. ತಪ್ಪು ಇದ್ದರೆ ಅದನ್ನು ಸರಿಪಡಿಸಬೇಕು. ಇದು ಒಂದು ಗಂಭೀರ ಸಂಕಷ್ಟವಾಗಿದ್ದು, ಸರಿಯಾಗಿ ನಿರ್ವಹಿಸದಿದ್ದರೆ ದೇಶದ ಆರ್ಥಿಕತೆಗೆ ದೊಡ್ಡ ಹೊಡೆತ ಬೀಳುತ್ತದೆ ಎಂದು ಎಚ್ಚರಿಸಿದ್ದಾರೆ.

ಈಗಾಗಲೇ ಗ್ಯಾಸ್ ಕೊರತೆಯಿಂದ ಸಣ್ಣ



ಹೋಟೆಲ್‌ಗಳು ಮತ್ತು ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಇದರಿಂದ ಸಾಮಾನ್ಯ ಜನರ ಜೀವನದ ಮೇಲೆ ನೇರ ಪರಿಣಾಮ ಬೀಳುತ್ತಿದೆ. ಮುಂದುವರಿದರೆ ಈ ಸಮಸ್ಯೆ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

## 50 ವಸ್ತುಗಳ ಬೆಲೆ ಏರಿಸಿದ್ದು ಯಾರು..?

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

50 ವಸ್ತುಗಳ ಬೆಲೆ ಏರಿಸಿದ್ದಕ್ಕಾಗಿ ಕಾಂಗ್ರೆಸ್‌ಗೆ ಮತ ಹಾಕಬೇಕೇ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಪ್ರಶ್ನಿಸಿದ್ದಾರೆ.

ಇಂದು ಇಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ ದರ ಏರಿಕೆ ಮೂಲಕ ಕಾಂಗ್ರೆಸ್ಸಿನವರು ಹಗಲುದರೋಡೆಗೆ ಇಳಿದಿದ್ದಾರೆ ಎಂದರು. ದೇಶದಲ್ಲಿ ಪೆಟ್ರೋಲಿಗೆ ಅತಿ ಹೆಚ್ಚು ತೆರಿಗೆ ಇರುವ ಪ್ರದೇಶಗಳಲ್ಲಿ ಕರ್ನಾಟಕವೂ ಒಂದು ಎಂದು ಟೀಕಿಸಿದರು. 3 ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿದ್ದಾರೆ ಎಂದು ಆರೋಪಿಸಿದರು. ಜನನ ಮರಣ ಸರ್ಟಿಫಿಕೇಟ್ ಸೇರಿ ಎಲ್ಲ ದರಗಳನ್ನು ಏರಿಸಿದ್ದಾರೆ. ಟ್ರಾನ್ಸ್‌ಫಾರ್ಮರ್, ರಸ್ತೆ ತೆರಿಗೆ ಸೇರಿ ಯಾವುದನ್ನೂ ಬಾಕಿ ಉಳಿಸಿಲ್ಲ ಎಂದು ಆಕ್ಷೇಪಿಸಿದ್ದಾರೆ.




ಸಿದ್ದರಾಮಯ್ಯನವರು ನಾನೇ ಅಭ್ಯರ್ಥಿ ಎಂದು ಭಾವಿಸಿ ಮತ ಕೊಡಲು ಕೇಳಿದ್ದಾರೆ. ನಿಮ್ಮನ್ನು ಅಭ್ಯರ್ಥಿ ಎಂದು ಯಾಕೆ ಮತ ಹಾಕಬೇಕು ಎಂದು ಕೇಳಿದರು. ಕಾಂಗ್ರೆಸ್ಸಿನವರು ಬಹುಸಂಖ್ಯಾತರಿಂದ ಸುಳ್ಳು ಹೇಳಿ ಮತ ಪಡೆಯುತ್ತಾರೆ. ಏನೇ ಕೆಲಸ ಇದ್ದರೂ ಅದನ್ನು ಅಲ್ಪಸಂಖ್ಯಾತರಿಗೇ ಮಾಡುತ್ತಾರೆ ಎಂದು ಟೀಕಿಸಿದ್ದಾರೆ.

## ಆರೋಪಿಗೆ ಗುಂಡು, ಬಂಧನ

**ಕಲಬುರಗಿ:** ನಗರದ ಪಿಅಂಡ್‌ಟಿ ಕಾಲೊನಿಯಲ್ಲಿ ನಡೆದ ಫೈನಾನ್ಸಿಯರ್ ಅನಿಲ್‌ರಾಠೋಡ್ ಕೊಲೆ ಪ್ರಕರಣದ ಆರೋಪಿ ಈಶ್ವರರಾಠೋಡ್‌ನಿಗೆ ಸ್ಟೇಷನ್ ಬಜಾರ್ ಪೊಲೀಸರು ಶೂಟೌಟ್ ಮಾಡಿ ಬಂಧಿಸಿದ್ದಾರೆ. ಹಣಕಾಸು ವಿಷಯಕ್ಕೆ ಫೈನಾನ್ಸಿಯರ್ ಅನಿಲ್ ರಾಠೋಡ್‌ನನ್ನು ಏ.2 ರಂದು ರಾತ್ರಿ ದುಷ್ಕರ್ಮಿಗಳು ಫೈನಾನ್ಸ್‌ನಲ್ಲಿಯೇ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದರು. ಗುಂಡೇಟಿನಿಂದ ಗಾಯಗೊಂಡಿರುವ ಈಶ್ವರ ರಾಠೋಡನನ್ನು ನಗರದ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

## ಗೌರವ ಡಾಕ್ಟರೇಟ್ ಬೇಡ: ಸಂಸದ



**ಹಾವೇರಿ:** ಹಾವೇರಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಸ್ವೀಕರಿಸಲು ಸಂಸದ ಬಸವರಾಜ ಬೊಮ್ಮಾಯಿ ನಿರಾಕರಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮೂಲಕ ಸ್ಪಷ್ಟಪಡಿಸಿ, ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ಕುಲಪತಿಗೆ ತಿಳಿಸಿದ್ದೇನೆ. ಸಾರ್ವಜನಿಕ ಸೇವೆಯಲ್ಲಿ ಇರುದ್ದು, ಯಾವುದೇ ಪ್ರಶಸ್ತಿ ಅಪೇಕ್ಷಿಸುವುದಿಲ್ಲ ಎಂದಿದ್ದಾರೆ.

## ಈಜಲು ಹೋಗಿ ಇಬ್ಬರು ಸಾವು



**ಅಫಜಲಪುರ:** ಈಜಾಡಲು ಹೋದ ಸಂದರ್ಭದಲ್ಲಿ ನದಿಯಲ್ಲಿ ಮುಳುಗಿ ಇಬ್ಬರು ಮೃತಪಟ್ಟಿದ್ದಾರೆ. ತಾಲೂಕಿನ ಮಣ್ಣೂರ ಗ್ರಾಮದ ಯಲ್ಲಮ್ಮದೇವಿ ದೇವಸ್ಥಾನದಲ್ಲಿ ಗೌರ(ಕೆ) ಗ್ರಾಮಸ್ಥರು ಹರಿಕೆ ತೀರಿಸಲು ನೈವೇದ್ಯ ಮಾಡಿದ್ದರಿಂದ ಗ್ರಾಮದ ಪುಂಡಲೀಕ ಮುಲಿಮನಿ (17),ಮಹೇಶ್ ಹಿರೇಗೌರ(16) ಇವರು ಊಟಕ್ಕೆ ಹೋಗಿ ಬಳಿಕ ಈಜಲು ಹೋದಾಗ ಈ ದುರಂತ ಸಂಭವಿಸಿದೆ. ಮೃತ ವಿದ್ಯಾರ್ಥಿಗಳ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಈ ಬಗ್ಗೆ ಪ್ರಕರಣ ದಾಖಲಾಗಿದೆ.

# ಎಲೆಕ್ಷನ್ ಜ್ವರ ವಾಕ್ಸಮರ

### ದಿನೇ ದಿನೆ ಕಾವೇರಿದ ಕಣ | ಬಿಜೆಪಿ, ಕಾಂಗ್ರೆಸ್ ನಾಯಕರ ಪರಸ್ಪರ ಕೆಸರೆರೆಚಾಟ | ಎಚ್ಡಿಕೆ, ಜಮೀರ್ ಎಂಟ್ರಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ/ದಾವಣಗೆರೆ

ಈ ಬಾರಿಯ ಉಪ ಚುನಾವಣೆ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಕಣವಾಗಿ ಪರಿಣಮಿಸಿದೆ. ಚುನಾವಣಾ ಪ್ರಚಾರಕ್ಕೆ ಹೋದ ಧುರೀಣರು ಪರಸ್ಪರ ವಾಕ್ಸಮರ ಶುರುಮಾಡಿದ್ದು, ಮತದಾರನಿಗೆ ಪುಕ್ಕಟೆ ರಂಜನೆ ಒದಗಿಸಿದೆ. ಏತನ್ಮಧ್ಯೆ ತೀವ್ರ ಕುತೂಹಲ ಕೆರಳಿಸಿದ್ದ ಸಚಿವ ಜಮೀರ್ ಅಹ್ಮದ್ ಹಿಂಗ ಬಂದು ಪ್ರಚಾರ ಮಾಡದೇ ತೆರಳಿರುವುದು ಚರ್ಚೆಗೆ ಗ್ರಾಸವೊದಗಿಸಿದೆ. ಕೇಂದ್ರ ಸಚಿವ ಎಚ್ಡಿಕೆ ಪ್ರಚಾರ ಕಣಕ್ಕೆ ಧುಮಿಕಿರುವುದು ಮತ್ತೊಂದು ಮಹತ್ವದ ಬೆಳವಣಿಗೆಯಾಗಿದೆ.

**ಸೋಲು ಮನವರಿಕೆ:** ಕೇರಳ ಪ್ರವಾಸದಲ್ಲಿರುವ ಸಿಎಂ ಸಿದ್ದರಾಮಯ್ಯ ವಿರುದ್ಧ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಟೀಕಾಸ್ತ್ರಬಿಟ್ಟಿದ್ದು, ಸಿದ್ದರಾಮಯ್ಯ ಅವರು ಇಲ್ಲಿಗೆ ಬಂದು ವಾರಗಟ್ಟಲೆ ಉಳಿದು ಪ್ರಚಾರ ಮಾಡುತ್ತಿದ್ದಾರೆ. ಸೋಲು ನಿಶ್ಚಿತ ಎಂಬುದು ಮುಖ್ಯಮಂತ್ರಿಗೆ ಮನವರಿಕೆ ಆಗಿದೆ ಎಂದು ಕುಟುಕಿದ್ದಾರೆ.

**ಅಹಿಂದ ಹತ್ತಿಕ್ಕಲು..!:** ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಮತ್ತು ಕುರ್ಚಿ ಉಳಿಸಿಕೊಳ್ಳಲು ಬೆಳೆಸಿದ್ದ ಅಹಿಂದ ವರ್ಗವನ್ನೇ ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪ ಮಾಡಿದ್ದಾರೆ. ದಾವಣಗೆರೆಯಲ್ಲಿ ಬೆಳಗ್ಗೆ ಮಾಧ್ಯಮಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಾರೆ.








### ಅವಕಾಶವಾದಿ ಸಿಎಂ: ಕೇಂದ್ರ ಸಚಿವ

ಮುಖ್ಯಮಂತ್ರಿಗಳ ಅವಕಾಶವಾದಿ ರಾಜಕಾರಣೆ. ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ. ದಾವಣಗೆರೆ ಪ್ರಚಾರ ಸಭೆಯಲ್ಲಿ ಮಾತನಾಡಿ, ಅಹಿಂದ ವರ್ಗದಲ್ಲಿ ಪ್ರಮುಖ ಭಾಗವಾಗಿರುವ ಮುಸ್ಲಿಂ ಜನಾಂಗದ ಮತಗಳಿಂದಲೇ ರಾಜಕೀಯ ಶಕ್ತಿ ಬಳಸಿಕೊಂಡ ಸಿಎಂ, ಈಗ ಕಣದಲ್ಲಿರುವ ಯಾವೊಬ್ಬ ಮುಸ್ಲಿಂ ಅಭ್ಯರ್ಥಿಗೂ ಮತ ಹಾಕಬೇಡಿ ಎನ್ನುತ್ತಿದ್ದಾರೆ. ಇದ್ಯಾವ ಸಾಮಾಜಿಕ ನ್ಯಾಯ ಪ್ರಶ್ನಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರೇ ಜಾತಿ ವಿಷಬೀಜ ಬಿತ್ತಿ ರಾಜಕಾರಣ ಮಾಡುವುದನ್ನು ಈಗಲಾದರೂ ಬಿಡಿ. ಸರ್ಕಾರದ ಖಜಾನೆಯನ್ನು ಲೂಟಿ ಮಾಡಿ ಸದಾ ಒಂದಿಲ್ಲೊಂದು ಭ್ರಷ್ಟಾಚಾರದಲ್ಲಿ ತೊಡಗಿರುವ ಸರ್ಕಾರ ಇನ್ನಾದರೂ ಪ್ರಾಮಾಣಿಕವಾಗಿ ಜನರ ಒಳಿತಿಗಾಗಿ ಕೆಲಸ ಮಾಡಿ. ಬಿಜೆಪಿ ಮತ್ತು ನರೇಂದ್ರ ಮೋದಿಯವರ ಜನಪ್ರಿಯತೆಯನ್ನು ಇಡೀ ವಿಶ್ವವೇ ಕೊಂಡಾಡುತ್ತಿದೆ. ದೇಶದ ಜನರೂ ಮೋದಿ ಅವರ ಜೊತೆ ನಿಂತಿದ್ದಾರೆ.

–ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

### ಗಮನ ಸೆಳೆದ ಸಮರ್ಥ್ ಶಮನೂರು

ಚುನಾವಣಾ ರಾಜಕೀಯದಲ್ಲಿ ಮೊದಲ ಹೆಜ್ಜೆ ಇಡುತ್ತಿರುವ ಯುವ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಮನೂರು ಅವರು ತಮ್ಮ ವಿಭಿನ್ನ ಪ್ರಚಾರ ಶೈಲಿಯಿಂದ ಗಮನ ಸೆಳೆ ಯುತ್ತಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿರುವ ಸಮರ್ಥ್ ಅವರು, ಸುಡುಬಿಸಿಲಿನಲ್ಲೂ ಬರಿಗಾಲಲ್ಲಿ ಪ್ರಚಾರ ನಡೆಸುತ್ತಿದ್ದಾರೆ. ನನ್ನ ಕಾಲುಗಳನ್ನು ನೋಡಬೇಡಿ, ನನ್ನ ಕ್ಷೇತ್ರವನ್ನು ರಾಜ್ಯದ ಅತ್ಯುತ್ತಮ ಕ್ಷೇತ್ರವನ್ನಾಗಿಸುವ ನನ್ನ ಗುರಿ ಇದೆ ಎಂದಿದ್ದಾರೆ.

### ಪ್ರಚಾರ ಮಾಡದ ಸಚಿವ ಜಮೀರ್

ದಾವಣಗೆರೆ ದಕ್ಷಣ ಕ್ಷೇತ್ರದಲ್ಲಿ ತೀವ್ರ ಟಿಕೆಟ್ ವಿಚಾರಕ್ಕೆ ಸಂಬಂಧಿಸಿದಂತೆ ತೀವ್ರ ಕುತೂಹಲ ಕೆರಳಿಸಿದ್ದ ಸಚಿವ ಜಮೀರ್ ಅಹ್ಮದ್‌ಖಾನ್ ಅವರು, ಮುಖ್ಯಮಂತ್ರಿ ಅವರು ಹೇಳಿದ್ದರಿಂದ ಕ್ಷೇತ್ರ-ಕ್ಕೆ ಭೇಟಿ ನೀಡಿದ್ದಾರೆ. ಸಚಿವ ಮಲ್ಲಿಕರ್ಜುನ್ ಮನೆಯಲ್ಲೂ ಊಟಮಾಡಿ ಪ್ರಚಾರ ಮಾಡದೆ ಪುನಃ ಹುಬ್ಬಳ್ಳಿಗೆ ತೆರಳಿದ್ದು ಕುತೂಹಲಕ್ಕೆ ಕಾರಣವಾಗಿದೆ. ಇಲ್ಲೇ ಕ್ಯಾಂಪ್ ಹೂಡಿದ್ದಾರೆ. ಅವರ ಪಕ್ಷದ ಅಭ್ಯರ್ಥಿ ಅವರದೇ ಸಮುದಾಯದವರು.

## ಬೇರೆ ಉದ್ದೇಶಕ್ಕೆ ಎಸ್‌ಸಿ-ಎಸ್ಟಿ ಅನುದಾನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮೀಸಲಾದ ಅನುದಾನವನ್ನು ಕಡಿತಗೊಳಿಸಲಾಗಿದೆ. ಎಸ್‌ಸಿ/ಎಸ್‌ಟಿ ಅನುದಾನವನ್ನು ಕಲ್ಯಾಣ ನಿಧಿಯನ್ನು ಬೇರೆ ಉದ್ದೇಶಗಳಿಗೆ ತಿರುಗಿಸಲಾಗಿದೆ ಎಂದು ಸರ್ಕಾರದ ವಿರುದ್ಧ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆಮಾತನಾಡಿ,ಮಾಜಿಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ಹಿಂದುಳಿದ ವರ್ಗಗಳ ಮಂಡಳಿಗಳು ಮತ್ತು ನಿಗಮಗಳಿಗೆ ರೂ.1,699 ಕೋಟಿ ಅನುದಾನ ನೀಡಲಾಗಿತ್ತು. ಆದರೆ, ಸಿದ್ದರಾಮಯ್ಯ ಸರ್ಕಾರದಲ್ಲಿ ಇದು ರೂ.643 ಕೋಟಿಗೆ ಇಳಿಕೆಯಾಗಿದೆ. ಈಗ ಯಾರನ್ನು ಹಿಂದುಳಿದ ಸಮುದಾಯಗಳ ಪ್ರತಿಪಾದಕ ಎಂದು ಕರೆಯಬೇಕು ಎಂದು ಪ್ರಶ್ನಿಸಿದ್ದಾರೆ. ಸರ್ಕಾರವು ಎಸ್‌ಸಿ/ಎಸ್‌ಟಿ ಸಮುದಾಯದ ಅಭಿವೃದ್ಧಿಗೆ ಮೀಸಲಾದ ರೂ.54,000 ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿದೆ ಎಂದು ಟೀಕಿಸಿದ್ದಾರೆ.

## ಉಪ ಚುನಾವಣೆ: ನಕಲಿ ಕಥೆ ಕಟ್ಟುವ ಬಿಜೆಪಿ

• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ



ಕರ್ನಾಟಕದಲ್ಲಿ ಉಪ ಚುನಾವಣೆಗೆ ಇನ್ನು ಮೂರು ದಿನ ಬಾಕಿಯಿದೆ. ಕಾಂಗ್ರೆಸ್–ಬಿಜೆಪಿ ನಾಯಕರ ಪ್ರಚಾರ ತೀವ್ರವಾಗಿದೆ. ಬಿಜೆಪಿಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಂದೀಪ್ ಸಿಂಗ್ ಸುರ್ಜೆವಾಲಾ, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ವಿರೋಧಿಯಾಗಿರುವ ಕೇಸರಿ ಪಕ್ಷವನ್ನು ಮತದಾರರು ತಿರಸ್ಕರಿಸಬೇಕು ಎಂದು ಒತ್ತಾಯಿಸಿದ್ದಾರೆ.

ದಾವಣಗೆರೆಯ ಎಪಿಎಂಸಿ ಮಾರುಕಟ್ಟೆಯಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದ ಐದು ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ಬಿಜೆಪಿಗೆ ಮತ ಹಾಕಬೇಡಿ. ಬಿಜೆಪಿ ನಕಲಿ ಕಥೆ ಕಟ್ಟಲು ಪ್ರಯತ್ನಿಸುತ್ತಿದೆ. ಆದರೆ ರಾಜ್ಯದ ಜನರು ಅದನ್ನು ಸ್ವೀಕರಿಸಲು ಸಿದ್ಧರಿಲ್ಲ. ಗ್ಯಾರಂಟಿ ಯೋಜನೆಗಳಿಂದ ಜನರ ಖರೀದಿ ಶಕ್ತಿ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

## ಬೆನಕಪೂರ ಸರ್ಕಾರಿ ಜಮೀನು ಒತ್ತುವರಿ

• ಎ.ಶೇಷಗಿರಿರಾವ್, ಮಲ್ಲಮ್ಮ ನುಡಿವಾರ್ತೆ, ಹೊಸಪೇಟೆ

ತಾಲೂಕಿನ ನಾಗೇನಹಳ್ಳಿ ವ್ಯಾಪ್ತಿಯ ಬೆನಕಪೂರ ಗ್ರಾಮಕ್ಕೆ ಸೇರಿ–ಕೊಂಡಂತೆ ಸರ್ವೆ ನಂ.55ರಲ್ಲಿ ಒಂದೂವರೆ ಎಕರೆ ಸರ್ಕಾರಿ ಗೋಮಾಳವಿದೆ. ಇದರಲ್ಲಿ ಶೆಡ್ ನಿರ್ಮಾಣ ಮಾಡಿರುವ ಭೂಪನೊಬ್ಬ ಕೋಟಿ ಮೌಲ್ಯದ ಭೂಮಿ ಸರ್ಕಾರಿ ಜಾಗವನ್ನು ಕಬಳಿಸಿದ್ದಾನೆ. ಇದನ್ನು ಕಂಡೂ ಕಾಣದಂತೆ ಅಧಿಕಾರಿಗಳು ನಟಿಸುತ್ತಿದ್ದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ ಜಾಗ ಒತ್ತುವರಿ ಆಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡು ಕೂಡಲೇ ತೆರವುಗೊಳಿಸುವಂತೆ ಒತ್ತಾಯಿಸಿದ್ದಾರೆ.

### ಮುಖ್ಯಮಂತ್ರಿಗಳೇ ಇತ್ತ ಗಮನಿಸಿ..!

ಈ ಕುರಿತು ಪ್ರತಿಕ್ರಿಯಿಸಿರುವ ನಾಗರಿಕರು, ನಾಗೇನಹಳ್ಳಿ ಗ್ರಾ.ಪಂಚಾಯಿತಿ ಪಿಡಿಒ ಅವರ ಗಮನಕ್ಕೆ ತಂದರೂ ಕ್ರಮ ಕೈಗೊಂಡಿಲ್ಲ. ಸಂಬಂಧಪಟ್ಟ ಉನ್ನತ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಮುಖ್ಯಮಂತ್ರಿಗಳೇ ಇತ್ತಗಮನಿಸಿ ಎಂದು ಗಮನ ಸೆಳೆದಿದ್ದಾರೆ. ಈ ಸಂಬಂಧ ಶನಿವಾರ ವರದಿಗಾರರೊಂದಿಗೆ ಮಾತನಾಡಿದ್ದ ವಿಲೇಜ್ ಅಕೌಂಟ್ ರವಿಚಂದ್ರ ಗೋಗಿ ಸರ್ವೆ ನಂಬರ್ 55 ರಲ್ಲಿ ಸರ್ಕಾರಿ ಜಾಗದಲ್ಲಿ ಭೂಮಿ ಒತ್ತುವರಿಯಾಗಿದೆ ಸ್ಥಳ ಪರಿಶೀಲಿಸಿದೆ ಅಲ್ಲಿನ ವ್ಯಕ್ತಿಗೆ ಮೌಖಿಕವಾಗಿ ಹೇಳಿದೆ ಕೂಡಲೇ ತಾಸಿಲ್ದಾರ್ ಗಮನಕ್ಕೆ ತಂದು ನೋಟಿಸ್ ಜಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ.





ದೂರವಾಣಿ ಮುಖಾಂತರ ಮಾತನಾಡಿ ಪಿಡಿಒ ಗಮನಕ್ಕೆ ತಂದಾಗ, ಬೆನಕಪೂರ್ ಸರ್ವೆ ನಂಬರ್ 55 ಸರ್ಕಾರಿ ಭೂಮಿ ಒತ್ತುವರಿ ಆರೋಪ ಕೇಳಿ ಬಂದಿದೆ. ಆದರೆ ನನಗೆ ಅಧಿಕಾರ ಇರುವುದಿಲ. ಸಂಬಂಧಪಟ್ಟ ಅಧಿಕಾರಿ ತಹಸಿಲ್ದಾರ್ ಅಧಿಕಾರ ವ್ಯಾಪ್ತಿ ಬರುತ್ತೆ ಹಾಗೂ ವಿ.ಎಗೆ ಬರುತ್ತೆ.

–ವಾಸುಕಿ, PDO ನಾಗೇನಹಳ್ಳಿ ಗ್ರಾ.ಪಂಚಾಯಿತಿ

## ಹಸಿರು ಕ್ರಾಂತಿಯ ಹರಿಕಾರ ಬಾಬೂಜಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಬಾಬೂಜಿ ಎಂದು ಖ್ಯಾತಿ ಪಡೆದ ಡಾ.ಬಾಬು ಜಗಜೀವನರಾಂ ಅವರು ಭಾರತದ ಸ್ವಾತಂತ್ರ್ಯ ಹೋರಾಟಗಾರ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದ್ದಾರೆ.

ನಗರದ ಆಳಂದ ರಸ್ತೆಯ ಸಂತೋಷ ಕಾಲನಿ ಕ್ರಾಸ್ ಸಮೀಪದ 'ರಿಪಬ್ಲಿಕ್ ಸ್ಪೋಕನ್ ಇಂಗ್ಲೀಷ್ ಅಕಾಡೆಮಿ'ಯಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ನಡೆದ 'ಡಾ.ಬಾಬು ಜಗಜೀವನರಾಂ ಅವರ 119ನೇ ಜಯಂತಿ'ಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಹಾನ್ ದಲಿತ ನಾಯಕ ಮತ್ತು ಮಾಜಿ ಉಪ ಪ್ರಧಾನಿ. ಹಸಿರು ಕ್ರಾಂತಿಯ ಹರಿಕಾರರಾಗಿ ಮತ್ತು ಸುದೀರ್ಘ ಕಾಲ ಸಂಸತ್ ಸದಸ್ಯರಾಗಿ (34 ವರ್ಷ) ದೇಶಸೇವೆ ಸಲ್ಲಿಸುವ ಮೂಲಕ ದೇಶಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಬಣ್ಣಿಸಿದ್ದಾರೆ.




ಚಿಂತಕ ಡಾ.ರಾಜಶೇಖರ ಪಾಟೀಲ ಮಾತನಾಡಿ, ಡಾ.ಬಾಬೂಜಿಯವರ ಜನ್ಮದಿನವನ್ನು 'ಸಮತಾ ದಿವಸ್' ಎಂದು ಆಚರಿಸಲಾಗುತ್ತದೆ. ಏಕೆಂದರೆ ಅವರು ಸಾಮಾಜಿಕ ಸಮಾನತೆಗಾಗಿ ನಿರಂತರವಾಗಿ ಹೋರಾಡಿದ್ದಾರೆ. ಅವರಲ್ಲಿರುವ ದೇಶ, ಸಮಾಜಪರ ಕಾಳಜಿ ಮಾದರಿಯಾಗಿದೆ ಎಂದು ವ್ಯಾಖ್ಯಾನಿಸಿದ್ದಾರೆ.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ದತ್ತು ಹಡಪದ, ನಿವೃತ್ತ ಕೃಷಿ ಅಧಿಕಾರಿ ಶಿವಯೋಗೆಪ್ಪಾ ಎಸ್. ಬಿರಾದಾರ, ಪ್ರಮುಖರಾದ ದಿನೇಶ್ ಮಿಶ್ರಾ, ಪ್ರವೀಣ ತಿವಾರಿ ಸೇರಿದಂತೆ ಇನ್ನಿತರರಿದ್ದರು.

**ಟೆಹರಾನ್ ನಡೆಸಿದ ಬೃಹತ್ ವೈಮಾನಿಕ ದಾಳಿಯಲ್ಲಿ ಇರಾನ್ ಮಿಲಿಟರಿ ಅಧಿಕಾರಿಗಳನ್ನು ಹತ್ಯೆ ಮಾಡಲಾಗಿದೆ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್**

# ಕಳಸಾರೋಹಣ ಅಖಂಡ ಹರಿನಾಮ ಸಪ್ತಾಹ



**9 ದಿವಸ ಒಲೆ ಹೊತ್ತಿಸುವುದಿಲ್ಲ**

> '07 ರಿಂದ 15 ರವರೆಗೆ ನಡೆಯುವ ವಿವಿಧ ಧಾರ್ಮಿಕ,ಆಧ್ಯಾತ್ಮೀಕ ಕಾರ್ಯಕ್ರಮಗಳಲ್ಲಿ ಪ್ರತಿನಿತ್ಯ ಒಬ್ಬೊಬ್ಬರಿಂದ ಮುಂಜಾನೆಯಿಂದ ಸಾಯಂಕಾಲದವರೆಗೆ ಭಕ್ತಾದಿಗಳಿಗಾಗಿ ಪ್ರಸಾದ ದಾಸೋಹ ಏರ್ಪಾಡಿಸಲಾಗಿದೆ.'


• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಲಾದಾ ಗ್ರಾಮದಲ್ಲಿ ಶ್ರೀ ಸೋಮೇಶ್ವರ ದೇವಸ್ಥಾನದ ಕಳಸಾರೋಹಣ ಹಾಗೂ ಅಖಂಡ ಹರಿನಾಮ ಸಪ್ತಾಹ ಎಪ್ರೀಲ್ 07 ರಿಂದ 15 ರ ವರೆಗೆ ಹುಲಸೂರಿನ ಶ್ರೀ ಗುರುಬಸವೇಶ್ವರ ಸಂಸ್ಥಾನ ಮಠದ ಡಾ.ಶಿವಾನಂದ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜ್ರಂಭಣೆಯಿಂದ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಪ್ರಮುಖರಾದ ರವೀಂದ್ರ ಪಾಟೀಲ್,ಅನೀಲ ಜಗತಾಪ ಮತ್ತು ಶಿವಾಜಿರಾವ ಬಿರಾದಾರ ಜಂಟಿಯಾಗಿ ತಿಳಿಸಿದ್ದಾರೆ.

ಕಳಸಾರೋಹಣ ಹಾಗೂ ಅಖಂಡ ಹರಿನಾಮ ಸಪ್ತಾಹ ಅಂಗವಾಗಿ 07 ರಂದು ನಡೆಯುವ 'ಶರಣರ ಕಾಯಕ' ಗೋಷ್ಠಿಯ ಉದ್ಘಾಟನೆಯನ್ನು ಮುಚಳಂಬದ ಪ್ರಣಾವನಂದ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ವಿಧಾನ ಪರಿಷತ್ ಸದಸ್ಯ ಎಮ್‌ಜಿ.ಮುಳೆ ಉದ್ಘಾಟಿಸಲಿದ್ದು,ಚನ್ನಬಸವಣ್ಣ ಬಳತೆ ಉಪಸ್ಥಿತರಿರಲಿದ್ದಾರೆ. 08 ರಂದು 'ಶರಣರ ದಾಸೋಹ' ಗೋಷ್ಠಿಯಲ್ಲಿ ಗಣೇಶಾನಂದ ಮಹಾಸ್ವಾಮಿಗಳು, 09 ರಂದು 'ಸಮಾನತೆ' ಗೋಷ್ಠಿಯಲ್ಲಿ ಹಲಬರ್ಗಾದ ಹಾವಗಿಲಿಂಗೇಶ್ವರ ಶಿವಾಚಾರ್ಯರು,ಡಿ.ಕೆ.ಸಿದ್ರಾಮ್,10 ರಂದು 'ಶರಣರ ಪ್ರಾಮಾಣಿಕತೆ'ಯಲ್ಲಿ ಸುಕ್ಷೇತ್ರ ಭರತನೂರನ ಗುರುನಂಜೇಶ್ವರ ಮಹಾಶಿವಯೋಗಿಗಳು, 11 ರಂದು 'ಶರಣಧರ್ಮ' ಗೋಷ್ಠಿಯಲ್ಲಿ ಮೆಹಕರದ ರಾಜೇಶ್ವರ ಶಿವಾಚಾರ್ಯರು,ಮಾಜಿ ಸಂಸದ ಭಗವಂತ ಖುಬಾ,ಮಾಜಿ ಶಾಸಕ ಪ್ರಕಾಶ ಖಂಡ್ರೆ, 12 ರಂದು 'ಶರಣರು ಕಟ್ಟಿದ ಸಮಾಜ' ಹಾರಕೂಡದ ಡಾ.ಚೆನ್ನವೀರ ಶಿವಾಚಾರ್ಯರು ,ಪಂಡರಪುರದ ಏಕನಾಥ ಮಹಾರಾಜ ಹಂಡೆ, ಸಚಿವ ಈಶ್ವರ ಖಂಡ್ರೆ,ಸಂಸದ ಸಾಗರ ಖಂಡ್ರೆ ,ಶಾಸಕ ಶರಣು ಸಲಗರ, 13 ರಂದು 'ಲದ್ದೆ ಸೋಮಣ್ಣನವರ ನಿಷ್ಠೆ ಜೀವನ' ಭಾಲ್ಕಿಯ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು,ಯುವಮುಖಂಡ ಪ್ರಸನ್ ಖಂಡ್ರೆ ,14 ರಂದು 'ಲಕ್ಷ ಣ ಶಕ್ತಿ'ಜಹಿರಾಬಾದನ ಡಾ.ಬಸವಲಿಂಗ ಅವಧೂತರು,ಡಿಎಸ್‌ಪಿ ಶಿವಾನಂದ ಪವಾಡಶೆಟ್ಟಿ, 15 ರಂದು ನಡೆಯುವ 'ಕಾಲೇಚೆ ಕೀರ್ತನ'ನಲ್ಲಿ ಪಂಡರಪುರದ ಕೃಷ್ಣ ಮಹಾರಾಜ ಚವರೆ ಭಾಗವಹಿಸಲಿದ್ದಾರೆ.ಪ್ರತಿನಿತ್ಯ ಸಾಯಂಕಾಲ ಭಜನೆ,ಕೀರ್ತನೆ,ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತವೆ.ಕಾರಣ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜೀವನ ಪಾವನ ಮಾಡಿಕೊಳ್ಳಬೇಕು ಎಂದು ಸಮಸ್ತ ಲಾದಾ ಗ್ರಾಮದ ಸದ್ಭಕ್ತರು ವಿನಂತಿಸಿಕೊಂಡಿದ್ದಾರೆ.

# ಡಾ.ಬಾಬು ಜಗಜೀವನ ರಾಮ್ ಅಪ್ರತಿಮ ನಾಯಕ

• ಮಲ್ಲಮ್ಮ ನುಡಿ ವಾರ್ತೆ, ಬೀದರ



ಭಾರತದ ಹಸಿರು ಕ್ರಾಂತಿಯ ಹರಿಕಾರರೆಂದೇ ಖ್ಯಾತರಾದ ಬಾಬು ಜಗಜೀವನ್ ರಾಮ್ ಅವರು ಶೋಷಿತ ಸಮುದಾಯದಿಂದ ಬಂದು ದೇಶದ ಉಪಪ್ರಧಾನಿ ಹುದ್ದೆಯವರೆಗೆ ಏರಿದ ಅಪ್ರತಿಮ ನಾಯಕ ಎಂದು ಪೌರಾಡಳಿತ ಹಾಗೂ ಹಜ್ ಖಾತೆ ಸಚಿವ ರಹೀಮ್ ಖಾನ್ ಹೇಳಿದರು.

ಅವರು ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಪೂಜ್ಯ ಡಾ. ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಆಯೋಜಿಸಿದ ಡಾ. ಬಾಬು ಜಗಜೀವನ ರಾಮ್ ರವರ 119ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

1970ರ ದಶಕದಲ್ಲಿ ಭಾರತವು ಎದುರಿಸುತ್ತಿದ್ದ ತೀವ್ರ ಆಹಾರ ಸಮಸ್ಯೆಯನ್ನು ನೀಗಿಸಿ, ಕೃಷಿಯಲ್ಲಿ ದೇಶವನ್ನು ಸ್ವಾವಲಂಬಿಯಾಗಿಸಿದ ಕೀರ್ತಿ ಬಾಬು ಜಗಜೀವನ ರಾಮ್ ರವರಿಗೆ ಸಲ್ಲುತ್ತದೆ, ಆದ್ದರಿಂದಲೇ ಅವರ ಜನ್ಮದಿನವಾದ ಏಪ್ರಿಲ್ 5 ಅನ್ನು ನಾವು 'ಸಮತಾ ದಿನ' ಎಂದು ಆಚರಿಸುತ್ತೇವೆ. ಸುಮಾರು ಮೂರು ದಶಕಗಳ ಕಾಲ ಕೇಂದ್ರ ಸಚಿವರಾಗಿ, ರಕ್ಷಣಾ ಸಚಿವರಾಗಿ 1971ರ ಯುದ್ಧದ ಸಮಯದಲ್ಲಿ ಮತ್ತು ಕೃಷಿ ಸಚಿವರಾಗಿ ಅವರು ನೀಡಿದ ಕೊಡುಗೆ ಅನನ್ಯ. ಸಮಾನತೆಯ ಸಿದ್ಧಾಂತದ ಪ್ರತಿಪಾದಕರಾಗಿದ್ದ ಬಾಬೂಜಿಯವರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವುದು ಇಂದಿನ ಸಮಾಜಕ್ಕೆ ಅತ್ಯಗತ್ಯವಾಗಿದೆ ಎಂದರು.

ಜಿಲ್ಲೆಯಲ್ಲಿ ಬಾಬು ಜಗಜೀವನರಾಮ್ ಅವರ ಭವನ ನಿರ್ಮಾಣಕ್ಕೆ ಈಗಾಗಲೇ 2 ಕೋಟಿ ಅನುಧಾನ ನೀಡಲಾಗಿದೆ ಅವಶ್ಯಕತೆ ಅನುಗುಣವಾಗಿ ಇನ್ನು ಹೆಚ್ಚಿನ ಅನುಧಾನ ನೀಡಲಾಗುವುದು. ವೃತ್ತನಿರ್ಮಾಣದ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಬಾಬು ಜಗಜೀವನ್ ರಾಮ್ ಅವರ ಜನ್ಮದಿನಾಚರಣೆಯ ಸಂದೇಶ ಕಳುಹಿಸಿದ ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಮತ್ತು ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ, ಭಾರತದ ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪಪ್ರಧಾನಿ ದಿವಂಗತ ಬಾಬು ಜಗಜೀವನ್ ರಾಮ್ ಅವರ 119ನೇ ಜನ್ಮದಿನದ (ಸಮತಾ ದಿನ) ಅಂಗವಾಗಿ ಅವರಿಗೆ ಭಕ್ತಿಪೂರ್ವಕ ನಮನಗಳು. ಬಿಹಾರದ ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಅಸ್ಪೃಶ್ಯತೆಯ ಸವಾಲುಗಳನ್ನು ಮೆಟ್ಟಿ ನಿಂತು ದೇಶದ ಅತ್ಯುನ್ನತ ನಾಯಕರಾಗಿ ಬೆಳೆದ ಇವರು, ಕೃಷಿ ಕ್ಷೇತ್ರದಲ್ಲಿ ಭಾರತವನ್ನು ಸ್ವಾವಲಂಬಿಯಾಗಿಸಿದ ಕೀರ್ತಿವಂತರು. 1971ರ ಯುದ್ಧದ ವೇಳೆ ರಕ್ಷಣಾ ಸಚಿವರಾಗಿ ಮತ್ತು ದಶಕಗಳ ಕಾಲ ಸಂಸತ್ ಸದಸ್ಯರಾಗಿ ಶೋಷಿತರ ಹಾಗೂ ರೈತರ ಧ್ವನಿಯಾಗಿ ಶ್ರಮಿಸಿದ ಬಾಬೂಜಿಯವರ ಸಮಾನತೆಯ ಆದರ್ಶಗಳು ಇಂದಿಗೂ ನಮಗೆ ಮಾರ್ಗದರ್ಶಕವಾಗಿವೆ. ಅನ್ಯ ಕಾರ್ಯನಿಮಿತ್ತ ಜಿಲ್ಲಾಡಳಿತದ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗದಿದ್ದರೂ, ಅವರ ತತ್ವಗಳನ್ನು ಪಾಲಿಸುವ ಸಂಕಲ್ಪ ಮಾಡೋಣ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಮಹಾದೇವಿ ಹೆಬ್ಬಾಳೆ ಡಾ. ಬಾಬು ಜಗಜೀವನ ರಾಮ್ ಜೀವನ ಕುರಿತು ವಿಶೇಷ ಉಪನ್ಯಾಸ ನೀಡಿದರು.

ವೇದಿಕೆ ಕಾರ್ಯಕ್ರಮ ಚಾಲನೆಗೂ ಮುನ್ನ ಡಾ. ಬಾಬು ಜಗಜೀವನ ರಾಮ್ ಭಾವಚಿತ್ರ ಮೆರವಣಿಗೆ ನಗರದ ಶಿವಾಜಿ ವೃತ್ತದಿಂದ ಚಾಲನೆಗೊಂಡು ಭಗತ್ ಸಿಂಗ್ ವೃತ್ತ, ಬಸವವೇಶ್ವರ ವೃತ್ತದ ಮಾರ್ಗವಾಗಿ ಡಾ. ಬಾಬು ಜಗಜೀವನ ರಾಮ್ ಅವರ ಪ್ರತಿಮೆ ಬಳಿಗೆ ತೆರಳಿ ಅಲ್ಲಿ ಗಣ್ಯರ ಸಮ್ಮುಖದಲ್ಲಿ ಡಾ. ಬಾಬು ಜಗಜೀವನ ರಾಮ್ ಅವರ ಪ್ರತಿಮೆಗೆ ಪೂಜೆ ಮಾಡಿ ನಮನ ಸಲ್ಲಿಸಿ ಅಲ್ಲಿಂದ ಅಂಬೇಡ್ಕರ್ ವೃತ್ತ, ರೋಟರಿ ವೃತ್ತ ಮಾರ್ಗದಿಂದ ಸಾಗಿ ಪೂಜ್ಯ ಡಾ. ಚನ್ನಬಸವ ಪಟ್ಟದೇವರ ರಂಗಮಂದಿರಕ್ಕೆ ತಲುಪಿತು.

ಈ ಸಂದರ್ಭದಲ್ಲಿ ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ನಗರಸಭೆ ಅಧ್ಯಕ್ಷ ಮಹಮ್ಮದ ಗೌಸ್, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಡಾ. ಯೋಗೇಶ್ ಎಸ್.ಬಿ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ್ ಸಿಂಧೆ, ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಪ್ರಮುಖರಾದ ಚಂದ್ರಕಾಂತ್ ಹಿಪ್ಪಳಗಾಂವ್, ಫರ್ನಾಡಿಸ್ ಹಿಪ್ಪಳಗಾಂವ್, ಮಾರುತಿ ಬೌದ್ಧೆ, ರಾಜು ಕಡ್ಯಾಳ, ವಿಜಯಕುಮಾರ್ ಸೋನಾರೆ, ರವಿರಾಜ್ ಘೋಡೆ, ಅಭಿ ಕಾಳೆ, ಶಾಮಣ್ಣ ಬಾವಗೆ, ಮಹೇಶ್ ದೊಡ್ಡಿ, ಶಾಮಣ್ಣ ಬೊಂಬಳಗಿ, ರವಿ ನಿಜಾಮಪುರ ಸೇರಿದಂತೆ ಅನೇಕ ಮುಖಂಡರು ಹಾಗೂ ಸಮಾಜದ ಬಂಧುಗಳು ಉಪಸ್ಥಿತರಿದ್ದರು.

# ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
ಪ್ರಧಾನ ಸಂಪಾದಕರು
ಮೋ: 9845028349



## ನಿರುದ್ಯೋಗ ಸಮಸ್ಯೆ ನಿವಾರಿಸಿ ಕೈಗೆ ಕೆಲಸ ನೀಡಿ

ದೇಶದ ಅಭಿವೃದ್ಧಿಗೆ ಯುವಶಕ್ತಿ ಅತ್ಯಂತ ಮುಖ್ಯವಾಗಿದೆ. ಆದರೆ ಇಂದಿನ ಕಾಲದಲ್ಲಿ ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಚಿಂತಾಜನಕ ಸಂಗತಿಯಾಗಿದೆ. ವಿದ್ಯಾಭ್ಯಾಸ ಪೂರ್ಣಗೊಳಿಸಿದ ಸಾವಿರಾರು ಯುವಕರು ಕೆಲಸವಿಲ್ಲದೆ ಅಲೆದಾಡುತ್ತಿರುವುದು ಸಮಾಜದ ಮುಂದೆ ದೊಡ್ಡ ಪ್ರಶ್ನೆಯಾಗಿ ಪರಿಣಮಿಸಿದೆ.

ಸರ್ಕಾರ ಯುವಕರಿಗೆ ಉದ್ಯೋಗ ಸೃಷ್ಟಿ ಮಾಡುವತ್ತ ಹೆಚ್ಚಿನ ಗಮನ ಹರಿಸಬೇಕಾಗಿದೆ. ಕೈಗಾರಿಕೆಗಳ ಸ್ಥಾಪನೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪ್ರೋತ್ಸಾಹ, ಕೃಷಿ ಹಾಗೂ ಗ್ರಾಮೀಣ ಉದ್ಯೋಗ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಅಗತ್ಯವಾಗಿದೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿಯೂ ಉದ್ಯೋಗಾವಕಾಶಗಳು ಹೆಚ್ಚಾಗುತ್ತವೆ.

ಇದೀಗ ಅನೇಕ ಯುವಕರು ವಿದ್ಯಾಭ್ಯಾಸ ಮಾಡಿಕೊಂಡರೂ ಅವರಿಗೆ ತಕ್ಕ ಕೆಲಸ ಸಿಗದೇ ನಿರಾಶೆಯಾಗುತ್ತಿದ್ದಾರೆ. ಇದರ ಪರಿಣಾಮವಾಗಿ ಹಲವರು ಬೇರೆ ರಾಜ್ಯಗಳಿಗೆ ವಲಸೆ ಹೋಗುವ ಪರಿಸ್ಥಿತಿ ಉಂಟಾಗಿದೆ.

ಈ ಸಮಸ್ಯೆಯನ್ನು ತಡೆಗಟ್ಟಲು ಸರ್ಕಾರ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಸೃಷ್ಟಿಸುವ ಯೋಜನೆಗಳನ್ನು ಜಾರಿಗೊಳಿಸಬೇಕು.

ನಿರುದ್ಯೋಗ ಸಮಸ್ಯೆ ನಿವಾರಣೆಗೆ ಕೇವಲ ಸರ್ಕಾರಿ ಉದ್ಯೋಗಗಳ ಮೇಲೆ ಅವಲಂಬನೆ ಇರದೆ, ಸ್ವಯಂ ಉದ್ಯೋಗಕ್ಕೂ ಹೆಚ್ಚಿನ ಉತ್ತೇಜನ ನೀಡಬೇಕು. ಯುವಕರಿಗೆ ಕೌಶಲ್ಯ ತರಬೇತಿ, ಸಾಲ ಸೌಲಭ್ಯ ಹಾಗೂ ಮಾರ್ಗದರ್ಶನ ನೀಡಿದರೆ ಅವರು ತಮ್ಮದೇ ಉದ್ಯಮ ಆರಂಭಿಸಿ ಇತರರಿಗೆ ಕೂಡ ಉದ್ಯೋಗ ನೀಡುವ ಶಕ್ತಿ ಹೊಂದಿರುತ್ತಾರೆ.

ಒಟ್ಟಿನಲ್ಲಿ, ಯುವಕರಿಗೆ ಕೈಗೆ ಕೆಲಸ ಸಿಗುವಂತಾಗುವುದು ದೇಶದ ಅಭಿವೃದ್ಧಿಗೆ ಅಗತ್ಯವಾಗಿದೆ. ಸರ್ಕಾರ ಯುವಕರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಿರುದ್ಯೋಗ ಸಮಸ್ಯೆ ನಿವಾರಣೆಗೆ ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕು. ಯುವಕರಿಗೆ ಕೈಗೆ ಕೆಲಸ ನೀಡಿ, ಅವರ ಜೀವನಕ್ಕೆ ದಿಕ್ಕು ನೀಡುವುದು ಕಾಲದ ಅವಶ್ಯಕತೆಯಾಗಿದೆ.

# ಹಾವು ಕಚ್ಚಿ ರೈತ ಮರಣ ಕುಟುಂಬಕ್ಕೆ ಸಾಂತ್ವನ, ಧನ ಸಹಾಯ



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಬೀದರ್ ದಕ್ಷಿಣ ಕ್ಷೇತ್ರದ ಚಿಂತಲಗೇರಾ ಗ್ರಾಮದಲ್ಲಿ ಈತ್ತಿಚೇಗೆ ರೈತ ವಿದ್ಯಾಸಾಗರ ಅವರು ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿರುವ ವೇಳೆ ಹಾವು ಕಚ್ಚಿ ಮೃತಪಟ್ಟ ದುರ್ಘಟನೆ ಸಂಭವಿಸಿದೆ ಹಿನ್ನೆಲೆಯಲ್ಲಿ ಈ ಘಟನೆ ಸ್ಥಳೀಯರಲ್ಲಿ ದುಃಖದ ವಾತಾವರಣವನ್ನು ಉಂಟುಮಾಡಿದೆ.

ಘಟನೆ ಕುರಿತು ತಿಳಿದ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಇಂದು ಮೃತರ ನಿವಾಸಕ್ಕೆ ಭೇಟಿ ನೀಡಿದ ಅವರು, ಕುಟುಂಬದ ಸದಸ್ಯರಿಗೆ ಸಾಂತ್ವನ ತಿಳಿಸಿ ವೈಯಕ್ತಿಕ ಧನ ಸಹಾಯವನ್ನು ನೀಡಿದರು.

ಸರ್ಕಾರದಿಂದ ಶೀಘ್ರದಲ್ಲೇ ಸೂಕ್ತ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಕುಟುಂಬದವರಿಗೆ ಭರವಸೆ ನೀಡಿದ್ದೇನೆ ಸಂಬಂಧಿತ ಅಧಿಕಾರಿಗಳೊಂದಿಗೆ ಈಗಾಗಲೇ ಮಾತನಾಡಿ, ತ್ವರಿತವಾಗಿ ಪರಿಹಾರ ಒದಗಿಸುವಂತೆ ಸೂಚನೆ ನೀಡಿದ್ದೇನೆ.ನಾವು ರೈತರ ಶ್ರಮದಿಂದಲೇ ಬದುಕುತ್ತಿರುವ ಸಮಾಜ. ಅವರ ಸುರಕ್ಷತೆ ಮತ್ತು ಕಲ್ಯಾಣ ನಮ್ಮೆಲ್ಲರ ಜವಾಬ್ದಾರಿ. ಇಂತಹ ಘಟನೆಗಳು ಮರುಕಳಿಸದಂತೆ ಜಾಗೃತಿ ಮೂಡಿಸುವುದು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು

ಅತ್ಯಂತ ಮುಖ್ಯ.ಭಗವಂತರು ನಿಧನರಾದ ವಿದ್ಯಾಸಾಗರ ಅವರ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಅವರ ಕುಟುಂಬದವರಿಗೆ ಈ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಗಿರೀಶ ಕುಲಕರ್ಣಿ, ಶಂಕರಾವ ಕೊಟರಕಿ, ಹಾವಶೆಟ್ಟಿ ಪಾಟೀಲ್, ಜಗದೀಶ್ ಖೂಬಾ, ಚಂದ್ರಶೇಖರ ನಿಟ್ಟೂರೆ, ಕೃಷ್ಣ ಬಚ್ಚೆ ಗೋಪಾಲ ರೆಡ್ಡಿ, ಜಗನ್ ರೆಡ್ಡಿ, ಶಿವಗೊಂಡ ಮತ್ತಿತರರು ಉಪಸ್ಥಿತರಿದ್ದರು.

# ಭಕ್ತರ ಮಧ್ಯೆ ಅದ್ದೂರಿ ರಥೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಜ್ಯಾಂತಿ ಗ್ರಾಮದ ಮಲ್ಲಿಕಾರ್ಜುನ–ಭ್ರಮರಾಂಬಿಕಾ ದೇವರ ರಥೋತ್ಸವ ಅಪಾರ ಸಂಖ್ಯೆಯ ಭಕ್ತರ ಮಧ್ಯೆ ನೆರವೇರುವುದರೊಂದಿಗೆ 77ನೆಯ ಜಾತ್ರಾ ಮಹೋತ್ಸವ ಸಂಭ್ರಮದ ತೆರೆ ಕಂಡಿತು.

ಗ್ರಾಮದಲ್ಲಿ ಎರಡು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಂಭ್ರಮದಿಂದ ನೆರವೇರಿದವು.

ಧ್ವಜಾರೋಹಣ, ರುದ್ರಾಭಿಷೇಕ, ಅಗ್ನಿಪೂಜೆ, ಪಲ್ಲಕ್ಕಿ ಮೆರವಣಿಗೆ, ಭಜನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜಾತ್ರಾ ಮಹೋತ್ಸವಕ್ಕೆ ಕಳೆ ತಂದು ಕೊಟ್ಟವು.

> ಮಲ್ಲಿಕಾರ್ಜುನ–ಭ್ರಮರಾಂಬಿಕಾ ದೇವರ ಜಾತ್ರಾ ಮಹೋತ್ಸವ ಅತ್ಯಂತ ಯಶಸ್ವಿಯಾಗಿ ನೆರವೇರಿದೆ. ಜಾತ್ರೆಗೆ ಸಹಕರಿಸಿದ ಎಲ್ಲರಿಗೂ ಅನಂತ ಧನ್ಯವಾದಗಳು.
> **ವೈಜಿನಾಥ ಪಾಟೀಲ್ ಅಧ್ಯಕ್ಷರು ಮಲ್ಲಿಕಾರ್ಜುನ–ಭ್ರಮರಾಂಬಿಕಾ ದೇವಸ್ಥಾನ ಜ್ಯಾಂತಿ**

ಕೊನೆಯ ದಿನ ಶುಕ್ರವಾರ ದೇಗುಲದ ಪರಿಸರದಲ್ಲಿ ಶ್ರದ್ಧೆ, ಭಕ್ತಿಯಿಂದ ರಥೋತ್ಸವ ನೆರವೇರಿತು. ಸುತ್ತಮುತ್ತಲಿನ ಗ್ರಾಮಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ದರುಶನ ಪಡೆದು ರಥೋತ್ಸವಕ್ಕೆ ಸಾಕ್ಷಿಯಾದರು.

# ಬೌದ್ಧಿಕತೆಯ ಬರದಿಂದ ಬಳಲುತ್ತಿರುವ ಹಳ್ಳಿಯ ಅಂತಃಕರಣ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಹುಲಸೂರ ಹಳ್ಳಿಗಳು ಅಂತಃಕರಣ ಹಾಗೂ ಬೌದ್ಧಿಕತೆಯ ಬರವನ್ನು ಎದುರಿಸುತ್ತಿವೆ ಎಂದು ಬಸವಕಲ್ಯಾಣದ ಶ್ರೀ ಬಸವೇಶ್ವರ ಪದವಿ ಕಾಲೇಜು ಉಪನ್ಯಾಸಕ ಭೀಮಾಶಂಕರ ಬಿರಾದಾರ ಹೇಳಿದರು.

ಹುಲಸೂರಿನ ಎಂ. ಕೆ. ಕೆ. ಪಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಗಾಂಧಿ ಮತ್ತು ಅಂಬೇಡ್ಕರ್ ಅವರ ಬರಹ, ಆಲೋಚನೆ , ಚಿಂತನೆಗಳ ತಾತ್ವಿಕತೆ ಯುವ ಸಮುದಾಯಕ್ಕೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಿದೆ.

ಪಠ್ಯದ ನಿಕಟ ಓದು, ವಿಮರ್ಶೆ, ಸಂಶೋಧನೆಗಳು ಪ್ರಭುತ್ವದ ನೆಲೆ, ಆರ್ಥಿಕ ಸಂಬಂಧಗಳು, ಸಮಾಜದ ಸಂಕೀರ್ಣತೆಗಳು ಕಾಣಿಸುತ್ತವೆ.

ಅಭಿವೃದ್ಧಿ ಮತ್ತು ಭೌತಿಕ ಬೆಳವಣಿಗೆಯ ನೆಪದಲ್ಲಿ ಪ್ರಕೃತಿಯ ಮೇಲೆ ಭಯಾನಕ ಹಲ್ಲೆ ಎಸಗಲಾಗುತ್ತಿದೆ. ನೀರು, ನೆಲ, ಕಾಡು ಸೇರಿ ಒಟ್ಟು ಜೀವ ಜಗತ್ತಾಗಿದೆ.ಹೊರತು ಮನುಷ್ಯನ ಭೌತಿಕ ಸಂಗತಿಗಳು, ಅಧಿಕಾರ, ಅಂತಸ್ತುಗಳಷ್ಟೇ ಜಗತ್ತಲ್ಲ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ. ಮಲ್ಲಿಕಾರ್ಜುನ ಕಾಂಬಳೆ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳ ನಡುವೆ ಉತ್ತಮ ಬಾಂಧವ್ಯ ಬೆಳೆಸುತ್ತದೆ.ಸಾಮಾಜಿಕ ಹೊಣೆಗಾರಿಕೆ ಹೆಚ್ಚಿಸಿ, ಆರೋಗ್ಯ ಪ್ರಜ್ಞೆ ಮೂಡಿಸುತ್ತದೆ. ಜ್ಞಾನ ವಿಸ್ತಾರಕ್ಕೆ ದಾರಿಯಾಗಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯಪ್ರಜ್ಞೆ ಹೆಚ್ಚಿಸುತ್ತದೆ ಎಂದರು.ಪತ್ರಕರ್ತ ರಾಜಕುಮಾರ ಹೊನ್ನಾಡೆ ಮಾತನಾಡಿ,ಈ ಭಾಗದ ಮಕ್ಕಳು ಉನ್ನತ ಶಿಕ್ಷಣ ಪಡೆದು ಶೈಕ್ಷಣಿಕವಾಗಿ ಮುಂದುವರಿಯಲು ಈ ಕಾಲೇಜು ದಾರಿದೀಪವಾಗಿದೆ. ಮಕ್ಕಳಿಗೆ ಪದವಿ, ಸ್ನಾತಕೋತ್ತರ ಪದವಿಗಳು ಪಡೆದು ಮುಂದೆ ಸಂಶೋಧನಾ ಅಧ್ಯಯನದ ಪ್ರವೇಶಕ್ಕೆ ಈ ಕಾಲೇಜು ಹೆಬ್ಬಾಗಿಲು ಆಗಲಿ ಎಂದರು.ಎನ್ನೆಸ್ಸೆಸ್ ಕಾರ್ಯಕ್ರಮ ಅಧಿಕಾರಿ ಡಾ. ಲಕ್ಷ್ಮೀಕಾಂತ ಪಂಚಾಳ ಪ್ರಾಸ್ತಾವಿಕ ಮಾತನಾಡಿದರು. ಐಕ್ಯುಎಸಿ ಸಂಯೋಜಕ ದಿಲೀಪ್ ಪತಂಗೆ, ಪುಷ್ಪಾ ಕೋರೆ, ಡಾ. ಮಾರುತಿಕುಮಾರ, ಬಾ. ನಾಗರೆಡ್ಡಿ, ನಾಗಭೂಷಣ ಕೆ, ಶಕೀಲ್ ಅಹ್ಮದ್, ಬಾಬುಸಿಂಗ್, ಶಾಂತಲಿಂಗ ಧಬಾಲೆ, ಹಣಮಂತ ದಾಸೂರೆ, ಡಾ. ರೂಪೇಶ್ ಭೋಸ್ಲೆ ಮೊದಲಾದವರು ಇದ್ದರು.

ಈ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಾಗೂ ಎನ್ನೆಸ್ಸೆಸ್ ಶಿಬಿರಕ್ಕೆ ನೆರವಾದ ಪ್ರಾಧ್ಯಾಪಕರಿಗೆ ವಿಶೇಷ ಸನ್ಮಾನ ಮಾಡಲಾಯಿತು.

ವೈಷ್ಣವಿ ನಿರೂಪಿಸಿದರು. ಭವಾನಿ ಸ್ವಾಗತಿಸಿದರು. ರೇಣುಕಾ ವಂದಿಸಿದರು.


## ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆದ ರಥೋತ್ಸವ

# ಶಿವಲಿಂಗೇಶ್ವರ ಮಹಿಮೆ ಅಪಾರೆ; ರಾಜಶೇಖರ ಪಾಟೀಲ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ಶ್ರೀ ಶಿವಲಿಂಗೇಶ್ವರ ಮಹಿಮೆ ಅಪಾರವಾಗಿದೆ ಎಂದು ಮಾಜಿ ಮಂತ್ರಿ ರಾಜಶೇಖರ್ ಪಾಟೀಲ್ ತಾಲೂಕಿನ ಖೇಳಗಿ ಗ್ರಾಮದ ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವದ ರಥೋತ್ಸವ ಧರ್ಮ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು. ಈ ಮಠದ ಪೀಠಾಧಿಪತಿಗಳಾದ ಶಿವಲಿಂಗೇಶ್ವರ ಸ್ವಾಮಿಗಳು ಮಠದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದರು. ನಾನು ಈ ಕ್ಷೇತ್ರದ ಶಾಸಕನಾಗಿ ಸಚಿವನಾಗಿ ಈ ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಅಭಿವೃದ್ಧಿಪಡಿಸಿದ್ದೇನೆ ಎಂದು ಸ್ಮರಿಸಿದರು. ಮಠದ ಪೀಠಾಧಿಪತಿಗಳಾದ ಶಿವಲಿಂಗೇಶ್ವರ ಸ್ವಾಮಿಗಳು ಮಾತನಾಡಿ ಶ್ರೀ ಮಠ ಪುರಾತನವಾದ ಮಠವಾಗಿದ್ದು ಯಡಿಯೂರು ಸಿದ್ದಲಿಂಗೇಶ್ವರ ಸಮಕಾಲೀನವರು ಶಿವಲಿಂಗೇಶ್ವರ ಸ್ವಾಮಿಗಳು ಆಗಿದ್ದಾರೆ ಎಂದು ತಿಳಿಸಿದರು. ಭಕ್ತರ ಸಹಕಾರದಿಂದ ಶಿವಲಿಂಗೇಶ್ವರ ಮಠ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದರು. ಪ್ರತಿ ವರ್ಷ ನೀಡುವ ಶ್ರೀ ಶಿವಲಿಂಗೇಶ್ವರ ಶ್ರೀ



ಪ್ರಶಸ್ತಿಯನ್ನು ಬೀದರ್ ನ ಖ್ಯಾತ ಹೃದಯ ತಜ್ಞರಾದ ಚಂದ್ರಕಾಂತ್ ಗುದುಗೆ ದಂಪತಿಗಳಿಗೆ ಪ್ರಧಾನ ಮಾಡಲಾಯಿತು.

ಹುಲುಸೂರಿನ ಶಿವಾನಂದ ಮಹಾಸ್ವಾಮಿಗಳು ಮಾತನಾಡಿ ವರ್ಷದಿಂದ ವರ್ಷಕ್ಕೆ ಜಾತ್ರೆಗೆ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷ ತಂದಿದೆ ಎಂದರು. ಭಕ್ತರು ಇಂತಹ ಉತ್ಸವಗಳಿಗೆ ತನು ಮನ ದಾಸೋಹ ಮಾಡಬೇಕು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಸರ್ವಧರ್ಮ ಜನತೆ ಸಭೆಯಲ್ಲಿ ಪಾಲ್ಗೊಂಡು ಶಿವಲಿಂಗೇಶ್ವರ ದರ್ಶನ ಪಡೆದರು.ಈ ಒಂದು ಕಾರ್ಯಕ್ರಮದಲ್ಲಿ ಹಲವಾರು ಮಠಾಧೀಶರು ಧರ್ಮ ಸಭೆಯಲ್ಲಿ ಪಾಲ್ಗೊಂಡು ಆಶೀರ್ವಚನ ನೀಡಿದರು ಹಿರನಾಗಾಂವ ಶ್ರೀಗಳು ಉಪಸ್ಥಿತರಿದ್ದರು.

# ಬಾಬು ಜಗಜೀವನರಾಮ ರವರ ಪ್ರತಿಮೆಗೆ ಮಾಲಾರ್ಪಣೆ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ ಭಾರತದ ಮಾಜಿ ಉಪ ಪ್ರಧಾನಿ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂ ರವರ 119ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಏಪ್ರಿಲ್ 5 ರಂದು ಬೆಳಿಗ್ಗೆ 9.30 ಗಂಟೆಗೆ ಕಲಬುರಗಿ ನಗರದ ಟೌನ್‌ಹಾಲ್‌ದಲ್ಲಿನ ಡಾ. ಬಾಬು ಜಗಜೀವನರಾಂ ಪ್ರತಿಮೆಗೆ ದಕ್ಷಿಣ ಮತ್ತು ಕ್ಷೇತ್ರ ಶಾಸಕರಾದ ಅಲ್ಲಮಪ್ರಭು ಪಾಟೀಲ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಮಹಾನಗರ ಪಾಲಿಕೆಯ ಆಯುಕ್ತರಾದ ಅವಿನಾಶ್ ಶಿಂಧೆ, ಜಯಂತೋತ್ಸವ ಆಚರಣೆ ಸಮಿತಿಯ ಅಧ್ಯಕ್ಷ ಮಲ್ಲಿಕಾರ್ಜುನ ದೊಡ್ಮನಿ ಸೇರಿದಂತೆ ಸಮಾಜದ ಮುಖಂಡರು ಮಾಲಾರ್ಪಣೆ ಮಾಡಿದರು.

# ಬಾಬು ಜಗಜೀವನರಾಂ ದೇಶದ ನಿಜವಾದ ಅನ್ನದಾತ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ದೇಶವು ಆಹಾರದ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ಹಸಿರು ಕ್ರಾಂತಿಯ ಮೂಲಕ ದೇಶದ ಹಸಿವನ್ನು ನೀಗಿಸಿದ ಮಹಾನ್ ಚೇತನ ಡಾ. ಬಾಬು ಜಗಜೀವನರಾಂ ಎಂದು ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದರು.

ಭಾನುವಾರ ನಗರದ ಇಂದಿರಾ ಸ್ಮಾರಕ ಭವನದಲ್ಲಿ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಭಾರತದ ಮಾಜಿ ಉಪ ಪ್ರಧಾನಿ, ಹಸಿರುಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂ ರವರ 119 ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭಾರತವು ಹಸಿವಿನಿಂದ ಬಳಲುತ್ತಿದ್ದ ಕಾಲದಲ್ಲಿ ಕೃಷಿ ಸಚಿವರಾಗಿ ಡಾ. ಬಾಬು ಜಗಜೀವನರಾಂ ಅವರು ತಂದ ಕ್ರಾಂತಿಕಾರಿ ಬದಲಾವಣೆಗಳಿಂದಾಗಿ ಇಂದು ನಾವು ಆಹಾರ ರಫ್ತು ಮಾಡುವ ಹಂತಕ್ಕೆ ತಲುಪಿದ್ದೇವೆ. ಅವರು ಈ ದೇಶದ ಪಾಲಿಗೆ ನಿಜವಾದ ಅನ್ನದಾತ ಎಂದು ತಿಳಿಸಿದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರ ನಂತರ ಶೋಷಿತ ವರ್ಗಗಳ ಹಕ್ಕುಗಳಿಗಾಗಿ ಸಂಸತ್ತಿನಲ್ಲಿ ಪ್ರಬಲವಾಗಿ ಧ್ವನಿ ಎತ್ತಿದವರು ಬಾಬುಜೀ. ಅವರ ಹೋರಾಟ ಮತ್ತು ದಕ್ಷ ಆಡಳಿತ ಯುವ ಪೀಳಿಗೆಗೆ ಮಾದರಿ. ಇತಿಹಾಸವನ್ನು ಮರೆತವರು ಇತಿಹಾಸ ಸೃಷ್ಟಿಸಲಾರರು" ಎಂಬ ಅಂಬೇಡ್ಕರ್ ಅವರ ಮಾತಿನಂತೆ, ಮಹಾನ್ ಪುರುಷರ ಸಾಧನೆಗಳನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯ. ಕೇವಲ ಭಾಷಣಕ್ಕೆ ಸೀಮಿತವಾಗದೆ ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್ ಅವರು ಮಾತನಾಡಿ ಸಮಾಜದ ಅಭಿವೃದ್ಧಿಗೆ ಶಿಕ್ಷಣವೇ ಏಕೈಕ ದಾರಿ, ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನರಾಂ ಅವರು ತೋರಿದ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು. ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪೋಷಕರ ಮೊದಲ ಆದ್ಯತೆಯಾಗಬೇಕು. ಶಿಕ್ಷಣವಂತರಾದಾಗ ಮಾತ್ರ ಸಮಾಜದಲ್ಲಿ ಗೌರವಯುತ ಸ್ಥಾನಮಾನ ಪಡೆಯಲು ಸಾಧ್ಯ ಎಂದು ಅವರು ತಿಳಿಸಿದರು.

ನಮ್ಮಲ್ಲಿ ಒಗ್ಗಟ್ಟಿದ್ದರೆ ಮಾತ್ರ ಯಾವುದೇ ಗುರಿಯನ್ನು ಸಾಧಿಸಲು ಸಾಧ್ಯ. ಭಿನ್ನಾಭಿಪ್ರಾಯಗಳನ್ನು ಮರೆತು ನಾವೆಲ್ಲರೂ ಒಂದಾಗಿ ಸಮಾಜದ ಏಳಿಗೆಗಾಗಿ ಶ್ರಮಿಸಬೇಕು ಎಂದು ಹೇಳಿದರು. ರಾಜ್ಯ ಸರ್ಕಾರದ ಅನ್ನಭಾಗ್ಯ, ಗೃಹಲಕ್ಷ್ಮಿ, ಯುವನಿಧಿ ಮತ್ತು ಗೃಹಜ್ಯೋತಿ ಯೋಜನೆಗಳು ಬಡವರು ಹಾಗೂ ದೀನದಲಿತರ ಬಾಳಿಗೆ ಆಸರೆಯಾಗಿವೆ. ಈ ಯೋಜನೆಗಳಿಂದ ಅನೇಕ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ಮಾತನಾಡಿ ಬಾಬುಜಿಯವರು ದೇಶದ ಹಸಿರು ಕ್ರಾಂತಿಯ ಹರಿಕಾರರು. ಕೃಷಿ ಸಚಿವರಾಗಿ ಅವರು ತಂದ ಸುಧಾರಣೆಗಳು ಭಾರತವನ್ನು ಆಹಾರದ ಸ್ವಾವಲಂಬನೆಯತ್ತ ಕೊಂಡೊಯ್ದವು. ಸಂವಿಧಾನ ರಚನಾ ಸಭೆಯ ಸದಸ್ಯರಾಗಿ ಸಾಮಾಜಿಕ ನ್ಯಾಯಕ್ಕಾಗಿ ಶ್ರಮಿಸಿದ ಅವರ ಕೊಡುಗೆ ಅಪಾರ ಎಂದು ಹೇಳಿದರು. ಕಾರ್ಮಿಕ, ರಕ್ಷಣೆ ಮತ್ತು ಸಂವಹನ ಕ್ಷೇತ್ರಗಳಲ್ಲಿ ಅವರು ನೀಡಿದ ಸುದೀರ್ಘ ಸಂಸದೀಯ ಸೇವೆಯನ್ನು ಸ್ಮರಿಸಬೇಕು, ಬಾಬುಜಿಯವರ ಶಿಸ್ತು ಮತ್ತು ರಾಷ್ಟ್ರಪ್ರೇಮದ ಹಾದಿ ಇಂದಿನ ಯುವಜನತೆಗೆ ದಾರಿದೀಪವಾಗಿದೆ ಎಂದು ತಿಳಿಸಿದರು.

# ಏ, 9ಕ್ಕೆ ಉಚಿತ ನೇತ್ರ ತಪಾಸಣಾ ಶಿಬಿರ




ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣದ ಸಮೀಪದ ಮಾಲಹಳ್ಳಿ ಗ್ರಾಮದ ಆರಾಧ್ಯ ದೈವ ಶ್ರೀ ಮಹಾಳಿಂಗೇಶ್ವರ ದೇವರ ಪಟ್ಟದ ಪೂಜಾರಿ ಪೂಜ್ಯ ಕೆಂಚರಾಯ ಮಾರಾಯರ ಜನ್ಮದಿನದ ಅಂಗವಾಗಿ, ಏಪ್ರಿಲ್ 09ರ ಗುರುವಾರ ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬೃಹತ್ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಜಿಲ್ಲಾ ವೈದ್ಯಾಧಿಕಾರಿಗಳು, ಜಿಲ್ಲಾ ಕುರುಬರ ಸಂಘ ಹಾಗೂ ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಉಚಿತ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು" ಎಂದು ಬಸವರಾಜ ಮಾಮನಿ ಜೋಗಂಡಬಾವಿ ಮನವಿ ಮಾಡಿದ್ದಾರೆ. ಸ್ನೇಹ ಚಿರಾಯು ಯುವಕರ ಸಂಘ, ಸುರಪುರ, ಹುಣಸಗಿ ಹಾಗೂ ಶಹಾಪುರ ತಾಲೂಕು ಕುರುಬ ಸಂಘ ಮತ್ತು ಕೆಂಚರಾಯ ಮಾರಾಯರ ಅಭಿಮಾನಿ ಬಳಗ ಈ ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡಿದೆ. ಶಿಬಿರಕ್ಕೆ ಬರುವವರು ಆಧಾರ್ ಕಾರ್ಡ್, ರೇಷನ್ ಕಾರ್ಡ್, ಪಾಸ್‌ಪೋರ್ಟ್ ಅಳತೆಯ ಫೋಟೋ ಹಾಗೂ ಮೊಬೈಲ್ ಸಂಖ್ಯೆಯನ್ನು ತರತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕ್ಷೇತ್ರಾಧಿಕಾರಿ ಶಿವಶಂಕರ: 7981652521, 9902290993

# ಬಾಬು ಜಗಜೀವನ್ ರಾಮ್ ಜನ್ಮದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣದ ಶ್ರೀಮತಿ ಗಂಗಾಬಾಯಿ ಶಾಂತಗೌಡ ಪೊಲೀಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರವಿವಾರ ಬೆಳಗ್ಗೆ ಬಾಬು ಜಗಜೀವನ್ ರಾಮ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ, ಕಾಯಿ ಕರ್ಪೂರ ಬೆಳುಗುವ ಮೂಲಕ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಡಾ ಯಂಕನಗೌಡ ಪಾಟೀಲ್ ಮಾತನಾಡಿ ಭಾರತದ ಸ್ವಾತಂತ್ರ್ಯ ಹೋರಾಟಗಾರ, ಮಹಾನ್ ಸಾಮಾಜಿಕ ಸುಧಾರಕ ಮತ್ತು ದಲಿತರ ಹಕ್ಕುಗಳಿಗಾಗಿ ಹೋರಾಡಿದ ಹಿರಿಯ ರಾಜಕಾರಣಿ

ಹಸಿರು ಕ್ರಾಂತಿಯ ಹರಿಕಾರ, ದೇಶದ ಪ್ರಪ್ರಥಮ ಉಪಪ್ರಧಾನಿ, ಬಿಹಾರದ ಚಾಂದ್ವಾದಲ್ಲಿ, 05 ಏಪ್ರಿಲ್ 1908 ಜನಿಸಿದ ಬಾಬು ಜಗಜೀವನ್ ರಾಮ್ ರವರ ಜನ್ಮದಿನವನ್ನು 'ಸಮತಾ ದಿವಸ್' ಎಂದು ಆಚರಿಸಲಾಗುತ್ತದೆ ಅವರ ಆದರ್ಶಗಳು, ಬದುಕು, ಬರಹ, ಇಂದಿನ ಯುವಜನತೆ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು. ಇದೇ ವೇಳೆ ಸಿಡಿಸಿ ಸದಸ್ಯ ಸೋಮಲಿಂಗಪ್ಪ ಬಿ ದೊಡ್ಮನಿ, ಕಾಲೇಜಿನ ಅಧೀಕ್ಷಕರು ಸಂಗಮೇಶ ಪಟ್ಟಣಕರ್, ಉಪನ್ಯಾಸಕ ಶರಣಪ್ಪ ಸಾಹು ನಡಕೂರು ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

# ಆತ್ಮರಕ್ಷಣೆ ದೈಹಿಕ ಶಕ್ತಿಯ ಪ್ರದರ್ಶನವಲ್ಲ, ಆತ್ಮವಿಶ್ವಾಸದ ಸಂಕೇತ: ಜಿಲ್ಲಾಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಮಹಿಳೆ ಅಬಲೆಯಲ್ಲ ಸಬಲೆ. ಆತ್ಮರಕ್ಷಣೆ ಎಂಬುದು ಕೇವಲ ದೈಹಿಕ ಶಕ್ತಿಯ ಪ್ರದರ್ಶನವಲ್ಲ, ಅದು ಆತ್ಮವಿಶ್ವಾಸದ ಸಂಕೇತ. ಪ್ರತಿಯೊಬ್ಬ ಹೆಣ್ಣು ಸಂಕಷ್ಟದ ಸಮಯದಲ್ಲಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಕೌಶಲ್ಯ ಹೊಂದಿರಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ತಿಳಿಸಿದರು.

ನಗರದ ವಿಜಯನಗರ ಕಾಲೇಜಿನಲ್ಲಿ ವಿಜಯನಗರ ಕಾಲೇಜ್, ಮಹಿಳಾ ಸಬಲೀಕರಣ ಕೋಶ ಸಹಯೋಗದಲ್ಲಿ ಶನಿವಾರ ಆಯೋಜಿಸಲಾಗಿದ್ದ ಮಹಿಳೆಯರಿಗೆ ಸ್ವ-ಯಂ ರಕ್ಷಣೆ ಕುರಿತ ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ವೈದ್ಯಕೀಯ, ಕಲೆ, ವಾಸ್ತುಶಿಲ್ಪ, ಉದ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಅದಷ್ಟೇ ಅಲ್ಲದೇ ಬಾಹ್ಯಾಕಾಶ ಸಂಶೋಧನೆಯಂತಹ ಉನ್ನತ ಕ್ಷೇತ್ರಗಳಲ್ಲೂ ಮಹಿಳೆಯರು ಮುನ್ನುಗ್ಗುತ್ತಿರುವುದು ಹೆಮ್ಮೆಯ ಸಂಗತಿ. ಇಷ್ಟೆಲ್ಲಾ ಸಬಲೀಕರಣಗೊಳ್ಳುತ್ತಿದ್ದರು ಇಂದಿಗೂ ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯ ಪ್ರಕರಣಗಳು ಮಾತ್ರ ಕಡಿಮೆಯಾಗಿಲ್ಲ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಬಲರಾಗಬೇಕಿದೆ. ಈ ನಿಟ್ಟಿನಲ್ಲಿ ಪೋಷಕರು ಸಹ ಕೇವಲ ಹೆಣ್ಣು ಮಕ್ಕಳಿಗೆ ಸುರಕ್ಷಿತವಾಗಿರು ಎಂದು ಹೇಳುವುದಕ್ಕಿಂತ ಹೆಚ್ಚಾಗಿ, ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳನ್ನು, ಗುರು ಹಿರಿಯರನ್ನು ಗೌರವಿಸುವ ಉತ್ತಮ ಸಂಸ್ಕಾರ ಕಲಿಸಬೇಕು. ಆಗದಾಗ ಸಮಾಜದಲ್ಲಿ ನಡೆಯುವ ಶೇ. 99. ರಷ್ಟು ಕೃತ್ಯಗಳನ್ನು ತಡೆಯಬಹುದು.

ಆದರೆ ಇಂದಿನ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶದಲ್ಲಿ ಮಹಿಳೆಯರ ಸುರಕ್ಷತೆ ಮುಖ್ಯ. ಎಲ್ಲಾ ಸಂದರ್ಭದಲ್ಲೂ ಕೇವಲ ಕಾನೂನು



ಮತ್ತು ಪೊಲೀಸ್ ವ್ಯವಸ್ಥೆಯಿಂದ ಮಾತ್ರ ಸುರಕ್ಷತೆ ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ಸಮಾಜದಲ್ಲಿ ಉಂಟಾಗುವ ಸಂಕಷ್ಟದ ಸಂದರ್ಭಗಳನ್ನು ಎದುರಿಸಲು ಆತ್ಮರಕ್ಷಣಾ ತಂತ್ರಗಳನ್ನು ಕಲಿಯುವುದು ಅನಿವಾರ್ಯತೆ ಎಂದು ತಿಳಿಸಿದ ಅವರು, ಮಹಿಳಾ ಹಕ್ಕುಗಳು ಮತ್ತು ತುರ್ತು ಸಂದರ್ಭದಲ್ಲಿ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ ಮಾತನಾಡಿ, ಮಹಿಳಾ ಸಬಲೀಕರಣ ಎಂದರೆ ಸ್ವೇಚ್ಛಾಚಾರವಲ್ಲ. ಬದಲಿಗೆ ಸರಿ ತಪ್ಪು ವಿಮರ್ಶಿಸಿ ಯಾವುದು ಸರಿ ಇದೆ ಎಂಬುದನ್ನರಿತು ಮಾಡುವುದು ತಮ್ಮ ಜವಾಬ್ದಾರಿ. ವಿದ್ಯಾರ್ಥಿಗಳು ಪೋಷಕರು ನೀಡಿದ ಶಿಕ್ಷಣ ಮತ್ತು ಅವಕಾಶಗಳನ್ನು ಬಳಸಿಕೊಂಡು ಸಮಾಜದಲ್ಲಿ ಘನತೆಯ ವ್ಯಕ್ತಿಗಳಾಗಿ ಬಾಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಇಂದಿನ ಜಗತ್ತಿನಲ್ಲಿ ಮಾಹಿತಿಯ ಕೊರತೆಯಿಲ್ಲ, ಆದರೆ ಆಕರ್ಷಕವಾಗಿರುವುದಕ್ಕೆ ಮಾರುಹೋಗದೆ ಜೀವನಕ್ಕೆ ಪೂರಕವಾದುದನ್ನ ಆಯ್ದುಕೊಳ್ಳಬೇಕು. ದೈಹಿಕ ದೌರ್ಜನ್ಯದ ವಿರುದ್ಧ ಆತ್ಮರಕ್ಷಣೆ ಕಲಿಯುವುದು ಎಷ್ಟು ಮುಖ್ಯವೋ, ಸಾಮಾಜಿಕ ಮಾಧ್ಯಮಗಳ ಕೆಟ್ಟ ಪ್ರಭಾವದಿಂದ ಉಂಟಾಗುವ ಮಾನಸಿಕ ದೌರ್ಜನ್ಯದಿಂದ ರಕ್ಷಿಸಿಕೊಳ್ಳುವುದು ಅಷ್ಟೇ ಮುಖ್ಯ ಎಂದರು. ಮಹಿಳಾ ಸಬಲೀಕರಣ ಕೋಶ ಸಂಯೋಜಕಿ ಡಾ.ಸುಷ್ಮಾ ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಹಿಂದೆ ಮಹಿಳೆ ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಪತಿ ಹಾಗೂ ವೃದ್ಧಾಪ್ಯದಲ್ಲಿ ಮಕ್ಕಳ ರಕ್ಷಣೆಯಲ್ಲಿ ಇರಬೇಕಿತ್ತು. ಆದರೆ ಇಂದು ಮಹಿಳೆ ತಾನೇ ಸಬಲಳಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತು ಎಲ್ಲರನ್ನೂ ರಕ್ಷಿಸುವ ಹಂತಕ್ಕೆ ತಲುಪಿದ್ದಾಳೆ. ಅದರಂತೆ ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರಂತಹ ಸಾಧಕಿಯರು ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ.

ಅದೇ ರೀತಿ ಒಂದು ಕಡೆ ಸಾಧಕಿಯರ ಪಟ್ಟಿ ಬೆಳೆಯುತ್ತಿದ್ದರೆ, ಮತ್ತೊಂದೆಡೆ ಮಹಿಳೆಯರ ಮೇಲಿನ ದೌರ್ಜನ್ಯಗಳು ಸಹ ಏರಿಕೆಯಾಗುತ್ತಿರುವುದು ಆತಂಕಕಾರಿ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು. ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯೂರೋ (ಓಅಖ಼) ವರದಿಯ ಪ್ರಕಾರ ಶೇ. 40ರಷ್ಟು ಮಹಿಳೆಯರು ಇಂದಿಗೂ ಮನೆ ಮತ್ತು ಕೆಲಸದ ಸ್ಥಳಗಳಲ್ಲಿ ಅಸುರಕ್ಷಿತ ಭಾವನೆ ಹೊಂದಿದ್ದಾರೆ. ಶೇ.90.2ರಷ್ಟು ಅಪಹರಣ ಪ್ರಕರಣಗಳು, ಶೇ.31ರಷ್ಟು ಪತಿಯಿಂದಲೇ ಕಿರುಕುಳ ಹಾಗೂ ಶೇ.18ರಷ್ಟು ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ.

ಕೇವಲ ಕೆಲವು ಮಹಿಳೆಯರು ಸಾಧನೆ ಮಾಡುವುದು ಸಬಲೀಕರಣದ ಮಾನದಂಡವಲ್ಲ. ಸಾಮಾನ್ಯ ಮಹಿಳೆಯ ಮನೆ, ಮನಸ್ಸು ಮತ್ತು ಜೀವನ ಸಬಲವಾದಾಗ ಮಾತ್ರ ಸಬಲೀಕರಣಕ್ಕೆ ನಿಜವಾದ ಅರ್ಥ ಸಿಗಲಿದೆ. ಮಹಿಳಾ ಸಬಲೀಕರಣವು ಕೇವಲ ಮಹಿಳೆಯರಿಗೆ ಸೀಮಿತವಾದ ವಿಷಯವಲ್ಲ. ಇದು ಸ್ತ್ರೀ ಮತ್ತು ಪುರುಷರಿಬ್ಬರ ಸಮಾನ ಪ್ರಯತ್ನದಿಂದ ಸಾಧ್ಯ. ಸಮಾಜವು ಒಂದು ಹಕ್ಕಿಯಿದ್ದಂತೆ, ಅದಕ್ಕೆ ಸ್ತ್ರೀ ಮತ್ತು ಪುರುಷ ಎಂಬ ಎರಡು ರೆಕ್ಕೆಗಳು ಬಲವಾಗಿದ್ದಾಗ ಮಾತ್ರ ಸಮಾಜ ಪ್ರಗತಿ ಹೊಂದಲು ಸಾಧ್ಯ ಎಂದರು.

ಈ ವೇಳೆ ವಿಜಯನಗರ ಮಹಾವಿದ್ಯಾಲಯ ಆಡಳಿತ ಮಂಡಳಿ ಅಧ್ಯಕ್ಷ ಎನ್. ಮಲ್ಲಿಕಾರ್ಜುನ ಮೆಟ್ರಿ, ಪ್ರಾಂಶುಪಾಲರಾದ ಮಹಾಂತೇಶ್ ಎನ್. ಆರಾಧ್ಯಮಠ, ಕಿರ್ಲೋಸ್ಕರ್ ಎವಿ ಕ್ಲಬ್ ನ ಜಂಟಿ ಕಾರ್ಯದರ್ಶಿ ಭಾಗ್ಯ, ವಕೀಲೆ ಅನಿತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಹಿರಿಯ ಜೀವಿ ಚೆನ್ನಬಸಪ್ಪ ಹೊಂಡಾಳೆ ಇನ್ನಿಲ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲೂಕಿನ ಡೋಣಗಾಂವ (ಎಂ) ಗ್ರಾಮದ ಹಿರಿಯ ಜೀವಿ ಚೆನ್ನಬಸಪ್ಪ (96) ಅವರು ರವಿವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ನಿಧನ ಹೊಂದಿದ್ದಾರೆ.

ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದಿಂದ ಮೃತರು ಅಗಲಿದ್ದಾರೆ. ಸೋಮವಾರ ಬೆಳಗ್ಗೆ 11 ಗಂಟೆಗೆ ಡೋಣಗಾಂವ (ಎಂ) ಸ್ವಗ್ರಾಮದ ಕೈತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

# ವರಾಹಿ ಜುವೆಲರ್ಸ್‌ಯಿಂದ ಚಿನ್ನಾಭರಣ ಪ್ರದರ್ಶನ ಮಾರಾಟ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ರಾಯಲ್ ಫೋರ್ಟ್ ಹೋಟೆಲ್ ನಲ್ಲಿ ಇಂದು ಮತ್ತು ನಾಳೆ ಎರಡು ದಿನಗಳ ಕಾಲ ಹೈದರಾಬಾದ್ ಮೂಲದ ಕಂಪನಿ ವರಾಹಿ ಜೆವೆಲರ್ಸ್ ವತಿಯಿಂದ ಚಿನ್ನಾಭರಣಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ ಎಂದು ಕಂಪನಿಯ ಎಂಡಿ ಸಂದೀಪ್ ಕರ್ಣಂ ತಿಳಿಸಿದ್ದಾರೆ.

ಇಂದು ಚಿನ್ನಾಭರಣಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ಣಂ, ವಿವಿಧ ಬಗೆಯ ಸಿಲ್ವರ್ ಮತ್ತು ಗೋಲ್ಡನ್ ಆರ್ನಮೆಂಟ್ಸ್‌ಗಳ ಖರೀದಿಗಾಗಿ ಬಳ್ಳಾರಿ ಜನರು ಹೈದರಾಬಾದ್ ನಗರಕ್ಕೆ ಹೋಗುತ್ತಿದ್ದರು, ಇದನ್ನು

ಮನಗಂಡ ವರಾಹಿ ಗೋಲ್ಡ್ ಕಂಪನಿ ಬೆಳ್ಳಿ ಮತ್ತು ಚಿನ್ನಾಭರಣಗಳನ್ನು ನಗರದ ಜನತೆಯ ಅನುಕೂಲಕ್ಕಾಗಿ ರಾಯಲ್ ಪೋರ್ಟ್ ಹೋಟೆಲ್ ನಲ್ಲಿ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ,

ನಾವು ಕಳೆದ ಐದಾರು ವರ್ಷಗಳಿಂದ ಈ ಎಕ್ಸಿಬಿಷನ್ ಕಾರ್ಯಕ್ರಮವನ್ನು ಏರ್ಪಡಿಸುತ್ತೇವೆ ಬಳ್ಳಾರಿ ಜನತೆಯ ಉತ್ತಮ ಪ್ರತಿಕ್ರಿಯೆಯಿಂದಾಗಿ ನಾವು ಮತ್ತೆ ಇಂದು ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಿದ್ದೇವೆ, ಈ ಪ್ರದರ್ಶನ ಮತ್ತು ಮಾರಾಟದಲ್ಲಿ ವಿವಿಧ ಬಗೆಯ ವಿವಿಧ ಮಾದರಿಯ ಚಿನ್ನ ಮತ್ತು ಬೆಳ್ಳಿಯ ಆಭರಣಗಳಿದ್ದು, ಮದುವೆ

ಕಾರ್ಯಕ್ರಮಗಳ ಈ ಸುಗ್ಗಿಯಲ್ಲಿ ನಗರದ ಜನತೆ ನಮ್ಮ ಮಳಿಗೆಗೆ ಒಮ್ಮೆ ಭೇಟಿ ನೀಡಿ ತಮಗೆ ಇಷ್ಟವಾದಂತಹ ಆಭರಣಗಳನ್ನು ಖರೀದಿಸಬಹುದು ಎಂದು ತಿಳಿಸಿದರು.

ಸದ್ಯ ಈಗ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ತುಸು ಕಡಿಮೆಯಾಗಿದ್ದು ಈಗ ಸಾರ್ವಜನಿಕರು ತಮಗೆ ಬೇಕಾದಂತಹ ಚಿನ್ನಾಭರಣಗಳನ್ನು ಕಡಿಮೆ ಬೆಲೆಗೆ ಖರೀದಿಸಬಹುದು

ನಗರದ ಜನತೆ ಈ ಸದಾಣಟಿಜಜಜಿಟಿಜಜವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ವಿನಂತಿಸಿದರು. ಜೊತೆಗೆ ಅತಿ ಶೀಘ್ರದಲ್ಲಿ ಬಳ್ಳಾರಿ ನಗರದಲ್ಲಿ ನಮ್ಮ ಕಂಪನಿಯ ಶೋರೂಮ್ ಆರಂಭಿಸಲು ಕಂಪನಿ ಉತ್ಸುವಾಗಿದೆ ಎಂದು ತಿಳಿಸಿದರು.

ಈ ಪ್ರದರ್ಶನ ಮತ್ತು ಮಾರಾಟವನ್ನು ನಗರದ ಮುಖಂಡರಾದ ಉಜ್ವಲಾ ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು.

# ಬಾಬು ಜಗಜೀವನ್ ರಾಮ್ 119ನೇ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ, ಪಿರಿಯಾಪಟ್ಟಣ

ಕಾಂಗ್ರೆಸ್ ಪಕ್ಷದ ವರ್ತನೆಯನ್ನು ಅಂದೆ ಡಾ. ಬಾಬು ಜಗಜೀವನ್ ರಾಮ್ ಧಿಕ್ಕರಿಸಿ ಹೊಸ ರಾಜಕೀಯ ಪಕ್ಷವನ್ನು ಸೇರಿದರು ಎಂದು ಮಹಿಳಾ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕ ಡಾ.ಡಿಇ ರಮೇಶ್ ಆರೋಪಿಸಿದ್ದರು.

ಪಟ್ಟಣದಲ್ಲಿರುವ ತಾಲೂಕು ಆಡಳಿತ ಪವನದ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಹಸಿರು ಕ್ರಾಂತಿಯ ಹರಿಕಾರ ಎನಿಸಿಕೊಂಡ ಡಾ. ಬಾಬು ಜಗಜೀವನ್ ರಾಮ್ 119ನೇ ಜಯಂತಿಯ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ. ಬಿಆರ್ ಅಂಬೇಡ್ಕರ್ ನಿಧನದ ಅಂತ್ಯಕ್ರಿಯೆ ಸಂದರ್ಭದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ಪಕ್ಷದ ವರ್ತನೆಯ ಬಗ್ಗೆ ಬಹಿರಂಗವಾಗಬಾರದು ಎಂಬ ಉದ್ದೇಶದಿಂದ ಬಾಬು ರವರು ನೆರವಿಗೆ ನಿಂತರು.

ಆದರೂ ಸಹ ನಂತರದ ದಿನಗಳಲ್ಲಿ ದಲಿತ ಎಂಬ ಕಾರಣಕ್ಕೆ ಅವರನ್ನು ಕಡೆಗಣಿಸಿ ರಾಜಕೀಯದಲ್ಲಿ ಅಸ್ಥಿರಗೊಳಿಸಲು ಮುಂದಾದ ಪರಿಣಾಮ ಬೇರೆ ಪಕ್ಷದ ನಾಯಕರು ಇವರನ್ನು ಕರೆತಂದು ಗೌರವಿಸಲಾಯಿತು.

ಜಾತ್ಯಾತೀತವಾಗಿ ಬೆಳೆದು ದೇಶದ ಭದ್ರತೆ ಮತ್ತು ಆಹಾರ ಸುಧಾರಣೆಯಲ್ಲಿ ಪರಿಣಿತರಾಗಿದ್ದ ಬಾಬು ಜಗಜೀವನ್ ರಾಮ್ ರವರನ್ನು ಒಂದು ಜನಾಂಗಕ್ಕೆ ಹೋಲಿಸಿ ಪ್ರಸ್ತುತ ದಿನಗಳಲ್ಲಿ ಕಡೆಗಣಿಸುತ್ತಿರುವುದು ಅತ್ಯಂತ ದುರ್ದೈವ ಸಂಗತಿಯಾಗಿದೆ ಎಂದು ವಿಷದ ವ್ಯಕ್ತಪಡಿಸಿದ್ದರು.


ಕರ್ನಾಟಕ ಮಾದರ ಮಹಾಸಭಾ (ರಿ) ತಾಲೂಕು ಅಧ್ಯಕ್ಷ ಸೀಗೂರು ವಿಜಯ್ ಕುಮಾರ್ ಮಾತನಾಡಿ ಆಧುನಿಕತೆಯ ವಿದ್ಯಾವಂತರಿಂದ ಶೋಷಣೆ ಮತ್ತು ಜಾತಿ ತಾರತಮ್ಯ ಹೆಚ್ಚಾಗಲು ಅರಿವಿನ ಕೊರತೆ ಹೆಚ್ಚಾಗಿದೆ ಇದನ್ನು ಸರಿಪಡಿಸಲು ಅರಿವು ಮೂಡಿಸುವ ಕೆಲಸ ಎಲ್ಲರಿಂದ ಆಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ತಾಲೂಕು ತಹಶೀಲ್ದಾರ್ ಜೆ ನಿಸರ್ಗ ಪ್ರಿಯ ಮಾತನಾಡಿ ಜಾತಿ ವ್ಯವಸ್ಥೆ ಬೂದಿ ಮುಚ್ಚಿದ ಕೆಂಡದಂತೆ ಇದ್ದು ಯಾವಾಗಲೂ ಅದು ಸುಡುತ್ತಿರುತ್ತದೆ ಆದ್ದರಿಂದ ಸಮಾನತೆ ಮತ್ತು ಸಹ ಬಾಳ್ವೆಗಾಗಿ ಪಣತೊಡಬೇಕಾಗಿದೆ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎನ್ ಬಿ ಚಂದ್ರಶೇಖರ್ ಹಿಂದುಳಿದ ವರ್ಗಗಳ ಇಲಾಖೆಯ ಸಹಾಯಕ ನಿರ್ದೇಶಕ ಕೃಷ್ಣೆಗೌಡ ತಾ ಪಂ ವ್ಯವಸ್ಥಾಪಕ ರಂಗನಾಥ್ ಆದಿ ಜಾಂಬವ ಕ್ಷೇಮ ಅಭಿವೃದ್ಧಿ ಸಂಘದ ತಾ ಅಧ್ಯಕ್ಷ ಸಿಜಿ ರವಿ ದಲಿತ ಮುಖಂಡರಾದ ಎಸ್ ರಾಮು ಮತ್ತು ಪಿ ಮಹಾದೇವ್. ಬೂತನಹಳ್ಳಿ ಶಿವಣ್ಣ. ಅಂಬಾರಿ ರವಿ ಸೇರಿದಂತೆ ವಿವಿಧ ಸಂಘ ಸಂಸ್ಥೆಯ ಮುಖಂಡರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.



# ಭಾರತಿಯ ಆರ್ಥಿಕತೆಯನ್ನು ರೂಪಿಸುತ್ತದೆ ಕಂಪನಿ ಕಾರ್ಯದರ್ಶಿ ವೃತ್ತಿ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆಯ ಸಭಾಭವನದಲ್ಲಿ ಐಕ್ಯೂಎಸಿ ಮತ್ತು ವಾಣಿಜ್ಯಶಾಸ್ತ್ರ ವಿಭಾಗಯು ಒಂದು ದಿನದ ಕಂಪನಿ ಕಾರ್ಯದರ್ಶಿ ವೃತ್ತಿಯ ವಿಶೇಷ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಮಲ್ಲಿಕಾರ್ಜುನ ಮೇಟ್ರಿ ಮತ್ತು ಸಿ ಎಸ್ ಪರಮೇಶ್ವರ ಭಟ್, ಮಹಾವಿದ್ಯಾಲಯದ ಪ್ರಾಂಶುಪಾಲರು ಮಹಾಂತೇಶ್ ಎನ್ ಆರಾಧ್ಯಮಠ್ ನೆರವೇರಿಸಿದರು.

ವಿಭಾಗದ ಮುಖ್ಯಸ್ಥರಾದ ಡಾ. ರವಿಕಿರಣ್ ಡಿ ಅವರು ಕಾರ್ಯಕ್ರಮದ ಪ್ರಾಸ್ತವಿಕವಾಗಿ ಕಂಪನಿ ಕಾರ್ಯದರ್ಶಿ ವೃತ್ತಿಯು ಭಾರತಿಯ ಆರ್ಥಿಕತೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ತಿಳಿಸಿದರು.

ಸಿಎಸ್ ಹೇಮಾದ್ರಿಬಾಯಿ, ಡಾ. ಸುಜಯ ಕುಮಾರ, ಶೀನಾಗ, ಶಾಲೋಮ್, ಅಶ್ವಿನಿ, ಮೈಲಾರಪ್ಪ ಮತ್ತು ವಾಣಿಜ್ಯ ವಿಭಾಗದ ವಿದಾರ್ಥಿಗಳು ಹಾಜರಿದ್ದರು.

# ಶಿವಶರಣರು ಸೂಫಿ ಸಂತರು ತೋರಿದ ಮಾರ್ಗದಲ್ಲಿ ಸಾಗೋಣ



• ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ

ವೈವಿಧ್ಯಮಯ ಸಂಸ್ಕೃತಿಯನ್ನು ಪ್ರೀತಿಸೋಣ, ಗೌರವಿಸೋಣ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯೋಣ, ಸೂಫಿ ಸಂತರು, ದಾಸ ಶ್ರೇಷ್ಠರು, ಮಹಾತ್ಮರು, ಶಿವಶರಣರು ತೋರಿದ ಮಾರ್ಗದಲ್ಲಿ ಸಾಗೋಣ ಎಂದು ಸಜ್ಜಾದ ನಶಿನ್ ಮಾಸಾಬಿ ದುರ್ಗಾದ ಸಾಹೇಬ್ ಶಾಹೀದ್ ಹುಸೇನ್ ಫಾರೂಕಿ ಹೇಳಿದರು.

ಪಟ್ಟಣದ ಶ್ರೀ ಗುರು ಕಾತೇಶ್ವರ ಜನ ಕಲ್ಯಾಣ ಸೇವಾ ಪ್ರತಿಷ್ಠಾನದ ವತಿಯಿಂದ ಹಿರೇಮಠ ಸಂಸ್ಥಾನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿಯಲ್ಲಿ ಇಲಿಯಾಸ್ ಪಟೇಲರ ಚೊಚ್ಚಲ ಕೃತಿ ಅತಿಥಿ ಹೃದಯ ಕಾದಂಬರಿ ಮುಖಪುಟ ಅನಾವರಣ ಮಾಡಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಉಪನ್ಯಾಸ ನೀಡಿದ ಮಲ್ಲಯ್ಯಸ್ವಾಮಿ ವಡಿಗೇರಿ ಹೆಣ್ಣು, ಹೊನ್ನು, ಮಣ್ಣು, ಅಧಿಕಾರ, ಅಂತಸ್ತು, ಬಯಸದೆ, ಬದುಕಿನುದ್ದಕ್ಕೂ ಸೇವಾ ಮನೋಭಾವ ಮೈಗೂಡಿಸಿಕೊಂಡರೆ ಭಗವಂತನ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ ಎಂದವರು, ಹಿರೇಮಠದ ಪೀಠಾಧಿಪತಿ ಷ ಬ್ರ ಚನ್ನಬಸವ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಜರುಗುವ ಮಾಸಿಕ ಸತ್ಸಂಗವು

ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿ, ಆಚಾರ, ವಿಚಾರ, ಶ್ರದ್ಧೆ, ಮತ್ತು, ಸಂಪ್ರದಾಯಗಳ ಪಾಠಶಾಲೆ ಎಂದು ಬಣ್ಣಿಸಿದರು.

ಪೀಠಾಧಿಪತಿ ಷ ಬ್ರ ಶ್ರೀ ಚನ್ನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸೋಮನಾಥ ಯಾಳಗಿ ಹಾಗೂ ಯಮನೇಶ ಯಾಳಗಿ ಇವರಿಂದ ಸಂಗೀತ ಕಾರ್ಯಕ್ರಮ ಮೂಡಿ ಬಂತು. ಇದೇ ವೇಳೆ ಮಲ್ಲಮ್ಮ ನುಡಿ ಪತ್ರಿಕೆಯ ಯುಗಾದಿ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಸಾಹಿತಿ ನಿಂಗನಗೌಡ ದೇಸಾಯಿ, ನಿಜಗುಣಿ ವಿಶ್ವಕರ್ಮ, ಪುರಸಭೆ ಸದಸ್ಯ ಭೀಮನಗೌಡ ಮಲ್ಕಾಪುರ, ದೇವಿಂದ್ರ ಕರಡಕಲ್, ನಯೋಮ್ ಖಾಜಿ ಅಬ್ದುಲ್ ರಜಾಕ್ ಸಾಸನೂರ, ಬಂದೇ ನವಾಜ್ ನಾಲತವಾಡ , ಇಲಿಯಾಸ್ ವಡಿಕೇರಿ, ಡಾ ಯಂಕನಗೌಡ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬಸ್ ಬ್ಯಾರಿಕೇಡ್‌ಗೆ ಡಿಕ್ಕಿ, ನಾಲ್ವರಿಗೆ ಗಾಯ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ತಾಲೂಕಿನ ಬೋರಬಂಡಾ ಗ್ರಾಮದ ಬಳಿ ಭಾನುವಾರ ಬೆಳಿಗ್ಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ನಾಲ್ವರು ಗಾಯಗೊಂಡ ಘಟನೆ ನಡೆದಿದೆ.

ದಾವಣಗೆರೆಯಿಂದ ಯಾದಗಿರಿ ಮುಖಾಂತರ ಗುರುಮಠಕಲ್ ಕಡೆಗೆ ರಾಜ್ಯ ಹೆದ್ದಾರಿಯಲ್ಲಿ ಬರುತ್ತಿದ್ದ ಬಸ್, ವೇಗವಾಗಿ ಬರುತ್ತಿದ್ದ ಲಾರಿಯಿಂದ ಆಗುವ ಅಪಘಾತ ತಪ್ಪಿಸಲು ಚಾಲಕ ತಕ್ಷಣ ಬದಿಗೆ ತಿರುಗಿಸಿದ ಪರಿಣಾಮ, ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದಿದೆ.

ಈ ಅಪಘಾತದಲ್ಲಿ ಆನಂದ್ ತಂದೆ ಶಿವಪ್ಪ(30) ಯದ್ಲಾಪುರ ಅವರ ಪಾದ ತುಂಡಾಗಿ ಗಂಭೀರ ಗಾಯವಾಗಿದ್ದು, ಮಂಜುನಾಥ್ ತಂದೆ ನಾರಾಯಣ (25) , ಮೊಹಮ್ಮದ್ ಕಲೀಮುದ್ದೀನ್ (50) ಎನ್ನುವ ಇಬ್ಬರು ಗುರುಮಠಕಲ್ ನಿವಾಸಿಗಳ ಎರಡು ಕಾಲುಗಳಿಗೆ ಗಾಯಗಳಾಗಿವೆ, ಬಾಬು (56) ಸೇಡಂ ತಾಲೂಕಿನ ಕಿಷ್ಟಾಪುರ ನಿವಾಸಿ ಇವರ ಭುಜಕ್ಕೆ ಗಾಯವಾಗಿದೆ ಎಂದು ತಿಳಿದುಬಂದಿದೆ.

ಗಾಯಳುಗಳಿಗೆ ಗುರುಮಠಕಲ್ ಆರೋಗ್ಯ ಸಮುದಾಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ತಕ್ಷಣವೇ ಯಾದಗಿರಿ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ.

# ಕರವೇ ಕಾರ್ಯಾಲಯದಲ್ಲಿ ಬಾಬು ಜಗಜೀವನರಾಮ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

ನಗರದ ಕರವೇ ಕಾರ್ಯಾಲಯದಲ್ಲಿ ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪಪ್ರಧಾನಿ ಸ್ವಾತಂತ್ರ ಹೋರಾಟಗಾರರು ಸಮಾಜ ಸೇವಕರದ ಡಾ॥ಬಾಬು ಜಗಜೀವನರಾಮ್ ರವರ 119ನೇ ಜಯಂತಿಯ ನಿಮಿತ್ಯ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷರಾದ ಶ್ರೀ ಟಿ.ಎನ್.ಭೀಮುನಾಯಕ ರವರು ಬಾಬೂಜೀ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತಿ ಆಚರಣೆ ಮಾಡಿ ಮಾತನಾಡಿದ ಅವರು,

ಬಾಬು ಜಗನಜೀವನರಾಮ್ ನಮ್ಮ ದೇಶದ ಅತ್ಯಂತ ಪ್ರಸಿದ್ದ ನಾಯಕರಲ್ಲಿ ಒಬ್ಬರು. ವಿವಿಧ ಸಂಧರ್ಭಗಳಲ್ಲಿ ಅವರು ವಹಿಸಿದ ನ್ಯಾಯಯುತ ಪಾತ್ರಕ್ಕಾಗಿ ಭಾರತದ ರಾಜಕೀಯ ಸನ್ನಿವೇಶದಲ್ಲಿ ಚಿನ್ನದ ಅಕ್ಷರಗಳಲ್ಲಿ ಉಬ್ಬು ಹಾಕಿದವರಲ್ಲಿ ಅವರ ಹೆಸರು ಕೂಡ ಒಂದು ಎಂದರು.

ಬಾಬು ಜಗಜೀವನರಾಮ್ ಅದ್ಯಯನದ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರವು ಒಂದು ಪ್ರಮುಖವಾದದ್ದು ಮೈಸೂರು ವಿಶ್ವವಿದ್ಯಾಲಯದ ಸಂಶೋದನಾ ಕೇಂದ್ರಗಳು ಮತ್ತು ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ಹೇಳಿದರು.

ದೇಶದ ರೈತರ ಏಳಿಗೆಗಾಗಿ ಮತ್ತು ಸಾಮಾಜಿಕ ಸಮಾನತೆಗಾಗಿ ಅವರು ನೀಡಿದ ಕೊಡುಗೆ ಅಪಾರ. "ಬಾಬೂಜಿ" ಎಂದೇ ಖ್ಯಾತರಾಗಿದ್ದ ಅವರು, ಭಾರತದ ಕೃಷಿ ಕ್ಷೇತ್ರದಲ್ಲಿ ಆಧುನಿಕತೆಯನ್ನು ತರುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಈ ಮಹಾನ್ ಚೇತನದ ವಿಚಾರಗಳು ನಮಗೆ ಸದಾ ಪ್ರೇರಣೆಯಾಗಿರಲಿ.

ಡಾ.ಬಾಬೂಜೀರವರು ದಲಿತ ಸಮಾಜದಲ್ಲಿ ಜನಿಸಿ ಇಡೀ ದೇಶಕ್ಕೆ ಸ್ಫೂರ್ತಿಯಾಗಿ ಬೆಳೆದ ವ್ಯಕ್ತಿಯಲ್ಲೊಬ್ಬರು ವಿಭಿನ್ನ ಸಮಸ್ಯೆಗಳು ಮತ್ತು ಪ್ರದೇಶಗಳ ಕುರಿತು ಬಾಬುಜಿಯವರ ಆಲೋಚನೆಗಳನ್ನು ಪ್ರತಿಬಿಂಬಿಸುತ್ತದೆ ಅಂತಹ ಚಟುವಟಿಕೆಗಳು ಮತ್ತು ವಿಸ್ತರಣೆ ಕಾರ್ಯಕ್ರಮಗಳು ಕೃಷಿ ಆಹಾರಕ್ಕೆ ಸಂಬಂದಿಸಿದ ಕಾರ್ಮಿಕ ಕಲ್ಯಾಣ ಜಾಗೃತೀತತೆ ಸಾಮಾಜಿಕ ಮಹಿಳಾ ಅಧ್ಯಯನ ಮತ್ತು ಬಾಬು ಜಗಜೀವನರಾಮ್ ಅವರ ಕಾರ್ಯಗಳು ಪಾಲಿಸಬೇಕೆಂದು ನುಡಿದರು,

ಈ ಸಂಧರ್ಭದಲ್ಲಿ ಮಲ್ಲು ಮಾಳಿಕೇರಿ, ವಿಶ್ವ–ರಾಜ ಪಾಟೀಲ್, ಅಶೋಕ ನಾಯಕ, ಬಸವರಾಜ ಜಗನಾಥ, ಮಲ್ಲಿಕಾರ್ಜುನ ಕನ್ನಡಿ, ಜನಾರ್ಧನ ಚಾಮನಳ್ಳಿ, ಶರಣು ತಿಂಥಣಿ, ರವಿ ಜಮ್ಮಾರ, ಕಾಶಿನಾಥ ನಾನೇಕ, ನಾಗು ಕಟ್ಟಿಮನಿ, ಶರಣು ಹಬ್ಬಳ್ಳಿ, ವಿಶ್ವ ಯಾದಗಿರಿ, ಎಂ.ಡಿ. ಮುಸ್ತಫ್, ರಮೇಶ.ಡಿ.ನಾಯ ಉಪಸ್ಥಿತರಿದ್ದರು.



# ಬಾಬು ಜಗಜೀವನರಾಂ ಸಾಮಾಜಿಕ ನ್ಯಾಯದ ಹರಿಕಾರ: ಹರ್ಷಲ್ ಭೋಯರ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಮ್ ಅವರು

ಸಾಮಾಜಿಕನ್ಯಾಯಕ್ಕಾಗಿ ಹೋರಾಡಿದ ಅಪ್ರತಿಮ ನಾಯಕರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೇಳಿದರು. ನಗರದ ಜಿಲ್ಲಾ ದಲಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಇಂದು ಜಿಲ್ಲಾ ದಲಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನರಾಂ ಅವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಡಾ.ಬಾಬು ಜಗಜೀವನರಾಮ್ ಅವರು ದೀರ್ಘಕಾಲದ ಸಂಸತ್ತು ಪಟುವಾಗಿ, ಕೇಂದ್ರ ಸರ್ಕಾರದ ಹಲವು ಕ್ಷೇತ್ರಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿರುವುದು ಅಪ್ರತಿಮ ಸಾಧನೆಯಾಗಿದೆ. ಸಾಮಾನ್ಯ ಜನರಿಂದ ಇದು ಸಾಧ್ಯವಿಲ್ಲ ಎಂದ ಅವರು ಕೃಷಿ, ರಕ್ಷಣಾ ಸಚಿವರಾಗಿ , ಉಪಪ್ರಧಾನಿಯಾಗಿ ದೇಶಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ ಎಂದು ಹೇಳಿದರು.

ಬಾಬು.ಬಾಬು ಜಗಜೀವನರಾಂ ಅವರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ್ದಾರೆ. ಅವಶ್ಯಕ ಸಂದರ್ಭದಲ್ಲಿ ಸಂವಿಧಾನ ತಿದ್ದುಪಡಿಯಲ್ಲಿ ಪರಿಣಾಮಕಾರಿ ಕೊಡುಗೆ ನೀಡಿದ್ದಾರೆ ಎಂದರು. ಡಾ.ಬಾಬುಜಗಜೀವನರಾಮ್ ಅವರು ಎಂಟು ಬಾರಿ ಸಂಸದರಾಗಿ ,ಸಚಿವರಾಗಿ ನೀಡಿದ ಕೊಡುಗೆ ಒಂದು ಜೀವನದಲ್ಲಿ ಸಾಧ್ಯವಿಲ್ಲ. ಸಾಮಾಜಿಕ ನ್ಯಾಯಕ್ಕಾಗಿ ಅವರ ಹೋರಾಟ ಸ್ಮರಣೀಯ. ತತ್ವಜ್ಞಾನವನ್ನು ಕೆಲಸದ ರೂಪದಲ್ಲಿ ಅವರು ಕಾರ್ಯರೂಪಕ್ಕೆ ತಂದರು. ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಜವಾಹರಲಾಲ್ ನೆಹರು ಅವರಂತೆ ಇವರ ಕೊಡುಗೆಯು ಅವಿಸ್ಮರಣೀಯವಾಗಿದ್ದು, ಇಂತಹಮಹಾನ್ ನಾಯಕರ ತತ್ವ ಸಿದ್ಧಾಂತಗಳನ್ನು ಎಲ್ಲರೂ ಪರಿಪಾಲಿಸುಂತೆ ಅವರು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಯರಗೋಳ, ವಸತಿಯುತ ಪದವಿ ಕಾಲೇಜು ಉಪನ್ಯಾಸಕರಾದ ಶ್ರೀ ಶಿವಪ್ಪ ಹಣಮಂತ ಅವರು ಡಾ.ಬಾಬು ಜಗಜೀವನರಾಂ ಅವರು ಮಹಾನ್ ನಾಯಕರಲ್ಲಿ ಒಬ್ಬರು. ಸ್ವಾತಂತ್ರ್ಯ ಹೋರಾಟಗಾರ, ಅಸ್ಪೃಶ್ಯತೆ ವಿರುದ್ಧದ ಹೋರಾಟಗಾರ,

ಮುತ್ಸದ್ದಿ ರಾಜಕಾರಣಿ, ದಕ್ಷ ಆಡಳಿತಗಾರರಾಗಿದ್ದರು. ಹಸಿರು ಕ್ರಾಂತಿ ಹರಿಕಾರ, ನವಭಾರತ ನಿರ್ಮಾಣದ ಹರಿಕಾರ, ಎಂದೇ ಖ್ಯಾತಿ ಪಡೆದಿದ್ದಾರೆ. 1961 ರಲ್ಲಿ ಬರ ದಂತಹ ಕಷ್ಟದ ಸಂದರ್ಭದಲ್ಲಿ ಭಾರತದ ಆಹಾರ ಕೊರತೆ ನೀಗಿಸಿದರು. ಪಾಕ್ ಜೊತೆ ಯುದ್ಧದ ಸಂದರ್ಭದಲ್ಲಿ ರಕ್ಷಣಾ ಸಚಿವರಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಕಾರ್ಮಿಕ ಸಚಿವರಾಗಿ ಸಮಾನ ಕೆಲಸಕ್ಕೆ ಸಮಾನ ವೇತನ ಕಾನೂನು ರೂಪಿಸಿದರು. ಕನಿಷ್ಟ ಕೂಲಿ ಗೊತ್ತುವಳಿ, ಭವಿಷ್ಯ ನಿಧಿ, ಇಎ□□□, ಶಿಷ್ಯ ವೇತನ, ವಿವಿಧ ಯೋಜನೆ ಜಾರಿಗೆ ತಂದರು. ಕಾರ್ಮಿಕರ ನ್ಯಾಯ ಮಂಡಳಿ ಅಸ್ತಿತ್ವಕ್ಕೆ ತಂದರು. ಹಲವು ಅಂಚೆ ಕಚೇರಿಗಳ ಸ್ಥಾಪನೆ, ವಾಯು, ನೌಕಾದಳ ಸೈನಿಕರ ವೇತನ ಹೆಚ್ಚಿಸಿದರು. ಸಾಮಾಜಿಕ ಸಮಾನತೆ, ಹಸಿರು ಕ್ರಾಂತಿ ಹರಿಕಾರರಾಗಿ, ಆಧುನಿಕ ಭಾರತದ ನಿರ್ಮಾತೃ ಯಾಗಿ ಅನೇಕ ಕೊಡುಗೆಗಳನ್ನು ನೀಡಿದ್ದಾರೆ ಎಂದು ಹೇಳಿದರು. ಡಾ.ಬಾಬು ಜಗಜೀವನರಾವ್ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ವಿಜಯಕುಮಾರ ಶಿರಗೋಳ ಅವರು, ಡಾ. ಬಾಬು ಜಗಜೀವನ್ ರಾಮ್ ಹಾಗೂ ಡಾ.ಅಂಬೇಡ್ಕರರಂತೆ ಚಿಂತಕರಾಗಬೇಕು. ಮಾನವೀಯ ಮೌಲ್ಯಗಳಿಗೆ ಒತ್ತು ನೀಡುವಂತೆ ತಿಳಿಸಿದರು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಡಾ. ಬಾಬು ಜಗಜೀವನ್ ರಾಮ್ ಅವರ ತತ್ವ ಸಿದ್ಧಾಂತಗಳನ್ನು ಎಲ್ಲರೂ ಪಾಲಿಸಬೇಕು. ಪಾಲಕರು ತಮ್ಮ ಮಕ್ಕಳು ಹಾಗೂ ಯುವ ಜನಾಂಗದಲ್ಲಿ ಡಾ.ಬಾಬು ಜಗಜೀವನರಾಂ ಅವರ ಆದರ್ಶಗಳ ಬಗ್ಗೆ ತಿಳಿಹೇಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಶ್ರೀ ಕುಮುಲಯ್ಯ, ಯುವ ಸಬಲೀಕರಣ ಮತ್ತು ಕ್ರೀಡಾಧಿಕಾರಿ ರಾಜು ಬಾವಿ ಹಳ್ಳಿ ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶ್ರೀ ಚನ್ನಬಸವ ಸ್ವಾಗತಿಸಿದರು. ಚಂದ್ರಶೇಖರ ಗೋಗಿ ಪ್ರಾರ್ಥಿಸಿದರು. ಕಾರ್ಯಕ್ರಮದಲ್ಲಿ

ಸಮಾಜ ಸೇವಕರು ಹಾಗೂ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಇಂದು ಬೆಳಿಗ್ಗೆ ನಗರದ ಜಗಜೀವನರಾಂ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ ಹಾಗೂ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶ್ರೀ ಚನ್ನಬಸವ, ಸಮಾಜದ ಮುಖಂಡರಾದ ಮರಿಯಪ್ಪ ಸೇರಿದಂತೆ ಇತರರು ಮಾಜಿ ಉಪಪ್ರಧಾನಿ ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ ಗೌರವ ಅರ್ಪಿಸಿದರು.

# ಡಾ. ಬಾಬು ಜಗಜೀವನ ರಾಂ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಂ ಅವರ 119 ನೇ ಜನ್ಮ ದಿನಾಚರಣೆಯ ಪ್ರಯುಕ್ತ ಭಾನುವಾರ ನಗರದ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಹತ್ತಿರದ ಡಾ.ಬಾಬು ಜಗಜೀವನ ರಾಂ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಜಿಲ್ಲಾ ಪೊಲೀಸ್ ಅಧೀಕ್ಷಕಿ ಎಸ್.ಜಾಹ್ನವಿ ಪುಷ್ಪನಮನ ಸಲ್ಲಿಸುವ ಮೂಲಕ ಸರಳ ಮತ್ತು ಸಾಂಕೇತಿಕವಾಗಿ ಆಚರಿಸಲಾಯಿತು. ಈ ವೇಳೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೆ ತಿಮ್ಮಪ್ಪ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ವೈ . ಎ ಕಾಳೆ, ತಹಶೀಲ್ದಾರ್ ಶೃತಿ ಎಂ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಆಲಂ ಭಾಷಾ, ನಗರಸಭೆ ಪೌರಾಯುಕ್ತ ಶಿವಕುಮಾರ್, ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಡಾ.ಬಾಬು ಜಗಜೀವನ ರಾಂ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದ ಹೃದಯ ಭಾಗದಲ್ಲಿರುವ ಅಂಬೇಡ್ಕರ್ ವೃತ್ತದಲ್ಲಿ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಮಾಜ ಪರಿವರ್ತಕರಾದ ಬಾಬು ಜಗಜೀವನ ರಾಮ್ ಅವರ ಜಯಂತಿಯನ್ನು ಅತ್ಯಂತ ಭಕ್ತಿ, ಗೌರವ ಹಾಗೂ ವೈಭವದಿಂದ ಆಚರಿಸಲಾಯಿತು.

ಜಯಂತಿ ಅಂಗವಾಗಿ ಡಾ.ಬಾಬು ಜಗಜೀವನ ರಾಮ್ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಅರ್. ಅಂಬೇಡ್ಕರ್ ಅವರ ಪುತ್ಥಳಿಗಳಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾರೀ ಸಂಖ್ಯೆಯಲ್ಲಿ ಭಾಗವಹಿಸಿ, ಮಹಾನಾಯಕರಿಗೆ ಗೌರವ ನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಗುರುಮಠಕಲ್ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ, ಪುರಸಭೆ ಮುಖ್ಯಾಧಿಕಾರಿ ಶರಣಪ್ಪ ಎಮ್, ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕ ಲಾಲಪ್ಪ ತರಾರೆ, ಪುರಸಭೆ ಮಾಜಿ ಅಧ್ಯಕ್ಷ ಭೀಮಶಪ್ಪ ಗುಡಿಸೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ ಅವರು, ಬಾಬು ಜಗಜೀವನ ರಾಮ್ ಅವರು ಸಮಾಜದಲ್ಲಿನ ಅಸಮಾನತೆ, ಅಜ್ಞಾನ ಮತ್ತು ಅನ್ಯಾಯಗಳ ವಿರುದ್ಧ ಹೋರಾಡಿ ದೇಶದ ಪ್ರಗತಿಗೆ ಮಹತ್ವದ ಕೊಡುಗೆ ನೀಡಿದ ಮಹಾನ್ ನಾಯಕರು ಎಂದು ತಿಳಿಸಿದರು. ಅವರ ಜೀವನ ಮೌಲ್ಯಗಳು, ತತ್ವಗಳು ಮತ್ತು ಸೇವಾ ಮನೋಭಾವವು ಇಂದಿನ ಪೀಳಿಗೆಗೆ ಪ್ರೇರಣೆ–ಯಾಗಿದ್ದು, ಪ್ರತಿಯೊಬ್ಬರೂ ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾನತೆ ಮತ್ತು ಸಹೋದರತ್ವದ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

# ಕುಮಾರ ಸ್ವಾಮಿಗೆ ಗೌರವ ಡಾಕ್ಟರೇಟ್ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ




ವೈಷ್ಣವಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರಾದ ಕುಮಾರ ಸ್ವಾಮಿ ಅವರಿಗೆ ಸನ್ ರೈಸ್ ಇಂಟರ್ನ್ಯಾಷನಲ್ ಯುನಿವರ್ಸಿಟಿ ವತಿಯಿಂದ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಲಾಯಿತು.

ಕುಮಾರ ಸ್ವಾಮಿ ಅವರು ಕಳೆದ ಒಂದೂವರೆ ದಶಕಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪಾರ ಸೇವೆ, ಜೊತೆಗೆ ಅನಾಥ ಮಕ್ಕಳ ಪಾಲನೆ□ಪೋಷಣೆ ಹಾಗೂ ಅವರ ಭವಿಷ್ಯ ನಿರ್ಮಾಣಕ್ಕಾಗಿ ಕೈಗೊಂಡಿರುವ ಸಾಮಾಜಿಕ ಕಾರ್ಯಗಳನ್ನು ಗುರುತಿಸಿ ಈ ಗೌರವ ನೀಡಲಾಗಿದೆ. ಪಾಲಕರಿಲ್ಲದ ಮಕ್ಕಳಿಗೆ ಆಶ್ರಯ, ಶಿಕ್ಷಣ ಮತ್ತು ಜೀವನಮೌಲ್ಯಗಳನ್ನು ನೀಡುವಲ್ಲಿ ಅವರು ತೋರಿದ ಬದ್ಧತೆ ವಿಶೇಷವಾಗಿ ಗಮನಾರ್ಹವಾಗಿದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಗಣ್ಯರ ಸಮ್ಮುಖದಲ್ಲಿ ಈ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗಿದ್ದು, ಈ ಸಂದರ್ಭದಲ್ಲಿ ಕುಮಾರ ಸ್ವಾಮಿ ಅವರ ಸೇವೆಯನ್ನು ಎಲ್ಲರೂ ಪ್ರಶಂಸಿಸಿದರು.

# ಕೋಳಿ ತ್ಯಾಜ್ಯ ಹೆದ್ದಾರಿ ಬದಿಗೆ ಎಸೆದವರ ವಿರುದ್ಧ ಕ್ರಮ



“ ಹೆದ್ದಾರಿ ಅಕ್ಕಪಕ್ಕದಲ್ಲಿ ಈ ಕೋಳಿ ಮೌಂಸದ ತ್ಯಾಜ್ಯ ಮತ್ತು ಕೊಳೆತ ತರಕಾರಿ ಹಣ್ಣುಗಳ ದುರವಾಸನೆಯಿಂದ ನಾಯಿ, ಹಂದಿ, ಪಕ್ಷಿಗಳು ಅದನ್ನು ತಿನ್ನಲು ಬಂದು ಕಚ್ಚಾಡಿ ವಾಹನ ಸವಾರರ ಚಕ್ರಕ್ಕೆ ಸಿಲುಕಿ ಅಫಘಾತಗಳನ್ನು ಆಗುವ ಸಂಭವ ಹೆಚ್ಚಾಗಿದ್ದು ಕೂಡಲೆ ಅದನ್ನು ಸ್ವಚ್ಛಗೊಳಿಸಿ ಆ ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಮುಂದಾಗುವ ಅವಗಡವನ್ನು ತಪ್ಪಿಸಲು ಜಿಲ್ಲಾಡಳಿತ ನಗರಸಭೆ ಮುಂದಾಗಬೇಕು.



ಉಮೇಶ್. ಕೆ. ಮುದ್ನಾಳ. ಸಾಮಾಜಿಕ ಹೋರಾಟಗಾರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲಾ ಕೇಂದ್ರಕ್ಕೆ ಆಗಮಿಸುವ ಸಾರ್ವಜನಿಕರಿಗೆ ದುರ್ಗಂದ್ದ ವಾಸನೆ ಸ್ವಾಗತ ಕೋರುತ್ತಿರುವುದು ಎಷ್ಟರ ಮಟ್ಟಿಗೆ ಸಮಂಜಸ್ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ !

ಹೆದ್ದಾರಿ ಅಕ್ಕ ಪಕ್ಕದಲ್ಲಿ ದುರ್ಗಂಧ ವಾಸನೆ ಕಡಿವಾಳ ಯಾವಾಗ ! ಸಿಸಿ ಕ್ಯಾಮರಾ ಅಳವಡಿಸಿ ತಪ್ಪಸ್ಥರ ಮೇಲೆ ಕಾನೂನಿ ಕಠೀಣ ಕ್ರಮಕ್ಕೆ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ಆಗ್ರಹ

ಯಾದಗಿರಿ : ನಗರದ ರೈಲ್ವೆ ಸೇತುವೆ ಮೇಲೆ ಹಾದು ಹೋಗುವ ರಾಜ್ಯ ಹೆದ್ದಾರಿಯ ಅಕ್ಕ ಪಕ್ಕದಲ್ಲಿ ಇತ್ತೀಚೆಗೆ ಕೋಳಿಯ ತ್ಯಾಜ್ಯವನ್ನು ನಿಬರ್ಂಧವಿಲ್ಲದೆ ಎಸೆಯುತ್ತಿರುವ ಘಟನೆಗಳು ದಿನೆ ದಿನೆ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರಿಗೆ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಿದೆ ಎಂದು ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ಆರೋಪಿಸಿದ್ದಾರೆ.

ವಾಹನ ಸವಾರರು ಸಾರ್ವಜನಿಕರು ಉಮೇಶ ಕೆ. ಮುದ್ನಾಳ ಗಮನಕ್ಕೆ ತಂದ ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಪರಿಶಿಲಿಸಿದ ನಂತರ ಮಾತನಾಡಿದ ಅವರು ಸಿಂದಗಿ – ಹೈದ್ರಾಬಾದ ರಾಜ್ಯ ಹೆದ್ದಾರಿಯ ಅಕ್ಕ ಪಕ್ಕದಲ್ಲಿ ಕೋಳಿ ತ್ಯಾಜ್ಯ ವಿವಿಧ ಕಸದ ರಾಶಿ, ಕೊಳೆತ ತರಕಾರಿ ಹಣ್ಣು ಸೇರಿದಂತೆ ಅನೇಕ ಪದಾರ್ಥಗಳು ರಸ್ತೆ ಬದಿಯಲ್ಲಿ ಬಿದ್ದಿರುವುದರಿಂದ ಜಿಲ್ಲಾ ಕೇಂದ್ರಕ್ಕೆ ಬರುವಂತ ವಾಹನ ಸವಾರರಿಗೆ ದುರ್ವಾಸನೆ ಸ್ವಾಗತ ಕೋರುತ್ತಿದೆ ಈ ದುರ್ವಾಸನೆ ವ್ಯಾಪಕವಾಗಿ ಹರಡುತ್ತಿದೆ. ಇದರ ಪರಿಣಾಮವಾಗಿ ಸೊಳ್ಳೆಗಳ ಸಂಖ್ಯೆ ಏರಿ–ಕೆಯಾಗಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ಏರುಪೇರು ಉಂಟಾಗುವ ನಿರ್ಮಾಣವಾಗಿದೆ. ಪ್ರತಿದಿನ ಈ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರು ಮತ್ತು ಸ್ಥಳೀಯ ನಿವಾಸಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ತಿಳಿಸಿದ್ದಾರೆ.

ಈ ಕುರಿತು ಶನಿವಾರ ಸ್ಥಳಕ್ಕೆ ಬೇಟಿ ನೀಡಿ ಪತ್ರಿಕೆ ಮಾಧ್ಯಮ ಹೇಳಿಕೆ ನೀಡಿರುವ ಅವರು ಸಾರ್ವಜನಿಕ ಮತ್ತು ವಾಹನ ಸವಾರರಿಗೆ ರೋಗ ಹರಡುವ ತ್ಯಾಜ್ಯವನ್ನು ರಾಜ್ಯ ಹೆದ್ದಾರಿ ಗೆ ಅಕ್ಕ ಪಕ್ಕದ ಎಸೆಯುವವರ ವಿರುದ್ಧ ತಕ್ಷಣ ಕಾನೂನಿನ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಸಾರ್ವಜನಿಕ ಆರೋಗ್ಯ ಕಾಯ್ದೆ ಹಾಗೂ ಪರಿಸರ ಸಂರಕ್ಷಣೆ ಕಾಯ್ದೆಗಳ ಅನ್ವಯ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಶಾಶ್ವತ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಒತ್ತಾಸಿದ್ದಾರೆ.

ಇದೆ ಸಂದರ್ಭದಲ್ಲಿ ಮಲ್ಲಪ್ಪ ರಫಿಕ್ ಪಟೇಲ್, ಭೀಮಾಶಂಕರ, ಮಲ್ಲೇಶಿ, ಪವನ, ಜಗದೀಶ ಸೇರಿದಂತೆ ಅನೇಕ ಉಮೇಶ ಕೆ. ಮುದ್ನಾಳ ಅಭಿಮಾನಿ ಬಳಗದ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸಲಹಾ ಕೇಂದ್ರ ಸ್ಥಾಪನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಭಾರತದ ಜನಗಣತಿ–2027ರ ಹಿನ್ನೆಲೆಯಲ್ಲಿ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಯ ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಕೋನದಿಂದ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರ ಕಾರ್ಯಾಲಯದ ಕೋಣೆ ಸಂಖ್ಯೆ 17 ರಲ್ಲಿ ಜನಗಣತಿಯ ಮಾಹಿತಿ ಮತ್ತು ಸಲಹಾ ಕೇಂದ್ರ (ಅಜಟಣ಻ಜಟರಿಜಝಇ) ಸ್ಥಾಪಿಸಲಾಗಿದೆ.

ಜನಗಣತಿ ಪ್ರಕ್ರಿಯೆ ಮುಕ್ತಾಯಗೊಳ್ಳುವವರೆಗೆ ಈ ಸಲಹಾ ಕೇಂದ್ರ ಕಾರ್ಯನಿರ್ವಹಿಸಲಿದ್ದು, ಸಾರ್ವಜನಿಕರು ಏನೇ ಸಂದೇಹಗಳಿದಲ್ಲಿ ದೂರವಾಣಿ ಸಂಖ್ಯೆ 08472–200255ಗೆ ಕರೆ ಮಾಡಿ ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಮತ್ತು ಜನಗಣತಿ ಮೇಲ್ವಿಚಾರಣಾಧಿಕಾರಿಗಳಾದ ಜಹೀರಾ ನಸ್ಲೀಂ ಅವರು ತಿಳಿಸಿದ್ದಾರೆ.

ಮಾಹಿತಿ ಮತ್ತು ಸಲಹಾ ಕೇಂದ್ರ ಸುಗಮವಾಗಿ ಕಾರ್ಯನಿರ್ವಹಣೆಗೆ ಪ್ರಾದೇಶಿಕ ಆಯುಕ್ತರ ಕಾರ್ಯಾಲಯದ ದ್ವಿತೀಯ ದರ್ಜೆ ಸಹಾಯಕರುಗಳಾದ ಶರಣಪ್ಪ ಶ್ರೀಗಿರಿ ಹಾಗೂ ಪ್ರವೀಣ ಕುಲಕರ್ಣಿ ಇವರನ್ನು ನಿಯೋಜಿಸಲಾಗಿದೆ.

# ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ: ಜಿಲ್ಲಾಧಿಕಾರಿ ನಿತೀಶ್

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ ಎಂದು ಡಾ. ಬಾಬು ಜಗಜೀವನ ರಾಮ್ ಅವರು ಅಂದೇ ಹೇಳಿದ್ದರು ಹಾಗಾಗಿ ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಎಲ್ಲರೂ ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ಕೆ. ನಿತೀಶ್ ಅವರು ಹೇಳಿದರು.

ಏಪ್ರಿಲ್ 05ರ ಭಾನುವಾರ ದಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಅವರು ಬಿಹಾರ ರಾಜ್ಯದಲ್ಲಿ ಜನಿಸಿದಾಗ ಅಂದಿನ ಜಾತಿ ವ್ಯವಸ್ಥೆಯ ತಾರತಮ್ಯ ಅವರ ಬಾಲ್ಯದ ದಿನಗಳಲ್ಲಿ ಹಲವಾರು ಕಹಿ ಘಟಕಗಳೆಗಳು ಜರುಗಿದವು. ಅವರು ಎದೆಗುಂದದೆ ಹೋರಾಡಿ ಇತಿಹಾಸ ನಿರ್ಮಿಸಿ ಶಿಕ್ಷಣವೇ ಮನಗೆ ಶಕ್ತಿ ಎಂದು ಎಲ್ಲಾ ಶೋಷಿತ ಜನರಿಗೆ ಹೇಳಿದರು.

ದೇಶದ ಸ್ವಾತಂತ್ರ್ಯ ಸಮಯದಲ್ಲಿ ಗಾಂಧೀಜಿಯವರ ಪ್ರೇರಣೆಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದ್ದರು. ಸಂವಿಧಾನ ರಚನಾ ಸಮಿತಿ ಸದಸ್ಯರಾಗಿ ಶೋಷಿತ ಜನರಿಗೆ ಹಕ್ಕು ನೀಡುವಲ್ಲಿ ಬಹುಮುಖ್ಯ ಪಾತ್ರವಹಿಸಿದ್ದರು. ನನ್ನ ಹೋರಾಟ ಆಂಗ್ಲರ ವಿರುದ್ಧ ಅಲ್ಲ ಅಸಮಾನತೆ ವಿರುದ್ಧ ಎಂದು ಅವರು ಹೇಳಿದರು. ನಮ್ಮ ದೇಶದ ಸಂವಿಧಾನ ರಚನೆಯಾದ ನಂತರ ಕೇಂದ್ರ ಸರಕಾರದಲ್ಲಿ ವಿವಿಧ ಇಲಾಖೆಗಳ ಸಚಿವರಾಗಿದ್ದರು. ಕಾರ್ಮಿಕ ಸಚಿವರಾಗಿ ಕಾರ್ಮಿಕರು ಘನತೆ ಜೀವನ ನಡೆಸಲು ಹಲವಾರು ಕಾನೂನುಗಳನ್ನು ಜಾರಿಗೆ ತಂದರು. ರಕ್ಷಣಾ ಸಚಿವರಾಗಿ ಇಂಡೋ–ಪಾಕಿಸ್ತಾನ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿ ದೇಶದ ಸೈನಿಕರಿಗೆ ಧೈರ್ಯ ತುಂಬಿ ದೇಶಕ್ಕೆ ವಿಜಯ ತಂದರು. ಕೃಷಿ ಸಚಿವರಾಗಿ ದೇಶದಲ್ಲಿ ಹಸಿರು ಕ್ರಾಂತಿಯನ್ನೆ ಮಾಡಿದರು. ನಾವು ಇಂದು ನಿಶ್ಚಿಂತೆಯಿಂದ ಊಟ ಮಾಡುತ್ತಿದ್ದೆವೆ ಎಂದರೆ ಇದಕ್ಕೆ ಅವರೆ



ಕಾರಣ ಎಂದು ಹೇಳಿದರು. ಸಂಕಷ್ಟ ನಮಗೆ ಬರುವುದು ಶಕ್ತಿಶಾಲಿಯಾಗಿ ಮಾಡಲು ಬಲಹೀನರಾಗಿ ಮಾಡಲು ಅಲ್ಲ ಎಂದು ತಳ ಸಮುದಾಯದ ಜನರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದರು. ಈ ಸಮಾಜದಲ್ಲಿ ಸಮಾನತೆ ಬರಬೇಕಾದರೆ ಶಿಕ್ಷಣದಿಂದ ಸಾಧ್ಯ ಎಂದು ಅವರು ಪದೇ – ಪದೇ ಹೇಳಿದ್ದರು. ಹಾಗಾಗಿ ತಳ ಸಮುದಾಯದ ಎಲ್ಲಾ ಮಕ್ಕಳು ಶಿಕ್ಷಣ ಪಡೆಯಬೇಕು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ಪ್ರಮಾಣ ಕಡಿಮೆ ಇದ್ದು, ಹೆಚ್ಚಿನ ಜನರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಮೂಲಕ ಬಾಬು ಜಗಜೀವನರಾಮ್ ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರ ಕನಸುಗಳನ್ನು ನಾವೆಲ್ಲರೂ ನನಸು ಮಾಡಬೇಕಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ರಾಯಚೂರು ಮಹಾನಗರ ಪಾಲಿಕೆಯ ಸದಸ್ಯ ಕಾರ್ಯದರ್ಶಿ ಹಾಗೂ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಅವರು ಮಾತನಾಡಿ, ಡಾ.ಬಾಬು ಜಗಜೀವನರಾಂ ಅವರು ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಶ್ರಮಿಸಿದ್ದ ಶ್ರೇಷ್ಠ ರಾಜಕೀಯ ಮುತ್ಸದ್ದಿ ಆಗಿ ಕಾರ್ಯನಿರ್ವಹಣೆ ಮಾಡಿದ್ದಾರೆ ಎಂದರು. ಸಂಪುಟ ದರ್ಜೆಯ ಸಚಿವರಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಮಹಾನ್ ನಾಯಕ. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ, ಶಿಕ್ಷಣದಿಂದ ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಬದಲಾವಣೆ ಕಾಣಲು ಸಾಧ್ಯವಿದೆ ಎಂದು ಅವರು ನಂಬಿದ್ದವರು ಎಂದು ಹೇಳಿದರು.

ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡಿದ್ದಾಗ ಮಾತ್ರ ಒಳ್ಳೆಯ ಉದ್ಯೋಗ ಅಧಿಕಾರ ಪಡೆಯಲು ಸಾಧ್ಯವಿದೆ. ಎಲ್ಲಾ ಸಮಾಜದವರು ಒಗ್ಗೂಡಿ ಇಂತಹ ಮಹಾನ್ ವ್ಯಕ್ತಿಗಳ ಜೀವನ ಕುರಿತು ಅರಿತುಕೊಳ್ಳಬೇಕು. ಅವರ ಸಾಧನೆ ಇಂದಿನ ಜನಾಂಗಕ್ಕೆ ಪ್ರೇರಣೆ ಆಗಬೇಕು' ಎಂದರು.

ಜಿಲ್ಲೆಯ ಮಾನ್ವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಾದ ಡಾ.ಬಸವರಾಜ ಕರಡಿಗುಡ್ಡ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಮಾಜಿ ಉಪ ಪ್ರಧಾನಿ ಬಾಬು ಜಗಜೀವನರಾಮ್ ಅವರು ಶೋಷಿತರ ಹಕ್ಕಿಗಾಗಿ ಹೋರಾಡಿದವರು, ಹಸಿರು ಕ್ರಾಂತಿಯ

ಹರಿಕಾರ. ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ರು, ಕೃಷಿ, ರಕ್ಷಣಾ ಸಚಿವರಾಗಿ ಸೇವೆ ಸಲ್ಲಿಸಿದ್ರು, ಅವರ ಸೇವೆ ಸ್ಮರಣೀಯವಾದದು. ಅವರ ಜೀವನ ಚರಿತ್ರೆಯುವ ಪೀಳಿಗೆಗೆ ತಲುಪಿಸುವ ಕಾರ್ಯ ನಡೆಯಬೇಕು ಎಂದರು. ದೇಶವು ಹಸಿವಿನಿಂದ ಬಳಲುತ್ತಿರುವ ವೇಳೆಯಲ್ಲಿ ದೇಶದ ಪರಿಸ್ಥಿತಿ ಅರಿತು–ಕೊಂಡು ಒಂದು ರೂಪುರೇಷೆಯನ್ನು ತಯಾರಿಸಿಕೊಂಡರು. ರೈತರು ಆಹಾರ ಧಾನ್ಯದಲ್ಲಿ ಹೆಚ್ಚುವರಿ ಇಳುವರಿ ಪಡೆಯಲು ಆಧುನಿಕ ಕೃಷಿ ಸಲಕರಣೆಗಳನ್ನು ಪರಿಚಯಿಸುವುದರ ಮೂಲಕ ಕೃಷಿಯಲ್ಲಿ ಬಹುದೊಡ್ಡ ಬದಲಾವಣೆ ತಂದರು ಎಂದರು.

ಬಾಬೂಜಿ ಅವರ ಮಹತ್ಕಾರ್ಯದಿಂದಾಗಿ ರೈತರು ಹೆಚ್ಚಿನ ಇಳುವರಿ ಮತ್ತು ಆರ್ಥಿಕ ಅಭಿವೃದ್ಧಿ ಕಾಣಲು ಸಾಧ್ಯವಾಯಿತು.

ತಮಗೆ ಸಿಕ್ಕಂತಹ ಅಧಿಕಾರವನ್ನು ದೇಶದ ಅಭಿವೃದ್ಧಿ ಮತ್ತು ಸಮಸ್ಯೆಗಳ ನಿವಾರಣೆಗಾಗಿ ಅವಿರತವಾಗಿ ಶ್ರಮಿಸಿದ್ದ ಮಹಾನ್ ನಾಯಕ ಎಂದು ಬಣ್ಣಿಸಿದರು.

ಇದೇ ಸಂದರ್ಭದಲ್ಲಿ ರಾಯಚೂರು ತಹಶೀಲ್ದಾರ್ ಸುರೇಶ ವರ್ಮ ಅವರು ಭಾರತ ಸಂವಿಧಾನದ ಪೀಠಿಕೆಯನ್ನು ಎಲ್ಲರಿಗೆ ಭೋದಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: ಹತ್ತನೇ ತರಗತಿಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಾದ ಶ್ರೇಯಾ ತಂದೆ ಸೋಮಪ್ಪ, ಶ್ರೀದೇವಿ ತಂದೆ ಶಿವರಾಜ, ಸ್ಫೂರ್ತಿ ಬಂಡಿವಡ್ಡರ ತಂದೆ ಶಿವಪ್ಪ ಬಂಡಿವಡ್ಡರ್ ಅವರಿಗೆ ಡಾ.ಬಾಬು ಜಗಜೀವನ ರಾಮ್ ಅವರ ಜಯಂತಿ ಅಂಗವಾಗಿ ವಿವಿಧ ಗಣ್ಯರಿಂದ ಸನ್ಮಾನಿಸಿ ಗೌರವಿಸಿದರು.

# ಬಾಬು ಜಗಜೀವನ ರಾಮ್ 119ನೇ ಜನ್ಮ ದಿನಾಚರಣೆ: ಮೆರವಣಿಗೆಗೆ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆಯ ಅಂಗವಾಗಿ ಏಪ್ರಿಲ್ 5ರ ಭಾನುವಾರ ದಂದು ನಗರದ ರೈಲ್ವೆ ನಿಲ್ದಾಣದ ಹತ್ತಿರವಿರುವ ಡಾ.ಬಾಬು ಜಗಜೀವನ ರಾಮ್ ಅವರ ಪುತ್ಥಳಿಗೆ ವಿವಿಧ ಗಣ್ಯರಿಂದ ಪೂಜೆ ಕಾರ್ಯಕ್ರಮ ನೆರವೇರಿಸಿ, ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ್ ನಾಯಕ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಹರೀಶ್, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್, ಮುಖಂಡರಾದ ರವಿ ಭೋಸರಾಜು, ನರಸಿಂಹಲು ಮಾಡಗಿರಿ, ಕೆ.ಶಾಂತಪ್ಪ, ಎಂ.ವಿರೂಪಾಕ್ಷಪ್ಪ, ರಾಜು, ಪವನ್ ಕುಮಾರ್, ರಾಜೇಂದ್ರ ಜಲ್ದಾರ್, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಇತರರು ಇದ್ದರು.

ಇತ್ತೀಚಿಗೆ ಮುಖ್ಯಮಂತ್ರಿ ಪದಕಕ್ಕೆ ಆಯ್ಕೆಯಾದ ರಾಯಚೂರು ಡಿವೈಎಸ್ಪಿ ಶಾಂತವೀರ ಅವರಿಗೆ ಗಣ್ಯರಿಂದ ಇದೇ ಸಂದರ್ಬದಲ್ಲಿ ಸನ್ಮಾನ ಮಾಡಲಾಯಿತು.

ನಂತರ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ ಭಾವಚಿತ್ರದ ಮೆರವಣಿಗೆಗೆ ವಿವಿಧ ಗಣ್ಯರಿಂದ ಚಾಲನೆ ನೀಡಲಾಯಿತು. ಮೆರವಣಿಗೆಯು ನಗರದ ರೈಲ್ವೆ ನಿಲ್ದಾಣದಿಂದ ರಂಗಮಂದಿರದವರೆಗೂ ನಡೆಯಿತು.

# 21ನೇ ಗುರು ಪಟ್ಟಾಧಿಕಾರ, ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ: ಗಜದಂಡ ಶ್ರೀಗಳು



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ತಾಲೂಕಿನ ದೇವರ ಭೂಪರದ ಮರಗುಂಡ ತೋಪಿನ ಕಟ್ಟೆ ಸಂಸ್ಥಾನ ಬ್ರಹ್ಮನ್ಮಠದಲ್ಲಿ ಜುಲೈ 4 ರಿಂದ 24ರ ವರೆಗೆ 21ನೇ ಗುರು ಪಟ್ಟಾಧಿಕಾರ ಮಹೋತ್ಸವ ಹಾಗೂ ಸಿದ್ಧಾಂತ ಶಿಖಾಮಣಿ ಪ್ರವಚನ ಸೇರಿದಂತೆ ಹಲವು ಕಾರ್ಯಕ್ರಮಗಳು ಜರುಗಲಿದ್ದು ಭಕ್ತಗಣ ಭಾಗಿಯಾಗಿ ಯುಶಸ್ವಿಗೊಳಿಸಬೇಕೆಂದು ತೋಪಿನಕಟ್ಟೆ ಸಂಸ್ಥಾನಮಠದ ಪೀಠಾಧಿಪತಿಗಳಾದ ಗಜದಂಡ ಶಿವಾಚಾರ್ಯರು ಹೇಳಿದರು. ಮುದಗಲ್ ನ ನೀಲಕಂಠೇಶ್ವರ ದೇವಸ್ಥಾನದಲ್ಲಿ ರವಿವಾರ ನಡೆದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿಗಳು ಮಾತನಾಡಿ, ಲಿಂಗೈಕ್ಯ ಗಜದಂಡ ಶಿವಾಚಾರ್ಯರ 21ನೆಯ ಪುಣ್ಯಸ್ಮರಣೋತ್ಸವ ಹಾಗೂ ಅಭಿನವ ಗಜದಂಡ ಶಿವಾಚಾರ್ಯ 21ನೆಯ ಗುರು ಪಟ್ಟಾಧಿಕಾರ ಮಹೋತ್ಸವದ ತನ್ನಿಮಿತ್ಯ ಪಂಚಪೀಠಾಧೀಶ್ವರರ ಸಾನಿಧ್ಯದಲ್ಲಿ ಗುರುವಿರಕ್ತ ಆರೂಢರ ಸಂತ ಮಹಾಂತರ ಸಮ್ಮುಖದಲ್ಲಿ ಹಾಗೂ ನಾಡಿನ ಗಣ್ಯರು ಸೇವಾ ನಿರತ ಸದ್ಭಕ್ತರು ಅರ್ಚಕ ಪುರೋಹಿತರು ಮತ್ತು ಸಂಗೀತ ಸಾಹಿತ್ಯ ಕಲಾವಿದರ ಜೊತೆಗೂಡಿ ಸಮಾರಂಭವನ್ನು ಏರ್ಪಡಿಸಲಾಗಿದ್ದು 10 ದಿನಗಳ ಕಾಲ ಆರೂಢ ಪರಂಪರೆಯ ದಿಗ್ಗಜರಿಂದ ವೇದಾಂತ ಸಮ್ಮೇಳನ 11 ದಿನಗಳ ಕಾಲ ಕಾಶಿ ಜಗದ್ಗುರುಗಳಿಂದ ಪ್ರತಿದಿನ ಸಿದ್ಧಾಂತ ಶಿಖರಮಣಿ ಪ್ರವಚನ ಹಾಗೂ ಪ್ರತಿನಿತ್ಯ 101 ಜೋಡಿಗಳ ಮಹಾರುದ್ರ ಯಜ್ಞ ನೆರವೇರಿಸುವುದು 101 ಜಂಗಮ ಗಣರಾಧನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು ಲಿಂಗೈಕ್ಯ ಶ್ರೀಗಳ ಶಿಲಾಮೂರ್ತಿ ಪುನರ್ ಪ್ರತಿಷ್ಠಾಪನೆ ನಾಡಿನ ಪಂಚ ಪೀಠಾಧಿಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಜರಗಲಿದ್ದು ತಾಲೂಕಿನ ಜನತೆ ಹಾಗೂ ಅಮರೇಶ್ವರನ ದೇಗುಲದ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕೆಂದು ಭಕ್ತರಲ್ಲಿ ಮನವಿ ಮಾಡಿದರು. ಪ್ರಮುಖರಾದ ಲಿಂಗಪ್ಪ ಹಣಗಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಅಮರೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಗಂಗಾಧರಯ್ಯ ಶಾಸ್ತ್ರಿಗಳು ಕಾರ್ಯಕ್ರಮದ ರೂಪರೇಷೆಗಳು ಬಗ್ಗೆ ವಿವರಿಸಿದರು. ಈ ಸಂದರ್ಭದಲ್ಲಿ ಮುದಗಲ್ ಪಟ್ಟಣದ ಪ್ರಮುಖರಾದ ರಾಜು ಮಾಲಿಪಾಟೀಲ್, ಚಂದ್ರಣ್ಣ ಗಂಗಾವತಿ, ಮಹೇಶ್ ವಸ್ತ್ರದ, ಮಹಾಂತೇಶ್ ಪಾಟೀಲ್, ವೀರಭದ್ರಪ್ಪ ಕೊಳ್ಳಿ, ಬಸಪ್ಪ ಜೇಡಿ, ಗುಂಡಪ್ಪ ಗಂಗಾವತಿ, ಗುಂಡಪ್ಪ ಕಿಲ್ಲ, ಮಲ್ಲಪ್ಪ ಮಾಟೂರು ರಾಚಪ್ಪ ಗಬ್ಬೂರು, ಮಹಾಂತೇಶ ಅಕ್ಷತಿ, ವಿನೋದ್ ಕನ್ನಾಪುರಟ್ಟಿ, ಅಮರಗುಂಡಪ್ಪ ಗುಡಿಹಾಳ, ಭೀಮಣ್ಣ ಕುಂಬಾರ್, ಹಾಗೂ ಮುದುಗಲ್ ಪಟ್ಟಣದ ವಿವಿಧ ಸಮಾಜದ ಮುಖಂಡರುಗಳು, ಅರ್ಚಕರಾದ ನಿರುಪಾಧಿ, ಸಂಗಣ್ಣ ಹಾಗೂ ಸಮಾಜದ ಬಂಧುಗಳಿದ್ದರು.

# ಕೃಷಿ ತಂತ್ರಜ್ಞಾನದ ಬಳಕೆಯ ಫಲವಾಗಿ ಉತ್ತಮ ಬೆಳೆಗಳ ಬೆಳವಣಿಗೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಬಾಲ್ಕಿ ತಾಲೂಕಿನ ಗುರುವಾರ ತರನಳ್ಳಿ ಗ್ರಾಮದಲ್ಲಿರುವ ಗುರುನಾಥ ತಂದೆ ವೈಜಿನಾಥ ಬಿರಾದರ್ ಅವರ ಕ್ಷೇತ್ರದಲ್ಲಿ ಕಡಲೆ ಬೆಳೆಯ ಸಮಗ್ರ ಬೆಳೆ ನಿರ್ವಹಣೆ ಹಾಗೂ ಕೃಷಿ ವಾಸ್ ತಂತ್ರಜ್ಞಾನದ ಬಳಕೆಯ ಫಲವಾಗಿ ಉತ್ತಮ ಬೆಳೆಯ ಬೆಳವಣಿಗೆ ಕಂಡುಬಂದ ಹಿನ್ನೆಲೆ, SBIF–LEAPSmart Crop Project ವತಿಯಿಂದ ಕ್ಷೇತ್ರೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಕೃಷಿ ವಿಶ್ವವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಡೀನ್ (ಸ್ನಾತ–ಕೋತ್ತರ) ಹಾಗೂ ಯೋಜನೆಯ ಪ್ರಧಾನ ಸಂಶೋಧಕರಾದ ಡಾ.ಎ.ಜಿ.ಶ್ರೀನಿವಾಸ್ ಅವರು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದ ಅವರು, ಆಪ್ನ ಬಳಕೆಯಿಂದ ಬೆಳೆ ನಿರ್ವಹಣೆಯಲ್ಲಿ ಜೈವಿಕ ಹಾಗೂ ಅಜೈವಿಕ ಸಂಕಷ್ಟಗಳನ್ನು ಸರಿಯಾದ ಸಮಯದಲ್ಲಿ ಮತ್ತು ನಿಖರ ಸ್ಥಳದಲ್ಲಿ ಗುರುತಿಸಿ ನಿರ್ವಹಣೆ ಮಾಡಿದಲ್ಲಿ, ಬೆಳೆ ನಿರ್ವಹಣಾ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಿಕೊಳ್ಳಬಹುದು ಹಾಗೂ ಉತ್ತಮ ಲಾಭ ಪಡೆಯಬಹುದು ಎಂದು ತಿಳಿಸಿದರು. ಜೊತೆಗೆ ಪರಿಸರಕ್ಕೆ ಹಾನಿಕಾರಕ ರಸಾಯನಗಳ ಬಳಕೆಯೂ ಕಡಿಮೆಯಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಪ್ರಸ್ತಾವಿಕ ಭಾಷಣವನ್ನು

ಡಾ.ಸುನಿಲ್ ಕುಮಾರ್ ಎನ್. ಎಂ.ಅವರು ಮಾಡಿದರು. ಯೋಜನೆಯಡಿಯಲ್ಲಿ ಆಯ್ದ ತಾಕುಗಳಲ್ಲಿ ಈ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೈತರು ಹೆಚ್ಚಿನ ಆಸಕ್ತಿ ವಹಿಸಿ ಇದರ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು. ಇದು ನಿಖರ ಬೇಸಾಯ ತಂತ್ರಜ್ಞಾನದ ಪ್ರಮುಖ ಭಾಗವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ನಾಗೇಂದ್ರಪ್ಪ ಬಿರಾದರ್ ಅವರು ಮಾತನಾಡಿ, ವಿಜ್ಞಾನಿಗಳು ರೈತರ ಕ್ಷೇತ್ರಕ್ಕೆ ಬಂದು ನವೀನ ತಂತ್ರಜ್ಞಾನಗಳನ್ನು ಪರಿಚಯಿಸುವ ಕಾರ್ಯ ಶ್ಲಾಘನೀಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಯೋಜನೆ ಅನುಷ್ಠಾನಗೊಳಿಸಿದ ರೈತ ಶ್ರೀ ಗುರುನಾಥ ಅವರು ತಮ್ಮ ಅನುಭವವನ್ನು ಹಂಚಿಕೊಂಡು, ಈ ತಂತ್ರಜ್ಞಾನದ ಉಪಯೋಗವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಕೃಷಿ ಸಂಶೋಧನಾ ಕೇಂದ್ರ, ಬಿದರಿನ ಕ್ಷೇತ್ರಾಧಿಕಾರಿಯಾದ ಡಾ. ಜೈನುದ್ದೀನ್ ಮುಲ್ಲಾ ಅವರು ಸ್ವಾಗತಿಸಿದರು. ಡಾ.ಜ್ಞಾನದೇವ್ ಬುಳ್ಳ ಅವರು ವಂದಿಸಿದರು. ಡಾ.ನಿಂಗದಳ್ಳಿ ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮ ನಿರೂಪಿಸಿದರು.

ಕೊನೆಯಲ್ಲಿ ಕ್ಷೇತ್ರ ವೀಕ್ಷಣೆ ಹಾಗೂ ಆಪ್ನ ಪ್ರಾತ್ಯಕ್ಷಿಕೆಯನ್ನು ಅನಿಲ್ ಕುಮಾರ್ ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಗ್ರಾಮದ ರೈತರಾದ ಬಾಬುರಾವ ಹೌಶೆಟ್ಟಿ, ಬಸವರಾಜ್ ಹರಪಳ್ಳೆ, ಸಂಜುಪ್ರಭ, ಅನಂತ್ ರಾವ್ ಕುಲಕರಣಿ ಸೇರಿದಂತೆ ಹಲವರು ಭಾಗವಹಿಸಿದರು.




# ಆಕ್ಷೇಪಣೆಗೆ: ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜಿಲ್ಲೆಯ ದೇವದುರ್ಗ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. 27 ಅಂಗನವಾಡಿ ಕಾರ್ಯಕರ್ತೆಯರ ಹುದ್ಧೆ ಮತ್ತು 76 ಸಹಾಯಕಿಯರ ಖಾಲಿ ಇದ್ದ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿರುವದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆಕ್ಷೇಪಣೆಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆ ಅರ್ಜಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ: 04.04.2026 ರಿಂದ 13.04.2026 ರೊಳಗೆ ಸಮಯ ಬೆಳಿಗ್ಗೆ 08:00 ಗಂಟೆಯಿಂದ ಮಧ್ಯಾಹ್ನ 01.30ರವರೆಗೆ ಸಲ್ಲಿಸಬಹುದಾಗಿದೆ.

ಆಕ್ಷೇಪಣೆ ಸಲ್ಲಿಸುವವರು ಆಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳು ಸಲ್ಲಿಸದಿದ್ದಲ್ಲಿ ಅಂಥವರ ಆಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಡಾ.ಅರಷಿಣಗಿ ಬಿಲ್ಡಿಂಗ್ ನಗರಗುಂಡ ರೋಡ್, ದೇವದುರ್ಗ ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ದೇವದುರ್ಗ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹೇಶ ನಾಯಕ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಡಿಯುವ ನೀರಿನ ಸಮಸ್ಯೆಗೆ ಸಹಾಯ ವಾಣಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಬೇಸಿಗೆ ನಿಮಿತ್ತ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಜಲಮೂಲಗಳ ಕೊರತೆ ಅಥವಾ ಜಲಮೂಲಗಳು ಬತ್ತಿಹೋಗುವ ಮೂಲಕ ತಲೆದೂರಬಹುದಾದ ಕುಡಿಯುವ ನೀರಿನ ಸಮಸ್ಯೆ ಹಾಗೂ ಅನೈರ್ಮಲ್ಯ ವಾತಾವರಣದಿಂದಾಗಿ ಉಂಟಾಗಬಹುದಾದ ಅನಾರೋಗ್ಯದ ಸಮಸ್ಯೆಗಳನ್ನು ಯಶಸ್ವಿಯಾಗಿ ನಿಯಂತ್ರಿಸಿ ಅಗತ್ಯ ಪರಿಹಾರ ಕಲ್ಪಿಸಲು

ಆಯಾ ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳಿಂದ ಕೈಗೊಳ್ಳಬೇಕಾದ ಮುಂಜಾಗೃತಾ ಕ್ರಮಗಳ ಬಗ್ಗೆ ಜಿಲ್ಲಾ ಪಂಚಾತಿಯ ಕುಂದುಕೊರತೆ ನಿವಾರಣಾ ಘಟಕದ ದೂರವಾಣಿ ಸಂಖ್ಯೆ: 08532–230539ಗೆ ಸಾರ್ವಜನಿಕರು ನೇರವಾಗಿ ಸಂಪರ್ಕಿಸಿ ತಮ್ಮ–ತಮ್ಮ ಕುಂದುಕೊರತೆ ಅಥವಾ ಆಹ್ವಾಲುಗಳನ್ನು ನೊಂದಾಯಿಸಿ ಪರಿಹಾರ ಪಡೆಯಬಹುದಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸಮ್ಮ ಮಹಾಂತಪ್ಪ ಬೊಮ್ಮನಾಳ ನಿಧನ

• ಮಲ್ಲಮ್ಮ ನುಡಿ ವಾರ್ತೆ ,ಕೂಕನೂರು



ತಾಲೂಕಿನ ಕುದರಿಮೋತಿ ಗ್ರಾಮದ ನಿವಾಸಿ ಬಸಮ್ಮ ದಿ.ಮಹಾಂತಪ್ಪ ಬೊಮ್ಮನಾಳ (65) ಅವರು ಭಾನುವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿ ಅಪಾರ ಬಂಧುಗಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ. ಕುದರಿಮೋತಿ ಗ್ರಾಮದ ನಿವಾಸಿ ಬಸಮ್ಮ ಬೊಮ್ಮನಾಳ ಅವರ ನಿಧನಕ್ಕೆ ಗ್ರಾಮದ ದಳಪತಿ ಹನುಮಗೌಡ ಪೊಲೀಸ್ ಪಾಟೀಲ್, ಬಸಣ್ಣ ದೊಡ್ಡಮನಿ, ಮುದಕಣ್ಣ ರಾವಣಕಿ, ಶಿವಯ್ಯ ಹಿರೇಮಠ, ವೀರಭದ್ರಯ್ಯ ಕರಡಿಮಠ, ಮಂಜುನಾಥ ಗಟ್ಟೆಪ್ಪನವರ್, ಅಮರೇಶ ತಲ್ಲೂರು, ಶಿವಪ್ಪ ಬೇವಿನಗಿಡದ, ಮಹಾಂತಪ್ಪ ಸಿಡ್ನಹಳ್ಳಿ, ದ್ಯಾಮಣ್ಣ ಉಚ್ಚಲಕುಂಟಿ, ಈರಪ್ಪ ಕಾಳಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಫರೀದಾ ಬೇಗಂ ಹಾಗೂ ರವಿ ಕಟಗಿ, ಶರಣಯ್ಯ ಜಂಗಮರು, ನಾಗಪ್ಪ ತಲ್ಲೂರು, ಮಹಾಂತಪ್ಪ ತಲ್ಲೂರು, ಶಿವಪ್ಪ ತಲ್ಲೂರು, ಆದೆಪ್ಪ ತಲ್ಲೂರು, ಹಾಸೀಂಸಾಬ್ ಮಕಾಂದಾರ್, ಮಾಬುಸಾಬ್ ಮಕಾಂದರ್, ಡಾ.ಬಾಷಾಸಾಬ್, ಡಾ.ಎಂ. ಎನ್.ಮುಲ್ಲಾ. ಬಸಯ್ಯ ವಣಗೇರಿ, ಪಂಪಣ್ಣ ಹಂಬಣ್ಣನರ್. ವಿಜಯಕುಮಾರ್ ದಾಸರ್ ಅವರು ಸಂತಾಪ ಸೂಚಿಸಿದ್ದಾರೆ.

# ಡಾ.ಬಾಬು ಜಗಜೀವನ ರಾಮ್ ಜಯಂತಿ ನಿರ್ಲಕ್ಷ್ಯ: ಕಟ್ಟಿಮನಿ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಇಂದು ನಡೆಯಬೇಕಾಗಿದ್ದ ಡಾ. ಬಾಬು ಜಗಜೀವನ ರಾಮ್ ಜಯಂತಿ ಕಾರ್ಯಕ್ರಮ ತಾಲೂಕು ಆಡಳಿತದ ನಿರ್ಲಕ್ಷ್ಯದಿಂದ ಸಮರ್ಪಕವಾಗಿ ನಡೆಯಲಿಲ್ಲ ಎಂದು ಸಮಾಜ ಮುಖಂಡ ಬಸವರಾಜ ಕಟ್ಟಿಮನಿ ಆರೋಪಿಸಿದ್ದಾರೆ.

ಇಂದು ನೀಲಕಂಠೇಶ್ವರ ದೇವಸ್ಥಾನ ಆವರಣದಲ್ಲಿ ಸಮಾಜದ ಮುಖಂಡರೊಂದಿಗೆ ನಡೆದ ಪತ್ರಿಕಾಗೋಷ್ಠಿಯಲಿ

ಮಾತನಾಡಿದ ಅವರು, ಪೂರ್ವಭಾವಿ ಸಭೆಯಲ್ಲಿ ಕರ್ತವ್ಯಗಳ ಹಂಚಿಕೆ ಮಾಡಿದ್ದರೂ ಅಧಿಕಾರಿಗಳು ಬೇಜವಾಬ್ದಾರಿತನದಿಂದ ನಡೆದು–ಕೊಂಡಿದ್ದಾರೆ ಎಂದು ತಿಳಿಸಿದರು. ಬಹುತೇಕ ಅಧಿಕಾರಿಗಳು ಗೈರುಹಾಜರಾಗಿದ್ದು, ಇದರಿಂದ ಸಮಾಜದ ಬಂಧುಗಳು ಹಾಗೂ ಸಾರ್ವಜನಿಕರಲ್ಲಿ ಅಸಮಾಧಾನ ಉಂಟಾಗಿದೆ ಎಂದು ಹೇಳಿದರು.

ಮಹಾಂತ ಸ್ವಾಮಿ ವೃತ್ತದಲ್ಲಿ ಸಮಾಜದ ಸದಸ್ಯರು ಪ್ರತಿಭಟನೆ ನಡೆಸಿ ತಾಲೂಕು ಆಡಳಿತದ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆಗಳನ್ನು ಮಾಡದೇ,

ಡಾ. ಬಾಬು ಜಗಜೀವನ ರಾಮ್ ಅವರ ಭಾವಚಿತ್ರ ಮೆರವಣಿಗೆಗೆ ಬೇಕಾದ ಡೊಳ್ಳು–ವಾದ್ಯ, ಹಲಗೆ ಮುಂತಾದ ವ್ಯವಸ್ಥೆಗಳನ್ನೂ ಮಾಡದಿರುವುದು ದುಃಖಕರ ಸಂಗತಿ ಎಂದು ಅವರು ಆರೋಪಿಸಿದರು.

ಕಾರ್ಯಕ್ರಮವನ್ನು ಕೇವಲ ಕಾಟಾಚಾರಕ್ಕಾಗಿ ನಡೆಸಿದಂತೆ ಕಾಣುತ್ತಿದ್ದು, ಪೂರ್ವದಲ್ಲಿ ತೆ–ಗೆದುಕೊಂಡ ನಿರ್ಧಾರಗಳನ್ನು ಪಾಲಿಸದಿರುವುದು ದುರದೃಷ್ಟಕರ ಎಂದು ಅವರು ಹೇಳಿದರು.

ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವಲ್ಲಿ ವಿಫಲರಾದ ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣವೇ ಅಮಾನತು ಮಾಡಬೇಕೆಂದು ಬಸವರಾಜ ಕಟ್ಟಿಮನಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅಮಲಪ್ಪ ಹಳ್ಳಿ ಪವಾಡೆಪ್ಪ ಕಕ್ಕೇರಾ, ನಾಗರಾಜ ಕೊಡೇಕಲ, ಬಸವರಾಜ ದೊಡ್ಡಮನಿ, ಭೀಮಣ್ಣ ಹೆಬ್ಬಾಳ, ಗಯಪ್ಪ ಸೊನ್ನಪುರ, ಕೆಂಚಪ್ಪ ಜಿ. ಗುಂಡಲಗೇರಾ, ಪರಮಣ್ಣ ದೊಡ್ಡಮನಿ ಸೇರಿದಂತೆ ಅನೇಕ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ವಿವಿಧ ಕಾರ್ಯಕ್ರಮ

ಮಲ್ಲಮ್ಮನುಡಿ ವಾರ್ತೆ ಕಲಬುರಗಿ

ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರ ಹಾಗೂ ಅಲ್ ಬದರ್ ಮಲ್ಟಿ–ಸ್ಪೆಷಾಲಿಟಿ ಮತ್ತು ಡೆಂಟಲ್ ಆಸ್ಪತ್ರೆ, ವತಿಯಿಂದ ಇದೇ ಏಪ್ರಿಲ್ 6 ಹಾಗೂ 7 ರಂದು ಎರಡು ದಿನಗಳ ಕಾಲ ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಕಲಬುರಗಿ ಅಲ್ ಬದರ್ ಮಲ್ಟಿ ಸ್ಪೆಷಾಲಿಟಿ ಡೆಂಟಲ್ ಆಸ್ಪತ್ರೆಯ ಅಧ್ಯಕ್ಷರಾದ ಡಾ. ಮಹಮ್ಮದ್ ಅಬ್ದುಲ್ ಮುಜೀಬ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಏಪ್ರಿಲ್ 6 ರಂದು ಬೆಳಿಗ್ಗೆ 11 ಗಂಟೆಗೆ 4ನೇ ಯಿಂದ 6ನೇ ತರತಿಗತಿಯ ವಿದ್ಯಾರ್ಥಿಗಳಿಗೆ "ವಿಜ್ಞಾನದೊಂದಿಗೆ ಆರೋಗ್ಯಕರ ಅಭ್ಯಾಸಗಳು"("ಊಜಚಿಟಣಖಿಥಿ ಊಚಿಭಿಣ ತಿಣಖ ಖಭಿಖಿಜಟಭಿಜ) ವಿಷಯದ ಕುರಿತು ಹಾಗೂ 7ನೇ ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ "ರೋಗಗಳ ವಿರುದ್ಧ ಹೋರಾಡುವಲ್ಲಿ ವಿಜ್ಞಾನದ ಪಾತ್ರ" (ಖಠಟಜ ಠಜಿ ಖಭಿಖಿಜಟಭಿಜಟಿ ಈುಝಣಟಿಠ ಘುಜಭಿಭ) ವಿಷಯದ ಕುರಿತು ಡ್ರಾಯಿಂಗ್ ಮತ್ತು ಪೇಂಟಿಂಗ್ ಸ್ಪರ್ಧೆ ಆಯೋಜಿಸಲಾಗಿದೆ.

ಏಪ್ರಿಲ್ 7 ರಂದು ಬೆಳಿಗ್ಗೆ 10.30 ಕ್ಕೆ ಕಲಬುರಗಿ ಅಲ್ ಬದರ್ ಮಲ್ಟಿ–ಸ್ಪೆಷಾಲಿಟಿ & ಡೆಂಟಲ್ ಆಸ್ಪತ್ರೆಯ ಡಾ. ಶೇಕ್ ಮಸಿರಾ ನುಸ್ರತ್ ಅವರು "ಲ್ಯಾಬ್ ಟು ಲೈಫ್: ಸೈನ್ಸ್ ಇಸ್ ಎವರಿ ಡೇ ಹೆಲ್ತ್" (ಐಚಿಭ ಣಠ ಖಜಿಜ: ಖಭಿಖಿಜಟಭಿಜ ಟಿ ಇತಜಡಿಥಿ–ಜಚಿಥಿ ಊಜಚಿಟಣಖ) ಕುರಿತು ಆರೋಗ್ಯ ಜಾಗೃತಿ ಉಪನ್ಯಾಸ ನೀಡುವರು. ಬೆಳಿಗ್ಗೆ 11.30 ಗಂಟೆಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ 'ಪೌಷ್ಠಿಕಾಂಶ, ಆರೋಗ್ಯ ಮತ್ತು ನೈರ್ಮಲ್ಯ' ಕುರಿತು ಮುಕ್ತ ರಸಪ್ರಶ್ನೆ ಕಾರ್ಯಕ್ರಮ ಜರುಗಲಿದೆ. ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

# ಜೆಸ್ಕಾಂನಿಂದ ಏ,7ಕ್ಕೆ ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ 110 ಕೆ.ವಿ ಮೇಸ್, ಎಪಿಎಮ್‌ಸಿ ಯಾರ್ಡ್ 3 ಡ್ರಾಗ್‌ಹೌಸ್ ಲಿಂಕ್ ಲೈನ್ ಕಾಮಗಾರಿ ನಡೆಯುವ ಪ್ರಯುಕ್ತ ಏಪ್ರಿಲ್ 07ರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಅಲ್ಲಮಪ್ರಭು ಕಾಲೋನಿ, ಪೋತಗಲ್ ರೋಡ, ಎಲ್.ಬಿ.ಎಸ್. ನಗರ,

ಅಲಿ ಕಾಲೋನಿ, ಚಂದ್ರಬಂಡ ರಸ್ತೆ, ಸಂತೋಷ ನಗರ, ವಿಶ್ವನಾಥ ಕಾಲೋನಿ, ಪೋತಗಲ್ ಕ್ರಾಸ್, ಆಶ್ರಯ ಕಾಲೋನಿ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರಂತರ ಗ್ರಾಹಕರ ಸೇವಾ ಕೇಂದ್ರ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ ಸಹಾಯಕಕಾರ್ಯನಿರ್ವಾಹಕಅಭಿಯಂತರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇಶಕ್ಕೆ ಆಹಾರ ಭದ್ರತೆ, ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಯಲ್ಲಿ ಡಾ.ಬಾಬು ಜಗಜೀವನರಾಮ್ ಅವರ ಪಾತ್ರ ಅವಿಸ್ಮರಣೀಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ದೇಶಕ್ಕೆಆಹಾರಭದ್ರತೆಒದಗಿಸುವಲ್ಲಿ ಮತ್ತು ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರುವಲ್ಲಿ ಡಾ.ಬಾಬು ಜಗಜೀವನರಾಮ್ ಅವರ ಪಾತ್ರ ಅವಿಸ್ಮರಣೀಯ ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ಭಾರತದ ಮಾಜಿ ಉಪ ಪ್ರಧಾನಮಂತ್ರಿ ಹಾಗೂ ಹಸಿರು ಕ್ರಾಂತಿ ಹರಿಕಾರರಾದ ಡಾ.ಬಾಬು ಜಗಜೀವನರಾಮ್ ಅವರು 119ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶವು ಇಂದು ಆಹಾರ ಭದ್ರತೆಯಲ್ಲಿ ಸ್ವಾವಲಂಬನೆ ಸಾಧಿಸಲು ಅಂದಿನ ದಿನಗಳಲ್ಲಿ ದೇಶದ ಧೀಮಂತ ನಾಯಕ, ಮಾಜಿ ಉಪಪ್ರಧಾನಿ ಹಾಗೂ ಭಾರತದ ಹಸಿರು ಕ್ರಾಂತಿಯ ಮೂಲ ಪುರುಷ ಡಾ.ಬಾಬು ಜಗಜೀವನರಾಮ್ ಅವರು ಹಾಕಿಕೊಟ್ಟ ಭದ್ರ ಬುನಾದಿಯೇ ಕಾರಣ ಎಂದು ಸ್ಮರಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಭಾರತವು ಆಹಾರಕ್ಕಾಗಿ ಅಮೆರಿಕದ ಮೇಲೆ ಅವಲಂಬಿತವಾಗಿದ್ದ ಕಾಲದಲ್ಲಿ, ಕೃಷಿ ಸಚಿವರಾಗಿ ಬಾಬೂಜಿಯವರು ತಂದ ಹೊಸ ತಂತ್ರಜ್ಞಾನ ಮತ್ತು ಹಸಿರು ಕ್ರಾಂತಿ ದೇಶಕ್ಕೆ ಆಹಾರ ಸ್ವಾವಲಂಬನೆಯನ್ನು ತಂದುಕೊಟ್ಟಿತು. ಅಂದಿನಿಂದ ಇಂದಿನವರೆಗೆ ದೇಶದಲ್ಲಿ ಆಹಾರ ಉತ್ಪಾದನೆಯ ಕೊರತೆಯಾಗಿಲ್ಲ ಎಂಬುದು ಗಮನಾರ್ಹವಾಗಿದೆ ಎಂದು ಹೇಳಿದರು.

ಡಾ.ಬಾಬು ಜಗಜೀವನರಾಮ್ ಅವರ ಜೀವನಶೈಲಿಯು ಇಂದಿನ 'ಸುಸ್ಥಿರ ಅಭಿವೃದ್ಧಿ' ಕಲ್ಪನೆಗೆ ಮಾದರಿಯಾಗಿದೆ. ಸತ್ಯ, ಪ್ರಾಮಾಣಿಕತೆ ಮತ್ತು ಸಮಾನತೆಯ ಬಗ್ಗೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದು ಕರೆ ನೀಡಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಮಾತನಾಡಿ, ದೇಶದ ಇಬ್ಬರು ಮಹಾನ್ ನಾಯಕರಾದ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನ್ ರಾಮ್ ಅವರನ್ನು ಭಾರತದ ಎರಡು ಕಣ್ಣುಗಳಿದ್ದಂತೆ, ಅವರ ದಾರಿಯಲ್ಲಿ ನಡೆಯುವುದು ಇಂದಿನ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಬಾಬು ಜಗಜೀವನ್ ರಾಮ್ ಅವರು ವಿದ್ಯಾರ್ಥಿಯಾಗಿದ್ದಾಗ ಗಣಿತ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಪಡೆಯುವ ಮೂಲಕ ಶ್ರದ್ಧೆಯಿಂದ ವ್ಯಾಸಂಗ ಮಾಡುತ್ತಿದ್ದರು. ಅವರ ಈ ಪ್ರತಿಭೆ ಮತ್ತು ಪರಿಶ್ರಮ ಇಂದಿನ ವಿದ್ಯಾರ್ಥಿಗಳಿಗೆ ದೊಡ್ಡ ಮಾದರಿಯಾಗಬೇಕು ಎಂದರು.

ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ಡಾ.ಬಾಬು ಜಗಜೀವನರಾಮ್ ಅಧ್ಯಯನ ಕೇಂದ್ರದ ಸಂಶೋಧನಾಧಿಕಾರಿ ಡಾ.ಶ್ರೀನಿವಾಸಮೂರ್ತಿ ಎಂ. ಅವರು ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಮಾತನಾಡಿ, ಡಾ.ಬಾಬು ಜಗಜೀವನ್ ರಾಮ್ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರೊಂದಿಗೆ ಸಂವಿಧಾನ ರಚನಾ ಸಮಿತಿಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದರು. ಬಾಬು ಜಗಜೀವನ್ ರಾಮ್ ಅವರು ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ದೂರದೃಷ್ಟಿಯನ್ನು ಹೊಂದಿದ್ದರು ಎಂದು ತಿಳಿಸಿದರು.

ಬಾಬು ಜಗಜೀವನ್ ರಾಮ್ ಅವರು ತಮ್ಮ 50 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಒಂದೇ ಒಂದು ಚುನಾವಣೆಯಲ್ಲೂ ಸೋಲನ್ನು ಕಾಣದ ಏಕೈಕ ಮಹಾನ್ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಸುದೀರ್ಘ ರಾಜಕೀಯ ಪಯಣ ಮತ್ತು ದೇಶಕ್ಕೆ ಅವರು ನೀಡಿದ ಕೊಡುಗೆಗಳು ಅಪಾರ ಎಂದು ಸ್ಮರಿಸಿದರು.

ಲೋಕಸಭೆಯಲ್ಲಿ ದಲಿತ ಸಮುದಾಯವನ್ನು ಸಮರ್ಥವಾಗಿ ಪ್ರತಿನಿಧಿಸಿದ ಅವರು, ದೇಶದ ರಾಜಕಾರಣದಲ್ಲಿ ದಲಿತರಿಗೆ ಸಿಗಬೇಕಾದ ಹಕ್ಕನ್ನು ಕೊಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಬಾಬುಜಿಯವರ ವ್ಯಕ್ತಿತ್ವವನ್ನು ಬೇರೆ ಯಾರೊಂದಿಗೂ ಹೋಲಿಸಬಾರದು; ಅವರೊಬ್ಬ ಅಪ್ರತಿಮ ವಿಶ್ವ ನಾಯಕ ಎಂದು ಬಣ್ಣಿಸಿದರು.

1971 ರ ಯುದ್ಧದ ಸಮಯದಲ್ಲಿ ಅವರು ರಕ್ಷಣಾ ಸಚಿವರಾಗಿ ತೆಗೆದು-ಕೊಂಡ ನಿರ್ಧಾರಗಳು ಭಾರತದ ಸಾರ್ವಭೌಮತ್ವವನ್ನು ಎತ್ತಿ ಹಿಡಿದವು. ಇಂದಿರಾ ಗಾಂಧಿಯವರನ್ನು ಪ್ರಧಾನಮಂತ್ರಿಯಾಗಿ ಮಾಡುವಲ್ಲಿ ಮತ್ತು ಆ ಕಾಲದ ರಾಜಕೀಯ ಬಿಕ್ಕಟ್ಟುಗಳನ್ನು ನಿಭಾಯಿಸುವಲ್ಲಿ ಅವರ ಪಾತ್ರ ಅತ್ಯಂತ ದೊಡ್ಡದಾಗಿತ್ತು ಎಂದು ತಿಳಿಸಿದರು.

ಬಿಹಾರದ ಚಾಂದ್ವಾ ಗ್ರಾಮದ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಡಾ.ಬಾಬು ಜಗಜೀವನ್ ರಾಮ್ ಅವರು ಅವರು, ತಂದೆ ಶೋಭಿ ರಾಮ್ ಮತ್ತು ತಾಯಿ ವಾಸಂತಿ ದೇವಿ ಅವರ ಮಾರ್ಗದರ್ಶನದಲ್ಲಿ ಬೆಳೆದು, ಸಂತ ರವಿದಾಸರ ಮತ್ತು ಸಂತ ಶಿವನಾರಾಯಣ ಪಂಥದ ಪ್ರಭಾವದಿಂದ ಸಾತ್ವಿಕ ಗುಣ ಮತ್ತು ಸಜ್ಜನಿಕೆಯನ್ನು ತಮ್ಮ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದರು ಎಂದು ವಿವರಿಸಿದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಅವರು ಸಂವಿಧಾನ ಪ್ರಸ್ತಾವನೆ ಬೋಧಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಡಾ.ಬಾಬು ಜಗಜೀವನರಾಮ್ ಜನಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಪಂಪಾಪತಿ, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್ ಮಂಜುನಾಥ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ನವೀನ್ ಕುಮಾರ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು, ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಸತಿ ನಿಲಯದ ವಿದ್ಯಾರ್ಥಿ- ವಿದ್ಯಾರ್ಥಿನಿಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಜಯಂತಿಯ ಅಂಗವಾಗಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

*ಸಂಭ್ರಮದ ಮೆರವಣಿಗೆ:*

ಡಾ.ಬಾಬು ಜಗಜೀವನ್ ರಾಮ್ ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಗೆ ಡಾ.ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಚಾಲನೆ ನೀಡಲಾಯಿತು. ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಿ ಮೆರಗು ನೀಡಿದವು.

ಮೆರವಣಿಗೆಗೆ ಮುನ್ನ ನಗರದ ನಲ್ಲಚೇರುವು ಪ್ರದೇಶದ ಡಾ.ಬಾಬು ಜಗಜೀವನ್ ರಾಮ್ ಅವರ ಪುತ್ಥಳಿಗೆ ಗಣ್ಯರು ಮಾಲಾರ್ಪಣೆ ಮಾಡಿದರು.

*ಆಕರ್ಷಕ ಸ್ತಬ್ಧಚಿತ್ರ:*

ಮೆರವಣಿಗೆಯಲ್ಲಿ ಸಾರಿಗೆ ಇಲಾಖೆ ವತಿಯಿಂದ ರೂಪಿಸಿದ್ದ ವಿಧಾನಸೌಧ ಸ್ತಬ್ಧಚಿತ್ರ, ಕೃಷಿ ಇಲಾಖೆ, ತೋಟಗಾರಿಕೆ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ವತಿಯಿಂದ ವಿವಿಧ ಸರ್ಕಾರದ ಕಾರ್ಯಕ್ರಮಗಳು ಮತ್ತು ವಿವಿಧ ಯೋಜನೆಗಳ ಮಾಹಿತಿ ಕುರಿತ ಸ್ತಬ್ಧಚಿತ್ರಗಳು ಗಮನ ಸೆಳೆದವು.

ಮೆರವಣಿಗೆಯು ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಬೆಂಗಳೂರು ರಸ್ತೆ, ಹಳೆಯ ಬ್ರೂಸ್ ಪೇಟೆ ಪೊಲೀಸ್ ಠಾಣೆ ಮುಂಭಾಗ, ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.

## ಬಾಬು ಜಗಜೀವನ್ ರಾಮ್ ರವರ 119 ನೇ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಆವರಣದಲ್ಲಿ ಆಯೋಜಿಸಿದ್ದ ಹಸಿರುಕ್ರಾಂತಿಯ ಹರಿಕಾರ ಬಾಬು ಜಗಜೀವನ್ ರಾಮ್ ರವರ

119 ನೇ ಜಯಂತಿ ಸಮಾರಂಭವನ್ನು ದೀಪಾ ಬೆಳಗಿಸುವ ಮೂಲಕ ಮಾಜಿ ಶಾಸಕರಾದ ಹಾಗೂ ಸ್ನೇಹಜೀವಿ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿ ನಂತರ ಅವರ ಬಾಬೂಜಿ ಜಗ ಜೀವನ್ ರಾಮ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ಸೂಚಿಸಿ

ನಂತರ ಕಾರ್ಯಕ್ರಮದಲ್ಲಿ ಮಾತನಾಡಿ ಭಾರತ ದೇಶದಲ್ಲಿ ತಾಂಡವಾಡುತ್ತಿದ್ದ ಅಸ್ಪೃಶ್ಯತೆ ಮತ್ತು ಅಸಮಾನತೆಯನ್ನು ಹೋಗಲಾಡಿಸಲು ಬಾಪೂಜೀ, ಬಾಬಾ, ಬಾಬುಜೀ ಯವರ ಕೊಡುಗೆ ಅಪಾರವಾಗಿದ್ದು, ಅವರಗಳನ್ನು ನಾವುಗಳು ನಿತ್ಯ ಪ್ರಾಥಃಸ್ಮರಣೆಯವಾಗಿದೆ

ಬಾಪೂಜೀ ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿ ರಾಷ್ಟ್ರಪಿತರಾದರೆ, ಬಾಬಾ ಸಾಹೇಬ್ ಡಾ.ಬಿ ಆರ್. ಅಂಬೇಡ್ಕರ್ ಅವರು ಸಂವಿಧಾನ ಶಿಲ್ಪಿಯಾಗಿ, ಬಾಬು ಜಗಜೀವನರಾಮ್ ರವರು ಹಸಿರು ಕ್ರಾಂತಿಯ ಹರಿಕಾರರಾಗಿ ಭಾರತ ದೇಶಕ್ಕೆ ಸಲ್ಲಿಸಿದ ಸೇವೆ ಅನನ್ಯವಾಗಿದೆ. ಭಾರತದ ರಾಜಕಾರಣದ ಅರ್ಧ ದಶಕಕ್ಕೂ ಮೀರಿದ ಅವಧಿಯಲ್ಲಿ ಡಾ ಬಾಬು ಜಗಜೀವನರಾಮ್ ರವರುವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆ ಚಾರಿತ್ರಿಕ ದಾಖಲೆಯಾಗಿದೆ.

## ವಿವಿಧಡೆ ಬಾಬು ಜಗಜೀವನ್ ರಾಮ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಪುರಸಭೆ, ನಾಡ ಕಾರ್ಯಾಲಯ, ಹೈಟೆಕ್ ಗ್ರಂಥಾಲಯ, ಸರಕಾರಿ ಪ್ರಥಮ ಧರ್ಜೆ ಕಾಲೇಜು, ರೈತ ಸಂಪರ್ಕ ಕೇಂದ್ರ, ವಿದ್ಯಾರ್ಥಿಗಳ ವಸತಿ ನಿಲಯ, ಬನ್ನಿಗೋಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜನತಾಪುರ ಸರ್ಕಾರಿ ಶಾಲೆ ಸೇರಿದಂತೆ ವಿವಿಧ ಶಾಲಾ, ಕಾಲೇಜು ಸಂಘ ಸಂಸ್ಥೆಗಳಲ್ಲಿ ಬಾಬು ಜಗಜೀವನ್ ರಾಮ ಜಯಂತಿ ಆಚರಣೆ ರವಿವಾರ ಮಾಡಿದರು.

ನಾಡ ಕಾರ್ಯಾಲಯ ಉಪ ತಹಸಿಲ್ದಾರ್ ತುಳಜಾ ರಾಮ್ ಸಿಂಗ್, ಪುರಸಭೆ ಕಾರ್ಯಾಲಯ ಬಾಬು ಜಗಜೀವನ್ ರಾಮ ಅವರ ಭಾವಚಿತ್ರಕ್ಕೆ ಮುಖಂಡ ಸಂಗಪ್ಪ ಹಿರೇಮನಿ, ಪುರಸಭೆ ಮುಖ್ಯಾಧಿಕಾರಿ, ಹೈಟೆಕ್ ಗ್ರಂಥಾಲಯ ಗ್ಯಾನಪ್ಪ ದಫೇದಾರ, ರೈತ ಸಂಪರ್ಕ ಕೇಂದ್ರದಲ್ಲಿ ಶ್ರೀಶೈಲ ಭೋವಿ, ವಿದ್ಯಾರ್ಥಿಗಳ ವಸತಿ ನಿಲಯ ಮಹಮ್ಮದ್ ಶಫಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ ಡಾ. ಸಿದ್ದರಾಮ ಪಾಟೀಲ್, ಬನ್ನಿಗೋಳ ಶಾಲೆ ಮುಖ್ಯಗುರುಗಳು ಶಿವಪ್ಪ ಕಲ್ಲೂರ್, ಜನತಾಪುರ ಶಾಲಾ ಶಿಕ್ಷಕ ಮೌನೇಶ್ ವಿಶ್ವಕರ್ಮ, ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಮುಖ್ಯಸ್ಥರು ಪೂಜಿ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ಶರಣಪ್ಪ ಕಟ್ಟಿಮನಿ, ಬಸವರಾಜ ಬಂಕದ ಮನಿ, ಬಸವರಾಜ ಹುನೂರ, ಹನುಮಂತ ಬಿಲ್ಲಿ, ಹನುಮಂತ ಆಸಿಹಾಳ್, ಬಸವರಾಜ್ ಹವಳಿ, ಪುರಸಭೆ ಸಿಬ್ಬಂದಿಗಳು, ಶಾಲಾ ಸಿಬ್ಬಂದಿಗಳು, ಸಂಘ ಸಂಸ್ಥೆ ಮುಖ್ಯಸ್ಥರು ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕ್ಯಾಮರಾಮೆನ್ ಕುಟುಂಬಕ್ಕೆ 3ಲಕ್ಷ ಪರಿಹಾರ ಮಂಜೂರು ಮಾಡಿದ ಮುಖ್ಯಮಂತ್ರಿ

ಮಲ್ಲಮ್ಮ ನುಡಿ ವಾರ್ತೆ, ಬೆಂಗಳೂರು

ಕೊಪ್ಪಳದ ಟಿವಿ 5 ಕ್ಯಾಮರಮೆನ್ ರಾಜು ಅಂಗಡಿ ಅವರ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 3ಲಕ್ಷ ರೂ ಪರಿಹಾರ ಬಿಡುಗಡೆ ಮಾಡಿದ್ದಾರೆ.

ಕ್ರೀಯಾಶೀಲ ರಾಜು ಅಂಗಡಿ, ತೀವ್ರ ಅನಾರೋಗ್ಯದಿಂದ ಮೃತಪಟ್ಟಿದ್ದರು. ಈ ಬಗ್ಗೆ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ)

ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದು ನೆರವು ಕೋರಿದ್ದರು.

ಸಚಿವರು&ಕೆಯುಡಬ್ಲ್ಯೂಜೆ ಮನವಿ ಮೇರೆಗೆ ಪರಿಹಾರ ಮಂಜೂರು ಮಾಡಿದ ಸಿಎಂ ಸಿದ್ದರಾಮಯ್ಯಅವರಿಗೆ, ಈ ನಿಟ್ಟಿನಲ್ಲಿ ಸಹಕಾರ ನೀಡಿದ ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರಿಗೆ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ಧನ್ಯವಾದ ಸಲ್ಲಿಸಿದೆ.

## ಹಣದ ಹಿಂದೆ ಹೋಗಬೇಡಿ: ಬಸವಲಿಂಗ ಅವಧೂತರು



ಭಾಲ್ಕಿ : ಪ್ರತಿಯೊಬ್ಬರು ಹಣದ ಹಿಂದೆ ಹೋಗಬೇಡಿ . ಅವಶ್ಯಕತೆಗೆ ತಕ್ಕಂತೆ ಹಣ ಸಂಪಾದಿಸಿ ನೆಮದಿಯ ಜೀವನ ಸಾಗಿಸಿ ಎಂದು ಬಸವಕಲ್ಯಾಣ, ಮಲ್ಲಯ್ಯಗಿರಿ ಮತ್ತು ದೇಗಲಮಡಿ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರು ನುಡಿದರು.

ಭಾಲ್ಕಿ ತಾಲ್ಲೂಕಿನ ತಳವಾಡ (ಕೆ) ಗ್ರಾಮದಲ್ಲಿಶುಕ್ರವಾರ ನಡೆದ ಮಹಾದೇವ ದೇವಾಲಯದ 25ನೇ ಜಾತ್ರಾ ಮಹೋತ್ಸವದ ಪ್ರಯುಕ್ತ ಆಯೋಜಿಸಿದ್ದಪ್ರವಚನಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿಯೊಬ್ಬಮನುಷ್ಯರು ಇನೊಬ್ಬರ ಕಷ್ಟ- ಸುಖದಲ್ಲಿ ಭಾಗಿಯಾಗಿ ಕೈಲಾದಷ್ಟು ಸಹಾಯ ಮತ್ತು ಸಹಕಾರ ನೀಡಬೇಕು ಎಂದು ಸಲಹೆ ನೀಡಿದರು

ವೃದ್ಧಾಪ್ಯದಲ್ಲಿ ಇರುವವರನ್ನ ಕಡೆಗಾಣಿಸಬೇಡಿ ಇರುವಷ್ಟು ದಿನ ಅವರ ಸೇವೆ ಮಾಡಬೇಕು. ಯಾವ ಕಾರಣಕ್ಕೂ ಅವರ ಮನಸ್ಸು ನೋಯಿಸಬಾರದು ಎಂದು ತಿಳಿಸಿದರು. ಗ್ರಾಮದ ಎಲ್ಲ ಸಮಾಜದ ಜನರು ಸಹೋದರರಂತೆ ಒಗ್ಗಟ್ಟಿನಿಂದ ಬದುಕು ಸಾಗಿಸಬೇಕು. ಅಂದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಎಂದು ಕಿವಿಮಾತು ಹೇಳಿದರು

ಮಾನವ ಜನ್ಮ ಇರುವುದು ಒಂದೇ. ಜಾತಿ, ಮತ, ಪಂಥವೆನ್ನದೆ ಪರಸ್ಪರ ಪ್ರೀತಿ, ವಿಶ್ವಾಸ, ಸೌಹಾರ್ದದಿಂದ ಬದುಕು ಸಾಗಿಸಬೇಕು. ಪರೋಪಕಾರ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಯಾರಿಗೂ ಕೇಡು ಉಂಟು ಮಾಡಬಾರದು ಎಂದು ಕಿವಿಮಾತು ಹೇಳಿದರು. ಆಲಸ್ಯದಿಂದ ರಕ್ತದೊತ್ತಡ, ಮಧುಮೇಹದಂಥ ರೋಗಗಳು ಬರುತ್ತವೆ. ಶ್ರಮ ಸಂಸ್ಕೃತಿ ರೂಢಿಸಿಕೊಂಡವರ ಬಳಿ ಯಾವ ರೋಗಗಳೂ ಸುಳಿಯುವುದಿಲ್ಲ. ಕಾರಣ, ನಿತ್ಯ ಸತ್ಯಶುದ್ಧ ಕಾಯಕ ಮಾಡಬೇಕು. ಅದರಿಂದ ಬರುವ ಆದಾಯದಲ್ಲಿ ಒಂದಿಷ್ಟು ದಾಸೋಹಕ್ಕೂ ಬಳಸಬೇಕು ಎಂದು ತಿಳಿಸಿದರು.

ಈ ಊರಿನ ಆರಾಧ್ಯದೈವ ಮಹಾದೇವ ಭಕ್ತರ ಸಂಕಷ್ಟ ಪರಿಹರಿಸುತ್ತಾನೆ ಎಂದು ಹೇಳಿದರು ಇದಕ್ಕೂ ಮುನ್ನ ಗ್ರಾಮದ ಮುಖ್ಯ ರಸ್ತೆಯಿಂದ ಮಹಾದೇವ ಮಂದಿರದವರೆಗೆ ಡಾ. ಬಸವಲಿಂಗ ಅವಧೂತರನ್ನು ಬೆಳ್ಳಿ ರಥದಲ್ಲಿ ಭವ್ಯ ಮೆರವಣಿಗೆಯಲ್ಲಿ ಕರೆ ತರಲಾಯಿತು.

ಕಳಸ ಹೊತ್ತ ಮಹಿಳೆಯರು, ಕೋಲಾಟ, ಡೋಳು ಕುಣಿತ, ಯುವಕರ ನರ್ತನ, ಪಟಾಕಿ ಶಬ್ದ ಮೆರವಣಿಗೆಗೆ ಕಳೆ ತಂದುಕೊಟ್ಟವು.

ಪ್ರಮುಖರಾದ ದೇವಸ್ಥಾನದ ಅಧ್ಯಕ್ಷ ಶಿವಕುಮಾರ ಪಾಟೀಲ, ಉಪಾಧ್ಯಕ್ಷ ಸೋಮನಾಥ ಕನಶೆಟ್ಟಿ, ಯುವರಾಜ ರಾಜಾಪುರೇ, ಜಗದೀಶ ಪಾಟೀಲ್, ಓಂಕಾರ ಬೋರಗೆ, ಜಗನ್ನಾಥ ಕನಶೆಟ್ಟೆ, ಗುಂಡಪ್ಪ ರಾಜಪೂರೆ, ಬಾಬು ರಾಜಪೂರೆ, ರವಿ ಪಾಟೀಲ್, ಓಂಕಾರ ಕನಶೆಟೆ, ಸಂಜುಕುಮಾರ ಭೋಸಲೆ, ಬಳವಂತರಾವ ದೇಸಾಯಿ, ಶೆಶಿಧರ ಸೀತಾ, ಸಿದ್ದು ರಾಜಾಪುರೇ ಮತ್ತಿತರರು ಪಾಲ್ಗೊಂಡಿದ್ದರು.

## ಕಡಿಮೆ ಬೆಲೆಯಲ್ಲಿ ಅರ್ಬನ್ ಹಾಲಿಡೇಸ್ ವತಿಯಿಂದ ಬೇಸಿಗೆ ಪ್ರವಾಸ ಆಯೋಜನೆ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಅರ್ಬನ್ ಹಾಲಿಡೇಸ್ ಟೂರ್ಸ್ ಅಂಡ್ ಟ್ರಾವೆಲ್ಸ್ ವತಿಯಿಂದ ಸಾರ್ವಜನಿಕರಿಗಾಗಿ ಬೇಸಿಗೆಯ ಪ್ರವಾಸಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಆಯೋಜಿಸಲಾಗಿದೆ ಈ ಬೇಸಿಗೆಯ ಪ್ರವಾಸಗಳನ್ನು ನಗರದ ಮತ್ತು ಸುತ್ತಮುತ್ತಲ ಜನತೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಂಸ್ಥೆಯ ಮಾರ್ಕೆಟಿಂಗ್ ಮ್ಯಾನೇಜರ್ ನಿತಿನ್ ತಿಳಿಸಿದರು.

ಅವರು ಇಂದು ನಗರದ ನೆಹರು ಕಾಲೋನಿ ಮುಖ್ಯ ರಸ್ತೆಯ ಕಂಪನಿಯ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿ ಕಂಪನಿ ವತಿಯಿಂದ ಪ್ರತಿಯೊಬ್ಬರಿಗೂ ಉತ್ತಮವಾದ ಪ್ರಯಾಣ ಸುಂದರವಾದ ಭಾರತದ ಪ್ರವಾಸಗಳನ್ನು ಜೊತೆಗೆ ರೋಚಕವಾದಂತ ವಿದೇಶಿ ಪ್ರವಾಸಗಳನ್ನು ಹಮ್ಮಿಕೊಳ್ಳಲಾಗುತ್ತದೆ ಈ ಪ್ರವಾಸದಲ್ಲಿ ಪ್ರತಿಯೊಬ್ಬ ಪ್ರವಾಸಿಯು ತಮ್ಮ ಪ್ರವಾಸವನ್ನು ಅತ್ಯಂತ ಸುಖ-ಕರ ಹಾಗೂ ಸಂತಸವಾಗಿರಲು ಆರಾಮದಾಯಕ ಪ್ರಯಾಣವನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಒದಗಿಸುವುದು ಪ್ರತಿಯೊಬ್ಬ ಪ್ರವಾಸಿಯು ಮರೆಯಲಾಗದಂತಹ ಅನುಭವಗಳನ್ನು ಹೊಂದಲು ಉತ್ತಮ ಸೇವೆಯನ್ನು ಒದಗಿಸುವುದರ ಜೊತೆಗೆ ಯಾವುದೇ ತೊಂದರೆ ಇಲ್ಲದಂತ ಟೂರ್ ಪ್ಯಾಕೇಜ್ ಗಳನ್ನು ನೀಡುವುದು ನಮ್ಮ ಕಂಪನಿಯ ಉದ್ದೇಶವಾಗಿದೆ ಇಂತಹ ಪ್ರವಾಸಗಳನ್ನು ಆಯೋಜಿಸುವ ಮೂಲಕ ನಮ್ಮ ಕಂಪನಿ ಪ್ರವಾಸಿಗರಿಗಾಗಿ ಗೋವಾ, ವೈನಾಡ್, ಊಟಿ, ಕೂರ್ಗ್ ಮತ್ತು ಮತ್ತು ಉತ್ತರ ಭಾರತದ ಆಗ್ರಾ ಮಥುರಾ, ದೆಹಲಿ ವಾರಣಾಸಿ ( ಕಾಶಿ) ಸೇರಿದಂತೆ ಅಂತರಾಷ್ಟ್ರೀಯ ಪ್ರವಾಸ ಸ್ಥಳಗಳಾದ ಥೈಲ್ಯಾಂಡ್, ವಿಟ್ನಾಂ, ಅಂಡಮಾನ್ ನಿಕೋಬಾರ್ ಸೇರಿದಂತೆ ವಿವಿಧ ದೇಶಗಳಿಗೆ ಪ್ರವಾಸಗಳನ್ನು ಆಯೋಜಿಸಲಾಗುವುದು, ಪ್ರತಿವರ್ಷ ಕಂಪನಿಯು ಇಂಥ ಪ್ರವಾಸಗಳನ್ನು ಆಯೋಜಿಸುವ ಮೂಲಕ ಪ್ರವಾಸಿಗರ ವಿಶ್ವಾಸಾರ್ಹತೆಯನ್ನು ಗಳಿಸಿದೆ ಜೊತೆಗೆ ಕಂಪನಿಯು ವಿದೇಶಿ ಮತ್ತು ದೇಶಿಯ ಹಾಗೂ ಅಂತರಾಷ್ಟ್ರೀಯ ಪ್ರವಾಸಗಳನ್ನು ಅತ್ಯಂತ ದರದಲ್ಲಿ ಉತ್ತಮ ರೀತಿಯ ಹಾಗೂ ಗುಣಮಟ್ಟದ ಆಹಾರದ ಜೊತೆಗೆ ಥ್ರೀ ಸ್ಟಾರ್ ಮತ್ತು ಫೋರ್ ಸ್ಟಾರ್ ಹೋಟೆಲ್ ಗಳಲ್ಲಿ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ವ್ಯವಸ್ಥೆ ಮಾಡಲಾಗುವುದು ನಮ್ಮ ಕಂಪನಿಯ ಇಂಥ ಪ್ರವಾಸ ಕಾರ್ಯಕ್ರಮಗಳನ್ನು ಕುಟುಂಬ ಮತ್ತು ಆತ್ಮೀಯ ಬಳಗದಲ್ಲಿ ಬಂದು ಆನಂದಿಸಬಹುದು ಪ್ರವಾಸಿಗರ ಸುರಕ್ಷಿತ ಪ್ರಯಾಣವೇ ನಮ್ಮ ಕಂಪನಿಯ ಗುರಿ ಎಂದು ನಿತಿನ್ ತಿಳಿಸಿದರು. ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗಾಗಿ ನಿತಿನ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮೊಬೈಲ್ ಸಂಖ್ಯೆ 7892138474 ಇವರನ್ನು ಸಂಪರ್ಕಿಸಬಹುದು.

## ಟಿವಿ, ಧಾರಾವಾಹಿ ವ್ಯಾಮೋಹದಿಂದ ದಾರ್ಮಿಕ ಕಾರ್ಯ ಕಣ್ಮರೆ: ಶ್ರೀನಿರಂಜನ ಪ್ರಭುದೇವರು

• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು



ಇಂಧಿನ ಆಧುನಿಕ ಒತ್ತಡದ ಜೀವನದಲ್ಲಿ ಟಿವಿ, ಧಾರಾವಾಹಿ, ಮೊಬೈಲ್ ವ್ಯಾಮೋಹದಿಂದ ಸಾಹಿತ್ಯ, ಸಂಸ್ಕೃತಿ, ಶಿವಾನುಭವಸಂಪದ ಸೇರಿದಂತೆ ಸೇರಿದಂತೆ ಇತರೆ ವಿಚಾರಧಾರೆಗಳು ಕಣ್ಮರೆಯಾಗುತ್ತಿವೆ ಎಂದು ಕುರುಗೋಡು ಕೊಟ್ಟೂರುಸ್ವಾಮಿ ಶಾಖಾಮಠದ ಪೀಠಾಧಿಪತಿ ಶ್ರೀನಿರಂಜನ ಪ್ರಭುದೇವರು ಕಳವಳವ್ಯಕ್ತಪಡಿಸಿದರು.

ಅವರು ಪಟ್ಟಣದ ಬಳ್ಳಾರಿ ರಸ್ತೆಯಲ್ಲಿನ ಕೊಟ್ಟೂರುಸ್ವಾಮಿ ಶಾಖಾಮಠದಲ್ಲಿ ಪೂಜ್ಯ ಶ್ರೀಜಗದ್ಗುರು ಕೊಟ್ಟೂರು ಶ್ರೀ ಬಸವಲಿಂಗ ಮಹಾಸ್ವಾಮಿಗಳ

ಅಪ್ಪಣೆ ಹಾಗು ಅವರ ದಿವ್ಯಸಾನಿಧ್ಯದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಮನುಷ್ಯರು ಶಿವಾನುಭವ ಸಂಪದ ಕಾರ್ಯಕ್ರಮದಿಂದ ಉತ್ತಮವಾದ ವಿಚಾರಗಳನ್ನು ತಿಳಿದುಕೊಳ್ಳಲು ಅನುಕೂಲವಾಗಿದೆ. ಆದರೆ ಇದ-ರಿಂದ ಯಾರು ಕಳೆದುಕೊಳ್ಳುವುದು ಏನು ಇಲ್ಲ ಸ್ಪಷ್ಟಪಡಿಸಿದರು. ಸಂತ, ಶರಣರ ಮತ್ತು ಮಹಾತಪಸ್ವಿಗಳ ವಿಚಾರಧಾರೆಗಳೂ ಇಂದಿನ ಯುವಪೀಳಿಗೆಗೆ ಬಹಳ ಅನುಕೂಲವಾಗಿವೆ. ಆದ್ದರಿಂದ ಎಲ್ಲರೂ ಶರಣರ ಮಾರ್ಗದರ್ಶನದಲ್ಲಿ ಮುನ್ನಡೆಯೋಣ ಎಂದು ಸಾಧರಪಡಿಸಿದರು.

ಬಳ್ಳಾರಿಯ ಕಿಷ್ಕಿಂದ ವಿಶ್ವವಿದ್ಯಾಲಯದ ಪ್ರೋಫೆಷರ್ ಮಂಜುನಾಥ ಅವರು ಶಿವಾನುಭವಸಂಪದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಬುದ್ಧ, ಬಸವಣ್ಣ, ಅಂಬೇಡ್ಕರ್, ಕನಕದಾಸರು ಸೇರಿದಂತೆ ಮೊದಲಾದ ಮಹಾನಯಕರು ಕಾಯಕವೇ ಕೈಲಾಸ ಎಂದು ಸಾರಿ ಹೇಳಿದ್ದಾರೆ. ಆದ್ದರಿಂದ ಎಲ್ಲರೂ ದುಡಿದು ತಿನ್ನುವ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಬೇಕೆಂದು ತಿಳಿಯಪಡಿಸಿದರು. ಕುರುಗೋಡು ತಹಶೀಲ್ದಾರ್

ನರಸಪ್ಪ ಮತ್ತು ಜಾನಪದ ಸಾಹಿತ್ಯ ಅಕಾಡೆಮಿ ಕುರುಗೋಡು ತಾಲೂಕು ಅಧ್ಯಕ್ಷ ಚಾನಾಳು ಅಂಬರೇಷ್ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಇಂದಿನ ಆಧುನಿಕ ಪ್ರಪಂಚದಲ್ಲಿ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ

ಸಾಹಿತ್ಯ, ಸಂಸ್ಕೃತಿ, ಪರಂಪರೆ ಎಂಬ ವಿಚಾರಧಾರೆಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು, ಅಂದಾಗ ಮಾತ್ರ ಮಕ್ಕಳು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬಾಳಲು ಸಾಧ್ಯ ಎಂದು ನುಡಿದರು. ಕೊಟ್ಟೂರುಸ್ವಾಮಿ ಶಾಖಾಮಠದ ಸೇವಾಬಳಗದ ಚಾನಾಳು ಅಭಿಸ್ವಾಗತಿಸಿದರು. ಎಸ್‌ಡಿಎಂ. ಸದಾಶಿವಸ್ವಾಮಿ ಕಾರ್ಯಕ್ರಮವನ್ನು ನಿರೂಪಿಸಿದರು. ನೆರೆದ ಸಹಸ್ರಾರು ಮಂದಿ ಭಕ್ತರಿಗೆ ಚಾನಾಳು ಆನಂದ ಅವರು ಪ್ರಸಾದಸೇವೆ ಮಾಡಿ ಭಕ್ತಿಮೆರೆದರು.

ಶ್ರೀಮಠದ ವಿಜಯಕುಮಾರಶಸ್ತ್ರಿ, ಹಿರಿಯ ಮುಖಂಡ ಕೆಎಂ. ಉಮಾಪತಿಗೌಡ

ಸೇರಿದಂತೆ ಅಕ್ಕಮಹಾದೇವಿ ಬಳದ ಮಹಿಳೆಯರು, ಕೊಟ್ಟೂರುಸ್ವಾಮಿ ಮಠದ ಸೇವಾಬಳಗವು ಕುರುಗೋಡು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಶ್ರೀಮಠದ ಭಕ್ತರು ಪ್ರಸಾದ ಸ್ವೀಕರಿಸಿ ಶ್ರೀಕೊಟ್ಟೂರುಸ್ವಾಮಿಗಳ ಕೃಪೆಗೆ ಪಾತ್ರರಾದರು.

## ಬಾಬು ಜಗಜೀವನ್ ರಾಮ್ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಸುರಪುರ ತಾಲೂಕಿನ ಕವಡಿಮಟ್ಟಿ ಗ್ರಾಮದಲ್ಲಿ ಭಾನುವಾರ ನಡೆದ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಮ್ ಅವರ 119ನೇ ಜಯಂತಿ ಆಚರಣೆ ಮಾಡಲಾಯಿತು.

ಇದೇ ವೇಳೆ ಕನ್ನಡ ಸೇನೆ ಸುರುಪುರ ತಾಲೂಕು ಅಧ್ಯಕ್ಷರು ಮಲ್ಲು ಹೊಸಮನಿ ಅವರು ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿದರು.

ನಂತರ ಮಾತನಾಡಿದ ಅವರು ಸಮಾಜದಲ್ಲಿನ ಅಸ್ಪೃಶ್ಯತೆಯನ್ನು ಹೋಗಲಾಡಿಸುವಲ್ಲಿ ಬಾಬೂಜಿ ಕೊಡುಗೆ ಅಪಾರವಾಗಿದೆ. ಜಾತಿ ವ್ಯವಸ್ಥೆಯನ್ನು ತೊಡೆದುಹಾಕಿ ಎಲ್ಲರಲ್ಲೂ ಸಮಾನತೆ ತರುವುದು ಅವರ ಮುಖ್ಯ ಉದ್ದೇಶವಾಗಿತ್ತು. ದೇಶದಲ್ಲಿ ಸಮರ್ಪಕವಾಗಿ ಎಲ್ಲರಿಗೂ ಆಹಾರ ದೊರೆಯದೇ ಇದ್ದಾಗ ಕೇಂದ್ರದಲ್ಲಿ ಕೃಷಿ ಸಚಿವರಾಗಿ ಕೃಷಿಯಲ್ಲಿ ಗಣನೀಯ ಬದಲಾವಣೆ ತಂದರು. ಹಸಿರು ಕ್ರಾಂತಿ ರೂಪಿಸಿ ರೈತರನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸಿದರು. ಆಹಾರ ಉತ್ಪಾದನೆ ಹೆಚ್ಚಿಸಿದರು' ಎಂದು ಬಣ್ಣಿಸಿದರು.

'ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪಟ್ಟಿಗೆ ಭಾರತವನ್ನು ಸೇರಿಸುವಲ್ಲಿ ಜಗಜೀವನ ರಾಮ್ ಅವರ ಪಾತ್ರ ಮಹತ್ವದ್ದಾಗಿದೆ. ಸಾಮಾಜಿಕ ಸುಧಾರಣೆ, ಹಸಿರು ಕ್ರಾಂತಿ ಅಲ್ಲದೇ ಇನ್ನೂ ಹಲವಾರು ಕ್ಷೇತ್ರಗಳ ಅಭಿವೃದ್ಧಿಯಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ' ಎಂದು ಹೇಳಿದರು. ಈ ಸಂದರ್ಭದಲ್ಲಿ ಕವಡಿಮಟ್ಟಿ ಗ್ರಾಮದ ಮುಖಂಡರು ತಿಪ್ಪಣ್ಣ ಹಳಿಮನಿ, ತಿಪ್ಪಣ್ಣ ಹೊಸಮನಿ, ಬಸಪ್ಪ ಹೊಸಮನಿ, ಯಮನಪ್ಪ ಹೊಸಮನಿ, ದುರ್ಗಪ್ಪ

ಕರ್ನಾಟಕ ಸರ್ಕಾರ
**ತೋಟಗಾರಿಕೆ ಇಲಾಖೆ**
**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ರವರ ಕಾರ್ಯಾಲಯ, ಬೀದರ**
E-mail:sadhssbidar@gmail.com, ಮೊಬೈಲ್ ಸಂಖ್ಯೆ: 9986637241

ಸಂಖ್ಯೆ:ಹಿಸತೋನಿ:ರಾವ:ಬೀ:ತಾಸ/03:2026–27/ ದಿನಾಂಕ:02.04.2026

**ಇ–ಹರಾಜು ಪ್ರಕಟಣೆ**

2026–27ನೇ ಸಾಲಿನ ಬೀದರ ಜಿಲ್ಲೆಯ ತೋಟಗಾರಿಕೆ ಇಲಾಖೆಯಡಿಯಲ್ಲಿ ಬರುವ ವಿವಿಧ ತೋಟಗಾರಿಕೆ ಕ್ಷೇತ್ರ/ನರ್ಸರಿಗಳಲ್ಲಿ ವಿವಿಧ ಹಣ್ಣಿನ ಫಸಲು ಈ ಕೆಳಗಿನಂತೆ ಇ–ಹರಾಜು ಮೂಲಕ ವಿಲೇವಾರಿ ಮಾಡಲು ಪ್ರಕಟಣೆಕರೆಯಲಾದೆ. ಈ ಕೆಳಗಿನಂತೆ ಒದಿಕೊಳ್ಳತಕ್ಕದ್ದು. https://kppp.karnataka.gov.in ಮೂಲಕ ವಿಲೇವಾರಿ ಮಾಡಲಾಗುವುದು.ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ | ಕ್ಷೇತ್ರದ ಹೆಸರು | ಹರಾಜು ಮಾಡುವ ಫಸಲು/ಹರಾಜು ಸಂಖ್ಯೆ | ಇ.ಎಂ.ಡಿ. ಮೊತ್ತ | ಇ–ಹರಾಜಿನಲ್ಲಿ ಭಾಗವಹಿಸುವ ಕೊನೆಯ ದಿನಾಂಕ ಮತ್ತು ಸಮಯ | ಲೈವ್ ಹರಾಜು ಪ್ರಾರಂಭ ದಿನಾಂಕ ಮತ್ತು ಸಮಯ | ಲೈವ್ ಹರಾಜು ಪ್ರಾರಂಭ ದಿನಾಂಕ ಮತ್ತು ಸಮಯ |
|---|---|---|---|---|---|---|
| 1. | ಹಳ್ಳಿ ತೋಟಗಾರಿಕೆ ಕ್ಷೇತ್ರ ತಾ: ಬಸವಕಲ್ಯಾಣ | ಮಾವು KSHD/2026-27/ AUCTION2164 | 15000/– | 09–04–2026, ಬೆಳಿಗ್ಗೆ 10.00 ಗಂಟೆವರೆಗೆ | 09–04–2026, ಬೆಳಿಗ್ಗೆ 11.00 ಗಂಟೆಯಿಂದ | 09–04–2026, ಮದ್ಯಾಹ್ನ 1.30 ಗಂಟೆವರೆಗೆ |
| 2. | ರೇಕುಳಗಿ ತೋಟಗಾರಿಕೆಕ್ಷೇತ್ರ | ಮಾವು KSHD/2026-27/ AUCTION2166 | 5000/– | 10–04–2026, ಬೆಳಿಗ್ಗೆ 10.00 ಗಂಟೆವರೆಗೆ | 10–04–2026, ಬೆಳಿಗ್ಗೆ 11.00 ಗಂಟೆಯಿಂದ | 10–04–2026, ಮದ್ಯಾಹ್ನ 1.30 ಗಂಟೆವರೆಗೆ |
| 3. | ನಿರ್ಣಾ ನರ್ಸರಿ ತಾ: ಹುಮನಾಬಾದ | ಸೀಬೆ KSHD/2026-27/ AUCTION2169 | 1000/– | 13–04–2026, ಬೆಳಿಗ್ಗೆ 10.00 ಗಂಟೆವರೆಗೆ | 13–04–2026, ಬೆಳಿಗ್ಗೆ 11.00 ಗಂಟೆಯಿಂದ | 13–04–2026, ಮದ್ಯಾಹ್ನ 1.30 ಗಂಟೆವರೆಗೆ |
| 4. | ಎ.ಪಿ.ಓ. ತೋಟಗಾರಿಕೆ ಕ್ಷೇತ್ರ ಹುಮನಾಬಾದ | ಮಾವು KSHD/2026-27/ AUCTION2170 | 1000/– | 10–04–2026, ಮದ್ಯಾಹ್ನ 1.30 ಗಂಟೆವರೆಗೆ | 10–04–2026, ಮದ್ಯಾಹ್ನ 3.00 ಗಂಟೆಯಿಂದ | 10–04–2026, ಸಂಜೆ 5.00 ಗಂಟೆವರೆಗೆ |

- ಆದಾಗ್ಯೂ ಇ–ಹರಾಜು ಬಾಕಿ ಉಳಿದಲ್ಲಿ ದಿನಾಂಕ:15–04–2026 ರಂದು ಬಹಿರಂಗ ಹರಾಜು ಪ್ರಕ್ರಿಯೆ ನಡೆಸಲಾಗುವುದು.
- ನಿಬಂಧನೆಗಳು ಅನ್ವಯಿಸುತ್ತವೆ.ಹಾಗೂ ಹೆಚ್ಚಿನ ಮಾಹಿತಿಗಾಗಿ ಮೊ: 9986637241 ಗೆ ಸಂಪರ್ಕಿಸಬಹುದಾಗಿ.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಬೀದರ

ವಾ.ಸಾ.ಸಂ.ಇ/ಬೀದರ/04/ಕೆ.ಎಸ್.ಎಂ.ಸಿ.&ಎ/2026–27

# ಮಕ್ಕಳಿಗೆ ದುಶ್ಚಟಗಳಿಂದ ದೂರವಿರಿಸಿ ಒಳ್ಳೆಯ ನಾಗರಿಕರನ್ನಾಗಿ ರೂಪಿಸಿ: ನಾಯಕ



• ಮಲ್ಲಮ್ಮ ನುಡಿ ವಾರ್ತೆ, ಕುಕನೂರ

ಮಕ್ಕಳಿಗೆ ಮೊಬೈಲ್ ನಿಂದ ದೂರವಿರಿಸಿ,ಯಾವುದೇ ಕಾರಣ–ಕ್ಕೂ ದುಶ್ಚಟಗಳ ದಾಸರನ್ನಾಗಿ ಮಾಡದೇ ಒಳ್ಳೆಯ ಶಿಕ್ಷಣ ನೀಡಿ ಸುಸಂಸ್ಕೃತರನ್ನಾಗಿ ಮಾಡಬೇಕೆಂದು ಕುಕನೂರ ಪೊಲೀಸ ಠಾಣೆಯ ನೂತನ ಪಿ. ಎಸ್. ಐ. ಶ್ರೀ ಎಸ್. ಪಿ. ನಾಯಕ ಅವರು ಹೇಳಿದರು.

ಕುಕನೂರ ತಾಲೂಕಿನ ಕಕ್ಕಿಹಳ್ಳಿ ತಾಂಡಾದಲ್ಲಿ ಗ್ರಾಮದ ಗುರು ಹಿರಿಯರೊಂದಿಗೆ ಸಭೆ ನಡೆಸಿದ ಅವರುಮಾತನಾಡುತ್ತಾನಾನೂಕೂಡ ಬಡತನದಲ್ಲಿ ಬೆಳೆದು,ಛಲದಿಂದ ಓದಿ,ಎಸ್.ಎಸ್. ಎಲ್.ಸಿ.ಮತ್ತು ಪಿ. ಯು.ಸಿ.ಯಲ್ಲಿ ಕಡಿಮೆ ಅಂಕ ಬಂದರೂ ಎದೆಗುಂದದೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸತತ ಪ್ರಯತ್ನಪಟ್ಟು ನನ್ನ ಗುರಿ ಸಾಧಿಸಿ ಪಿ. ಎಸ್. ಐ. ಹುದ್ದೆ ಪಡೆದು ಸಾರ್ವಜನಿಕ ಸೇವೆ ಮಾಡುತ್ತಿದ್ದೇನೆ.ಹೀಗಾಗಿ ಅಂಕದ ಹಿಂದೆ ಬೀಳದೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ನೀವು ಪ್ರಯತ್ನಿಸಬೇಕು ಹಾಗೂ ಪಾಲಕರು ಮಕ್ಕಳನ್ನು ಹುರಿದುಂಬಿಸಿ ಒಳ್ಳೆಯ ನಾಗರಿಕರನ್ನಾಗಿ ರೂಪಿಸಬೇಕು ಅಂದಾಗ ಮಾತ್ರ ನಿಮ್ಮ ಕನಸು ಸಾಕಾರಗೊಳ್ಳುತ್ತದೆ ಎಂದು ಹೇಳಿದರು. ನನ್ನ ಸೇವಾ ಅವಧಿಯಲ್ಲಿ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಮಟ್ಕಾ,ಇಸ್ಪಿಟ್,ಆನಲೈನ್ ಬೆಟ್ಟಿಂಗ್, ಇಂಥ ಸಮಾಜ ಘಾತುಕ ಚಟುವಟಿಕೆ ನಡೆದರೆ ಯಾವುದೇ ಮುಲಾಜಿಲ್ಲದೆ ಪ್ರಕರಣ ದಾಖಲಿಸಿ ತಪ್ಪಿತಸ್ಥರಿಗೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು,ಹೀಗಾಗಿ ಎಲ್ಲರೂ ಜಾಗೃತರಾಗಿ ಇನ್ನೂ ಮುಂದೆ ಇಂಥ ದುಷ್ಕೃತ್ಯದಲ್ಲಿ ಭಾಗವಹಿಸದೇ ಎಚ್ಚರಿಕೆಯಿಂದ ಇರಬೇಕು,ತಾಂಡಾದಲ್ಲಿ ಯಾವುದೇ ತಂಟೆ,ತಕರಾರು, ಗಂಡ ಹೆಂಡತಿ ಜಗಳ ಆದರೆ ಪೊಲೀಸ ಠಾಣೆಗೆ ಬರದೇ ನಾಯಕ, ಕಾರಭಾರಿ ಮತ್ತು ಗುರು ಹಿರಿಯರ ಸಮ್ಮುಖದಲ್ಲಿ ಬಗೆಹರಿಸಿಕೊಂಡು ಸೌಹಾರ್ದಯುತ ಜೀವನ ನಡೆಸಿ ಎಂದು ಸಲಹೆ ನೀಡಿದರು. ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಮಾತನಾಡಿ ಕುಕನೂರ ಠಾಣೆಯ ಇತಿಹಾಸದಲ್ಲಿ ನಮ್ಮ ಬಂಜಾರ ಸಮುದಾಯದ ಪೊಲೀಸ ಅಧಿಕಾರಿ ಬಂದಿದ್ದು ಇದೇ ಮೊದಲ ಬಾರಿ, ಹೀಗಾಗಿ ನಾವೆಲ್ಲ ಅವರನ್ನು ಸ್ಫೂರ್ತಿಯಾಗಿ ತೆಗೆದುಕೊಂಡು ನಮ್ಮ ಮಕ್ಕಳು ಅವರ ತರಹ ಉನ್ನತ ಮಟ್ಟದಲ್ಲಿ ಬೆಳೆಯಲು ಪ್ರೋತ್ಸಾಹಿಸಬೇಕು ಎಂದು ಹೇಳಿದರು.ಪತ್ರಕರ್ತರಾದ ಚಂದ್ರುಭಾನಾಪೂರ ಸ್ವಾಗತಿಸಿದರು. ಯಮನೂರಪ್ಪ ಕಟ್ಟಿಮನಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಸಭೆಯಲ್ಲಿ ತಾಂಡಾದ ನಾಯಕರಾದ ಬಸವಂತಪ್ಪ ನಾಯಕ,ಮೇಘರಾಜ ಬಳಿಗೇರಿ, ಶ್ರೀ ಹಂಪಣ್ಣ ಕಟ್ಟಿಮನಿ, ಪರಸಪ್ಪ ಕಾರಭಾರಿ,ಎಲ್ಲಪ್ಪಕಾರಭಾರಿ,ವಿಶ್ವನಾಥ ರತನ್, ಕೃಷ್ಣಪ್ಪ ಬಳಗೇರಿ, ಪ್ರಭು ಕಟ್ಟಿಮನಿ, ಶೀನಪ್ಪ ಇಟಗಿ,ಶರಣಪ್ಪ ಚಿಕೆನಕೊಪ್ಪ,ಚನ್ನಪ್ಪ ಹೊನ್ನುಂಚಿ, ವಾಲಪ್ಪ ತಲ್ಲೂರು,ರಾಘವೇಂದ್ರ ಬಳಗೇರಿ,ನಾಗರಾಜಭಾನಾಪುರ,ಚೇತನ ಬಳಗೇರಿ, ಮಹೇಶ ಕಾರಭಾರಿ, ಹನಮಂತಚವ್ಹಾಣ,ಕುಮಾರಬಳಗೇರಿ, ಶಿವು ಮಾರನಾಳ ,ಸೋಮಪ್ಪ ಕಾರಭಾರಿ, ರತ್ನಪ್ಪ ಹೊನ್ನುಂಚಿ, ಸೋಮಪ್ಪ ಚಿಕೆನಕೊಪ್ಪ,ವೆಂಕಟೇಶ ರಾಟಿಮನಿ,ತಿರುಪತಿ ಕಾರಭಾರಿ, ಶಶಿಕುಮಾರ ಕಾರಭಾರಿ, ವಿಜಯ ಚವ್ಹಾಣ,ಪರಸಪ್ಪ ಹುಲಗಿ, ಹಾಗೂ ಪೊಲೀಸ ಸಿಬ್ಬಂದಿಗಳಾದ ಮಂಜುನಾಥ ಮ್ಯಾಳಿ,ಶರಣಪ್ಪ ಕುಕನೂರ ಮತ್ತು ತಾಂಡಾದ ಗುರು ಹಿರಿಯರು, ಯುವಮಿತ್ರರು ಭಾಗವಹಿಸಿದ್ದರು.

# ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳಿಂದ ನೂತನ ನ್ಯಾಯಾಲಯ ಕಟ್ಟಡ ಲೋಕಾರ್ಪಣೆ



• ಮಲ್ಲಮ್ಮ ನುಡಿ ವಾರ್ತೆ, ಕೊಪ್ಪಳ

ಏಕಕಾಲಕ್ಕೆ ನಾಲ್ಕು ನ್ಯಾಯಾಲಯ ನಡೆಯುವ ಸಾಮರ್ಥ್ಯದ ಯಲಬುರ್ಗಾ ತಾಲೂಕಿನ ನೂತನ ನ್ಯಾಯಾಲಯ ಕಟ್ಟಡ ಲೋಕಾರ್ಪಣೆ ಮೂಲಕ ಯಲಬುರ್ಗಾ ತಾಲೂಕಿನಲ್ಲಿ ಏಪ್ರೀಲ್ 04 ಐತಿಹಾಸಿಕ ದಿನವಾಗಿ ದಾಖಲಾಯಿತು.

ಈ ಐತಿಹಾಸಿಕ ಕಾರ್ಯಕ್ರಮ ಹಿನ್ನೆಲೆಯಲ್ಲಿ ಕೊಪ್ಪಳ, ಕುಷ್ಟಗಿ, ಕುಕನೂರ, ರೋಣ ಹಾಗೂ ಗಜೇಂದ್ರಗಡ ಭಾಗದ ವಕೀಲರು, ನಿವೃತ್ತ ವಕೀಲರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನ್ಯಾಯಮೂರ್ತಿಗಳೊಂದಿಗೆ ಗ್ರೂಪ್ ಫೋಟೊ ತೆಗೆಯಿಸಿಕೊಂಡು ಸಂಭ್ರಮಿಸಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಹಾಗೂ ಹೈಕೋರ್ಟ‌ನ ನ್ಯಾಯಮೂರ್ತಿಗಳಾದ ಗೌರವಾನ್ವಿತ ಹಂಚಾಟೆ ಸಂಜೀವ್‌ಕುಮಾರ್ ಅವರೊಂದಿಗೆ ಕುಕನೂರ ಪಟ್ಟಣದ ಮಾರ್ಗವಾಗಿ

ಯಲಬುರ್ಗಾ ಪಟ್ಟಣ ಪ್ರವೇಶಿಸಿದ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಕೊಪ್ಪಳ ಜಿಲ್ಲೆಯ ಆಡಳಿತ

ನ್ಯಾಯಾಧೀಶರಾದ ಗೌರವಾನ್ವಿತ ಸಿ ಎಂ ಪೂಣಚ್ಚ ಅವರು ನ್ಯಾಯಮೂರ್ತಿಗಳು,ಶಾಸಕರು, ನ್ಯಾಯಾಧೀಶರು ಮತ್ತು ವಕೀಲರ ಸಮ್ಮುಖದಲ್ಲಿ

ಮೊದಲಿಗೆ ನೂತನ ನ್ಯಾಯಾಲಯ ಅಂಗಳದಲ್ಲಿ ಸಸಿ ನೆಟ್ಟರು.

ಬಳಿಕ ರಿಬ್ಬನ್ ಕತ್ತರಿಸುವ ಮೂಲಕ ನೂತನ ಕಟ್ಟಡವನ್ನು ಲೋಕಾರ್ಪಣೆ ಮಾಡಿದರು. ಈ ಮೂಲಕ ಯಲಬುರ್ಗಾ ತಾಲೂಕಿನ ನ್ಯಾಯಾಂಗಕ್ಕೆ ಹೊಸ ಗರಿ ಮೂಡಿತು.

ಇದೆವೇಳೆ ನ್ಯಾಯಮೂರ್ತಿಗಳಾದ ಸಿ ಎಂ ಪೂಣಚ್ಚ ಅವರು ವಕೀಲರೊಂದಿಗೆ ನ್ಯಾಯಾಲಯದ ಸಭಾಂಗಣದಲ್ಲಿ ಮತ್ತು ನ್ಯಾಯಾಲಯದ ದ್ವಾರಬಾಗಿಲ ಬಳಿಯಲ್ಲಿ ಗ್ರೂಪ್ ಫೋಟೊದಲ್ಲಿ ಭಾಗಿಯಾದರು.

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗೌರವಾನ್ವಿತ ಚಂದ್ರಶೇಖರ್ ಸಿ ಅವರು ಪ್ರಾಸ್ತಾವಿಕ ಮಾತನಾಡಿ ಯಲಬುರ್ಗಾ ಪಟ್ಟಣದ ಐತಿಹಾಸಿಕ ಹಿನ್ನೆಲೆ ತಿಳಿಸಿ ಏಪ್ರೀಲ್ 4 ಯಲಬುರ್ಗಾ

ತಾಲೂಕಿಗೆ ಐತಿಹಾಸಿಕ ದಿನ ಎಂದು ಬಣ್ಣಿಸಿ ನೂತನ ನ್ಯಾಯಾಲಯ ಕಟ್ಟಡ ಲೋಕಾರ್ಪಣೆಯಾಗಿದ್ದಕ್ಕೆ ಸಂತಷ ವ್ಯಕ್ತಪಡಿಸಿದರು.

ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ ಕೊಪ್ಪಳ ಹಾಗೂ ಬಾರ್ ಅಸೋಸಿಯೇಷನ್ ಯಲಬುರ್ಗಾ ಇವರ ಸಂಯುಕ್ತಾಶ್ರಯದಲ್ಲಿ ನಡೆದ

ಸಮಾರಂಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎ.ವಿ. ಕಣವಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಯಲಬುರ್ಗಾ ಜೆ.ಎಂ. ಎಫ್.ಸಿ ಸಂಜಯ್ ಕುಮಾರ್ ಪಾಚಾಪೂರ, ನ್ಯಾಯಾಧೀಶರಾದ ರಂಗಸ್ವಾಮಿ ಜೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ರಾಮ್ ಎಲ್.

ಅರಸಿದ್ದಿ,ಅಪರಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಯಲಬುರ್ಗಾ ವಕೀಲರ ಸಂಘದ ಅಧ್ಯಕ್ಷರಾದ

ಸುಭಾಷಚಂದ್ರ ಎಸ್. ಹೊಂಬಳ, ಪ್ರಧಾನ ಕಾರ್ಯದರ್ಶಿ ಇ.ಟಿ. ಮಹಾಂತೇಶ ಹಾಗೂ ಉಪಾಧ್ಯಕ್ಷರಾದ ಎಂ.ಎಸ್. ನಾಯ್ಕರ್, ಲೋಕೋಪಯೋಗಿ ಇಲಾಖೆ ಕೊಪ್ಪಳ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಹೇಮಂತ್

ರಾಜ್ ಸೇರಿದಂತೆ ಕೊಪ್ಪಳ ಜಿಲ್ಲೆಯ ಎಲ್ಲಾ ಹಿರಿಯ ಹಾಗೂ ಕಿರಿಯ ವಕೀಲರು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಯಲಬುರ್ಗಾ ಬಾರ್ ಅಸೋಸಿಯೇಷನ್‌ನ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

# ಕ್ರೈಸ್ತ ಬಾಂಧವರಿಂದ ಶ್ರದ್ಧಾಭಕ್ತಿಯ ಈಸ್ಟರ್ ಹಬ್ಬ

• ಮಲ್ಲಮ್ಮ ನುಡಿ, ಹಗರಿಬೊಮ್ಮನಹಳ್ಳಿ



ಕ್ರೈಸ್ತ ಬಾಂಧವರಿಂದ ಶ್ರದ್ಧಾ ಭಕ್ತಿದಿಂದ ಇಂದು ಈಸ್ಟರ್ ಹಬ್ಬವನ್ನು ಆಚರಿಸಲಾಯಿತು. ಕರ್ನಾಟಕ ಕಲ್ವರಿ ಮಿನಿಸ್ಟ್ರೀಸ್ ಡಿಗ್ರಿ ಕಾಲೇಜ್ ಹಿಂಭಾಗದ ಚರ್ಚ್ ಮರಿಯಮ್ಮನಹಳ್ಳಿ ಸಭಾ ಪಾಲಕರು ಪಾ!! ಜಕ್ಕಾಯ ಈ ದಿನದಂದು ಪುನರುತ್ಥಾನದ ಆರಾಧನೆಯು ಸಭೆಯಲ್ಲಿ ನಿರ್ವಹಿಸಲಾಯಿತು. ಪಾಸ್ಟರ್ ಕಿರಣ್ ಸ್ಯಾಮ್ ಎಲ್ ಷಡಾಯ್ ಚರ್ಚ್ ಚೋರ್ನೂರು ಅವರು ಕಲ್ವರಿ ಸಭೆಯಲ್ಲಿ ಪುನರುತ್ಥಾನದ ಆರಾಧನೆ ಪ್ರಯುಕ್ತ ಆಚರಿಸಲಾಯಿತು

ಮರಣವು ಏಸುಕ್ರಿಸ್ತನನ್ನು ಹಿಡಿದಿಟ್ಟುಕೊಳ್ಳಲು ಆಗಲಿಲ್ಲ ಮತ್ತು ಸಾವನ್ನು ಗೆದ್ದ ಪ್ರಪಂಚದ ಮೊದಲ ಮತ್ತು ಏಕೈಕ ದೇವರು ಆತನೇ ಆಗಿದ್ದಾನೆ ಮತ್ತು ಪ್ರಪಂಚದಲ್ಲಿ ಕಾಲಿರುವ ಸಮಾಧಿ ಆತನದೆ ಎಂದು ತಿಳಿದುಕೊಂಡೆವು.ಈ ಪುನರುತ್ಥಾನವು ಈಗಾಗಲೇ 2026 ವರ್ಷಗಳ ಹಿಂದೆ ಆಗಿಹೋಯಿತು ಆದರೆ ಈಗ ನಾವು ಅದನ್ನು ನೆನೆಸಿಕೊಳ್ಳುತ್ತೇವೆ ಮತ್ತು ದಿನಾಲು ಅನುಭವಿಸುತ್ತೇವೆ. ಪುನರುತ್ಥಾನವು ಕೇವಲ ಒಂದು ಅದ್ಭುತ ಘಟನೆ ಮಾತ್ರವಲ್ಲ ಇದು ವಿಶ್ವಾಸಿಗಳಿಗೆ ಹೊಸ ಜೀವನದ ಆರಂಭವಾಗಿದೆ. ವಾಕ್ಯದಲ್ಲಿ ಹೇಳುವ ಪ್ರಕಾರ ನಾನು ಜೀವವು ಪುನುರುತ್ಥಾನವೂ ಆಗಿದ್ದೇನೆ ನನ್ನಲ್ಲಿ ನಂಬಿಕೆ ಇಡುವವನು ಸತ್ತರು ಬದುಕುವನು ಎಂದು ಯೇಸು ಹೇಳಿದರು. ಈ ಘಟನೆಯ ಮೂಲಕ ದೇವರು ಮಾನವರಿಗೆ ಪಾಪದಿಂದ ವಿಮೋಚನೆ ಮತ್ತು ನಿತ್ಯಜೀವದ ದಾರಿಯನ್ನು ತೋರಿಸಿದ್ದಾನೆ ಏಸುಕ್ರಿಸ್ತನ ಪುನರುತ್ಥಾನವು ದುಃಖದ ಮೇಲೆ ಸಂತೋಷದ ಜಯ ಕತ್ತಲೆಯ ಮೇಲೆ ಬೆಳಕಿನ ವಿಷಯ ಮತ್ತು ಮರಣದ ಮೇಲೆ ಜೀವದ ಜಯವನ್ನು ಸೂಚಿಸುತ್ತದೆ.

ಪುನರುತ್ಥಾನವು ನಮ್ಮ ಜೀವನದಲ್ಲಿ ನಂಬಿಕೆಯನ್ನು ಬಲಪಡಿಸಿ ಯಾವುದೇ ಕಷ್ಟಗಳಲ್ಲಿಯೂ ಆಸೆಯನ್ನು ಕಳೆದುಕೊಳ್ಳಬಾರದು ಎಂಬ ಸಂದೇಶವನ್ನು ನೀಡುತ್ತದೆ ಏಸುಕ್ರಿಸ್ತನು ಜೀವಂತವಾಗಿದ್ದೇನೆ ಎಂಬ ಸತ್ಯವ ಕ್ರೈಸ್ತರ ನಂಬಿಕೆಯ ಮೂಲವಾಗಿದೆ.

ಏಸುಕ್ರಿಸ್ತನ ಪುನರುತ್ಥಾನವು ಕ್ರೈಸ್ತ ಧರ್ಮದ ಅತ್ಯಂತ ಪ್ರಮುಖ ಘಟನೆಯಾಗಿದ್ದು ಇದು ವಿಶ್ವಾಸಿಗಳಿಗೆ ನಿತ್ಯಜೀವದ ಭರವಸೆಯನ್ನು ಪಾಪದ ಮೇಲೆ ಜಯಿಸಿದ ಸಂದೇಶವನ್ನು ನೀಡುತ್ತದೆ ಬೈಬಲ್ ಸ್ಪಷ್ಟವಾಗಿ ವಿವರಿಸುತ್ತದೆ ಅವನು ಇಲ್ಲಿ ಇಲ್ಲ ಆತನು ಎದ್ದು ಬಂದಿದ್ದಾನೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದಿದ್ದಾನೆ.

ಪುನರುತ್ಥಾವು ಪ್ರತಿಯೊಬ್ಬರಿಗೆ ಆಶ್ರಯ ಸಂಕೇತ ಕಷ್ಟಗಳಲ್ಲಿ ಧೈರ್ಯ ಪಾಪಗಳಿಂದ ಕ್ಷಮೆ ನಿತ್ಯಜೀವದ ನಿರೀಕ್ಷೆ ಅವನು ಜೀವಂತನಾಗಿದ್ದರಿಂದ ನಾವು ಬದುಕುವೆವು ಇಂದಿನ ಕಾಲದಲ್ಲಿ ದುಃಖ ನಿರಾಶೆ ಮತ್ತು ಅನ್ಯಾಯಗಳ ನಡುವೆ ಪುನರುತ್ಥಾನವು ಹೊಸ ಬೆಳಕನ್ನು ನೀಡುತ್ತದೆ ಇದು ಪ್ರತಿಯೊಬ್ಬನಿಗೆ ಹೇಳುವ ಸಂದೇಶ ಎಷ್ಟು ಕತ್ತಲೆ ಇದ್ದರೂ ಬೆಳಕು ಗೆಲ್ಲುತ್ತದೆ. ಕ್ರೈಸ್ತರು ಪುನರುತ್ಥಾನವನ್ನು ಈ ಸಮಯದಲ್ಲಿ ಆಚರಿಸುತ್ತಾರೆ. ಇದು ಸಂತೋಷ ಜಯ ಮತ್ತು ಹೊಸ ಜೀವದ ಸಂಕೇತವಾಗಿದೆ ಚರ್ಚುಗಳಲ್ಲಿ ಪ್ರಾರ್ಥನೆಗಳು ಕೀರ್ತನೆಗಳು ಮತ್ತು ಸುವಾರ್ತ ಸಂದೇಶಗಳ ಮೂಲಕ ಈ ದಿನವನ್ನು ಗೌರವಿಸಲಾಗುತ್ತದೆ. ಪುನರುತ್ಥಾನವು ಕೇವಲ ಇತಿಹಾಸವಲ್ಲ ಇದು ಜೀವಂತ ನಂಬಿಕೆ ಯೇಸುಕ್ರಿಸ್ತನು ಮರಣವನ್ನು ಜಯಿಸಿದಂತೆ ನಮ್ಮ ಜೀವನದಲ್ಲಿಯೂ ಸಮಸ್ಯೆಗಳ ಮೇಲೆ ಜಯಶಾಲಿಸಲು ದೇವರ ಶಕ್ತಿ ನೀಡುತ್ತಾನೆ. ಪುರುರುತಾನವು ನಮ್ಮ ಹೃದಯದಲ್ಲಿ ನಂಬಿಕೆ ಪ್ರೀತಿ ಮತ್ತು ಆಶಯವನ್ನು ಪುನರುಜ್ಜೀವನಗೊಳಿಸುತ್ತದೆ ಯೇಸು ಜೀವಂತವಾಗಿದ್ದಾನೆ ಇದೇ ಕ್ರೈಸ್ತ ನಂಬಿಕೆ ಶಾಶ್ವತ ಸತ್ಯ

# ಪ್ರಕಾಶ್ ಮಾಳಿಗೆ ಮಾಧ್ಯಮ ಸಂಘದಿಂದ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ

ಏಪ್ರಿಲ್,2.2026.ರಂದುಬೆಂಗಳೂರಿನಲ್ಲಿ ನಡೆದ ಮುಖ್ಯಮಂತ್ರಿ ಪದಕಕ್ಕೆ ಭಾಜನರಾದ ಗಂಗಾವತಿ ನಗರ ಠಾಣೆಯ ಸಿಪಿಐ ಪ್ರಕಾಶ್ ಎಲ್. ಮಾಳಿಅವರಗೆಏಪ್ರಿಲ್,3.2026ರಂದು ನಗರ ಪೊಲೀಸ್ ಠಾಣೆಯಲ್ಲಿ ರಾಮಕೃಷ್ಣ ಸಿಡಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ ಗಂಗಾವತಿ ತಾಲೂಕು ಅಧ್ಯಕ್ಷರು. ಹಾಗೂ ಪದಾಧಿಕಾರಿಗಳು ಹಾಗೂ ಸದಸ್ಯರುಗಳಿಂದ ಮುಖ್ಯಮಂತ್ರಿ ಪದಕ ವಿಜೇತರು ಹಾಗೂ ವಿಶೇಷ ಪ್ರಶಸ್ತಿ ಪ್ರಧಾನ ಪಡೆದಿರುವ ಗಂಗಾವತಿ ನಗರ ಠಾಣೆಯ ಪೊಲೀಸ್ ಅಧಿಕಾರಿ ಪ್ರಕಾಶ್ ಮಾಳಿ ಅವರಿಗೆ ಗೌರವ ಸನ್ಮಾನ ಮಾಡಲಾಯಿತು.ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ರಮೇಶ್ ಕೋಟೆ.ಸಂಘದ ಪ್ರಧಾನ ಕಾರ್ಯದರ್ಶಿ ಚೆನ್ನಬಸವ ಬಾಗಲವಾಡ ಮಾನ್ವಿ.ಉಪಾಧ್ಯಕ್ಷ ಸಿಬಿಎಸ್ ಚಾನೆಲ್ ಸಂಪಾದಕ ಶ್ರೀನಿವಾಸ ಚಲವಾದಿ.

ಸಂಘಟನಾ ಕಾರ್ಯದರ್ಶಿ ಎಂಡಿ ಗೌಸ್. ಮಾರ್ಕಂಡಿ.ಸಂಘದ ಸದಸ್ಯರುಗಳು ಸೇರಿದಂತೆ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ವತಿಯಿಂದ ಸನ್ಮಾನಿಸಿ ಶುಭಾಶಯಗಳನ್ನು ತಿಳಿಸಲಾಯಿತು.ನಗರದ ಪತ್ರಕರ್ತರ ಸಂಘದವರಿಂದ ನಗರ ಠಾಣೆ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಸೇರಿ,ಸಿಪಿಐ ಪ್ರಕಾಶ್ ಎಲ್.ಮಾಳಿ ಅವರಿಗೆ ಶಾಲು ಹೊದಿಸಿ, ಹಾರ ಹಾಕಿ ಗೌರವಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ರಾಮಕೃಷ್ಣ ಸಿಡಿ. ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ ತಾಲೂಕು ಅಧ್ಯಕ್ಷರು ಹಾಗೂ ಪ್ರತಿನಿಧಿಗಳು,ಸಾರ್ವಜನಿಕ ಸೇವೆಯಲ್ಲಿ ತೋರಿದ ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಹಾಗೂ ಅಪರಾಧ ನಿಯಂತ್ರಣದಲ್ಲಿ ತೋರಿದ ಚಾತುರ್ಯಕ್ಕಾಗಿ ಮುಖ್ಯಮಂತ್ರಿ ಪದಕ ಲಭಿಸಿರುವುದು ಹೆಮ್ಮೆಯ ವಿಚಾರವಾಗಿದೆ ಅವರಿಗೆ ಕರ್ತವ್ಯನಿಷ್ಠೆ ತೋರಿ ಸಿಪಿಐ ಸ್ಥಾನದಿಂದ ಹೆಚ್ಚಿನ ಉನ್ನತ ಸ್ಥಾನ ದೊರಕಲಿ ಇನ್ನಷ್ಟು ಹೆಚ್ಚಿನ ಪದಕಗಳು ಸರ್ಕಾರದಿಂದ ಪಡೆಯಲಿ ಅದರ ಜೊತೆಗೆ ಆಯುರಾ–ರೋಗ್ಯ ಭಾಗ್ಯ ಸಿಗಲಿ ಎಂದು ಅಭಿಪ್ರಾಯಪಟ್ಟರು.ಸಿಪಿಐ ಪ್ರಕಾಶ್ ಎಲ್.ಮಾಳಿ ಅವರು ಮಾತನಾಡಿ,ಈ ಗೌರವಕ್ಕೆ ಕಾರಣರಾದ ಹಿರಿಯ ಅಧಿಕಾರಿಗಳು,ಸಹೋದ್ಯೋಗಿಗಳು ಹಾಗೂ ಸಾರ್ವಜನಿಕರಿಗೆ ಧನ್ಯವಾದಗಳನ್ನು ತಿಳಿಸಿದರು.

ಮುಂದೆಯೂ ಜನರ ಸುರಕ್ಷತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಇನ್ನಷ್ಟು ಶ್ರಮಿಸುವುದಾಗಿ ಹೇಳಿದರು.

ಇದೇ ವೇಳೆಯಲ್ಲಿ ಸಿಪಿಐ ಪ್ರಕಾಶ್ ಮಾಳಿ ಅವರು ಮಲ್ಲಮ್ಮ ನುಡಿ ಮ್ಯಾಗ್ಜಿನ್ ನನ್ನು ನೋಡಿ ತುಂಬಾ ಅದ್ಭುತವಾಗಿ ಮೂಡಿಬಂದಿದೆ ಮಲ್ಲಮ್ಮ ನುಡಿಯ ವರದಿಗಾರರು ತುಂಬಾ ಚೆನ್ನಾಗಿ ವರದಿಯನ್ನು ಮಾಡಿದ್ದಾರೆ ಎಂದು ಶುಭ ಹಾರೈಸಿ ಬಿಡುಗಡೆ ಗೊಳಿಸಿದರು

ಈ ಸಂದರ್ಭದಲ್ಲಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಪದಾಧಿಕಾರಿಗಳು, ಸ್ಥಳೀಯ ಪತ್ರಕರ್ತರು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಶಾಲೆಗೆ ದಾನ: ಇಲಾಖೆಯ ಹೆಸರಿಗೆ ನೋಂದಣಿ ವಿವಾದ



• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ

ಹೊಸಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ದಾನವಾಗಿ ನೀಡಿದ ಸರ್ವೆ ನಂಬರ್ 16/5 ರಲ್ಲಿನ 05 ಎಕರೆ ಜಮೀನನ್ನು ಇಲಾಖೆಯ ಹೆಸರಿಗೆ ನೋಂದಣಿ ಮಾಡಿಕೊಡುವ ಕುರಿತಂತೆ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ಗಂಗಾವತಿ ಪತ್ರ ಸಂ. ಕಲಂ.ಲೆವಿ3/ಪಹಣಿ/ ಶಾಲಾ ಆಸ್ತಿನೋಂದಣಿ/ಹೊಸಳ್ಳಿ/ ಕು/45/2025–26 ದಿನಾಂಕ:14–10–2025ರ ಉಲ್ಲೇಖದಂತೆ ಶ್ರೀ ಚನ್ನಬಸವಸ್ವಾಮಿ ತಂದೆ ಗುರು ಕೊಟ್ರಸ್ವಾಮಿ ಕಲ್ಮಠ ಗಂಗಾವತಿ ರವರು ತಮ್ಮ ಹೆಸರಿನಲ್ಲಿರುವ ಗಂಗಾವತಿ ತಾಲೂಕಿನ ವಿರುಪಾಪುರ ಗ್ರಾಮದ ಜಮೀನು ಸರ್ವೆ ನಂ.16/2 ರಲ್ಲಿನ 11–22 ರ ಪೈಕಿ ವಿಸ್ತೀರ್ಣ 5–00 (ಎ–ಗು) ಜಮೀನನ್ನು 'ಅಧ್ಯಕ್ಷ ಶಾಲಾ ಸುಧಾರಕ ಸಮಿತಿ" ಇವರ ಹೆಸರಿನಲಿ ದಾನರೂಪವಾಗಿ ಹೊಸಳ್ಳಿ ಶಾಲೆಗೆ ದಿನಾಂಕ: 20.05.1980 ರಲ್ಲಿ ನೀಡಿದ್ದು, ಅದರಂತೆ ಕಲಂ ನಂ:09 ರಲ್ಲಿ ಈಗಾಗಲೆ ಪಹಣಿಯಲ್ಲಿಯೂ ನೋಂದಣಿಯಾಗಿರುತ್ತದೆ.

ಸದ್ರಿ ಶಾಲೆಯೂ ಅದೇ ಸರ್ವೆ ನಂಬರಿನಲ್ಲಿರುತ್ತದೆ, ಪ್ರಯುಕ್ತ, ಸದರಿ ಸರ್ವೆ ನಂ.16/2 ರಲ್ಲಿನ 11–22 ರ ಪೈಕಿ ವಿಸ್ತೀರ್ಣ 5–00(ಎ–ಗು) ಜಮೀನನ್ನು ಮಾನ್ಯ ರಾಜ್ಯಪಾಲರು, ಕರ್ನಾಟಕ ಸರಕಾರ ಇವರ ಪರವಾಗಿ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು,ಗಂಗಾವತಿ ಇವರ ಹೆಸರಿಗೆ ಪಹಣೆಯಲ್ಲಿ ನೋಂದಣಿ ಮಾಡಿಕೊಡಲು ಕೋರಿರುತ್ತಾರೆ ಕಾರಣ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ಗಂಗಾವತಿ ಇವರ ಮೂಲ ಪತ್ರವನ್ನು ಲಗತ್ತಿಸಿ ಕಳುಹಿಸುತ್ತಾ,ತಾಲೂಕಿನ ಗಂಗಾವತಿ ಹೋಬಳಿಯ ವಿರುಪಾಪುರ ಗ್ರಾಮದ ಜಮೀನು ಸರ್ವೆ ನಂ.16/2 ರಲ್ಲಿನ 11–22ರ ಪೈಕಿ ವಿಸ್ತೀರ್ಣ 5–00 (ಎ–ಗು) ಜಮೀನನ್ನು ಅಧ್ಯಕ್ಷ ಶಾಲಾ ಸುಧಾರಕ ಸಮಿತಿ" ಇವರ ಹೆಸರಿನಲಿ ದಾನರೂಪವಾಗಿ ಹೊಸಳ್ಳಿ ಶಾಲೆಗೆ ದಿನಾಂಕ:20.05.1980 ರಲ್ಲಿ ನೀಡಿದ್ದು, ಅದರಂತೆ ಕಾಲಂ ನಂ:09 ರಲ್ಲಿ ಈಗಾಗಲೇ ಪಹಣಿಯಲ್ಲಿಯೂ ನೋಂದಣಿಯಾಗಿರುತ್ತದೆ. ಸದ್ರಿ ಶಾಲೆಯೂ ಅದೇ ಸರ್ವೆ ನಂಬರಿನಲ್ಲಿರುತ್ತದೆ, ಪ್ರಯುಕ್ತ, ಸದರಿ ಸರ್ವೆ ನಂ.16/2 ರಲ್ಲಿನ 11–22 ರಪೈಕಿ ವಿಸ್ತೀರ್ಣ 5–00 (ಎ–ಗು) ಜಮೀನನ್ನು ಮಾನ್ಯ ರಾಜ್ಯಪಾಲರು, ಕರ್ನಾಟಕ ಸರಕಾರ ಇವರ ಪರವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗಂಗಾವತಿ ಇವರ ಹೆಸರಿಗೆ ಪಹಣೆಯಲ್ಲಿ ನೋಂದಣಿ ಮಾಡಿಕೊಡುವ ಕುರಿತು ಕುಲಂಕುಷವಾಗಿ ಪರಿಶೀಲಿಸಿ ದೃಡೀಕೃತ ದಾಖಲೆಗಳೊಂದಿಗೆ ಪಂಚನಾಮೆ ಮತ್ತು ವರದಿಯನ್ನು ಸಲ್ಲಿಸಲಾಗಿದೆ ಇಲ್ಲಿ ಸಾವಿರಾರು ಮಕ್ಕಳು ವಿದ್ಯಾಭ್ಯಾಸವನ್ನು ಪಡೆದು–ಕೊಂಡು ಹೆಚ್ಚುವರಿ ಹುದ್ದೆಯಲ್ಲಿ ಇರುತ್ತಾರೆ ಈಗ ಐದು ಎಕರೆ ಭೂಮಿಯಲ್ಲಿ ಮೂರು ಎಕ್ರೆ ಭೂಮಿಯನ್ನು ಗಂಗಾವತಿ ಶ್ರೀ ಕಲ್ಮಠ ತಾತನವರು ತಮ್ಮ ದಿನಕ್ಕೆ ನಕಾಶೆಯನ್ನು ಮಾಡಿಕೊಂಡಿರುತ್ತಾರೆ ಇದನ್ನು ಕೋರ್ಟಿನವಹಿವಾಟು ಮೂಲಕ ಆದೇಶ ಪತ್ರವನ್ನು ಪಡೆದುಕೊಂಡು 3 ಎಕರೆ ನಕಾಶೆಯನ್ನು ಮಾಡಿಕೊಂಡಿರುತ್ತಾರೆ 5 ಎಕರೆ ಭೂಮಿಯಲ್ಲಿ ಶಾಲೆಗೆ ಎರಡು ಎಕರೆ ಭೂಮಿಯನ್ನು ಬಿಟ್ಟು ಕೊಟ್ಟಿರುತ್ತಾರೆ.ಈ ಕುರಿತು ಜಿಲ್ಲಾಧಿಕಾರಿಗಳು ಕೊಪ್ಪಳ, ತಹಶೀಲ್ದಾರ್ ಕಾರ್ಯಾಲಯ ಗಂಗಾವತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗಂಗಾವತಿ ಇವರಿಗೆ ಮನವಿ ಪತ್ರ ಸಲ್ಲಿಸುತ್ತೇವೆ ಹಾಗೂ ಕ್ಷೇತ್ರದ ಗಾಲಿ ಜನಾರ್ಧನ್ ರೆಡ್ಡಿ ಅವರಿಗೆ ದಿ.13–8–2024 ಮನವಿ ಪತ್ರಕೊಟ್ಟಿದೆ ಹೊಸಳ್ಳಿಯ ಶಾಲೆಯ ಬಗ್ಗೆ ಯಾವುದಕ್ಕೂ ಕ್ರಮ ತೆಗೆದುಕೊಂಡಿಲ್ಲ ಹಾಗೂ ಎಂ.ಪಿ. ರಾಜಶೇಖರ್ ಇಟ್ನಾಳ್ ಸರ ಅವರಿಗೆ ಗಮನಕ್ಕ ತಂದಿದ್ದರೂ ಗಮನ ಹರಿಸುತ್ತಿಲ್ಲ"ಹೊಸಳ್ಳಿಯ ಯುವಕರು ಸೇರಿ 3–04–2026 ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾಧ್ಯಮ ದವರೊಂದಿಗೆ ಊರಿನ ಹಿರಿಯರು ಯುವಕರು ಸೇರಿ ಮಾತನಾಡಿದ್ದು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಇಲ್ಲವಾದಲ್ಲಿ ಮುಂದಿನ ದಿನಮಾನಗಳಲ್ಲಿ

ಉಗ್ರಹೋರಾಟ ಮಾಡಲಾಗುವುದು ಆದಷ್ಟು ಬೇಗ ಇದನ್ನು ಈಡೇರಿಸಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿಸಿಕೊಂಡಿದ್ದಾರೆ.

# ವಿವಿ ಗೌರವ ಡಾಕ್ಟರೇಟ್



**ಬೆಂಗಳೂರು:** ಪರಿಹಾರವಾದಿ, ಉದ್ಯಮಿ ಹಾಗೂ ರಾಜ್ಯ ವಿಧಾನ ಪರಿಷತ್ ಮಾಜಿ ಸದಸ್ಯ ಡಾ. ಬಿ ಎಂ ಫಾರೂಕ್ ಅವರಿಗೆ ಬೆಂಗಳೂರು ನಗರ ಜಿಲ್ಲಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು.

ನಗರದ ಜ್ಯೋತಿ ಸಭಾಂಗಣದಲ್ಲಿ ನಡೆದ ಐದನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

ಸೋಲಾರ್ ಹಾಗೂ ಪವನ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಅನುಕರಣೀಯ ಸಾಧನೆ ಮಾಡಿರುವ ಡಾ. ಬಿ ಎಂ ಫಾರೂಕ್ ಅವರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪದವಿ ಹಾಗೂ ಮಾರುಕಟ್ಟೆ ವಿಭಾಗದಲ್ಲಿ ಡಿಪ್ಲೊಮಾ ಪದವಿ ಪಡೆದಿರುವ ಡಾ. ಫಾರೂಕ್, "ಫೀಜ್ಹಾ ಸಮೂಹ ಉದ್ಯಮ ಸಂಸ್ಥೆಗಳನ್ನು" ಸ್ಥಾಪಿಸಿದ್ದಾರೆ.

ಸೋಲಾರ್ ವಿದ್ಯುತ್ ಉತ್ಪಾದನೆ, ಪವನ ವಿದ್ಯುತ್ ಉತ್ಪಾದನೆ, ಕೃಷಿ ಸಂಸ್ಕರಣೆ ಮತ್ತು ಗಣಿಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯಮ ಸಂಸ್ಥೆಗಳನ್ನು ನಡೆಸುವ ಮೂಲಕ ನೂರಾರು ಜನರಿಗೆ ಉದ್ಯೋಗ ನೀಡಿದ್ದಾರೆ.

# ಜನರೊಂದಿಗೆ ನೇರ ಸಂವಾದ



**ದಾವಣಗೆರೆ:** ದಕ್ಷಿಣ ಉಪಚುನಾವಣೆಯ ಹಿನ್ನೆಲೆ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಸಮರ್ಥ ಶಾಮನೂರು ಅವರ ಪರವಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಭರ್ಜರಿ ಪ್ರಚಾರ ಮುಂದುವರಿಸಿದ್ದಾರೆ.

ನಾಗನೂರು ಗ್ರಾಮದಿಂದ ಆರಂಭಗೊಂಡ ಈ ಪ್ರಚಾರ, ಶಿರಾಮಗೊಂಡನಹಳ್ಳಿ ಹಾಗೂ ಹಳೆಬಿಸಲೇರಿ ಗ್ರಾಮಗಳವರೆಗೆ ವ್ಯಾಪಿಸಿಕೊಂಡು ಜನರೊಂದಿಗೆ ನೇರ ಸಂವಾದ ನಡೆಸಿದರು. ವಿವಿಧ ಗ್ರಾಮಗಳಲ್ಲಿ ಮಹಿಳೆಯರು, ಯುವಕರು ಹಾಗೂ ಹಿರಿಯರು ಭಾಗವಹಿಸಿ ಉತ್ಸಾಹಭರಿತ ಸ್ವಾಗತ ಕೋರಿದರು.

ಸಚಿವರು ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳು, ಅಭಿವೃದ್ಧಿ ಕಾರ್ಯಗಳು ಹಾಗೂ ಭವಿಷ್ಯದ ದೃಷ್ಟಿಕೋನವನ್ನು ಜನರಿಗೆ ವಿವರಿಸಿ, ಸಮರ್ಥ ಶಾಮನೂರು ಅವರಿಗೆ ಮತ ನೀಡಿ ಗೆಲುವು ಸಾಧಿಸಲು ಮನವಿ ಮಾಡಿದರು.

ಎಲ್ಲ ಗ್ರಾಮಗಳಲ್ಲೂ ಅಪಾರ ಜನಮೆಚ್ಚುಗೆ ವ್ಯಕ್ತವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿಯ ಭರ್ಜರಿ ಗೆಲುವಿನ ವಿಶ್ವಾಸ ಮತ್ತಷ್ಟು ಗಟ್ಟಿಯಾಗಿದೆ.

# ಪದಕ ವಿಜೇತ ಸಿಪಿಐ ಪ್ರಕಾಶ್ ಎಲ್. ಮಾಳಿಗೆಗೆ ಮಾಧ್ಯಮ ಸಂಘದಿಂದ ಸನ್ಮಾನ



**ಗಂಗಾವತಿ:** ಏಪ್ರಿಲ್,2.2026.ರಂದು ಬೆಂಗಳೂರಿನಲ್ಲಿ ನಡೆದ ಮುಖ್ಯಮಂತ್ರಿ ಪದಕಕ್ಕೆ ಭಾಜನರಾದ ಗಂಗಾವತಿ ನಗರ ಠಾಣೆಯ ಸಿಪಿಐ ಪ್ರಕಾಶ್ ಎಲ್. ಮಾಳಿ ಅವರಗೆ ಏಪ್ರಿಲ್,3.2026ರಂದು ನಗರ ಪೊಲೀಸ್ ಠಾಣೆಯಲ್ಲಿ ರಾಮಕೃಷ್ಣ ಸಿಡಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ ಗಂಗಾವತಿ ತಾಲೂಕು ಅಧ್ಯಕ್ಷರು.ಹಾಗೂ ಪದಾಧಿಕಾರಿಗಳು ಹಾಗೂ ಸದಸ್ಯರುಗಳಿಂದ ಮುಖ್ಯಮಂತ್ರಿ ಪದಕ ವಿಜೇತರು ಹಾಗೂ ವಿಶೇಷ ಪ್ರಶಸ್ತಿ ಪ್ರಧಾನ ಪಡೆದಿರುವ ಗಂಗಾವತಿ ನಗರ ಠಾಣೆಯ ಪೊಲೀಸ್ ಅಧಿಕಾರಿ ಪ್ರಕಾಶ್ ಮಾಳಿ ಅವರಿಗೆ ಗೌರವ ಸನ್ಮಾನ ಮಾಡಲಾಯಿತು. ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ರಮೇಶ್ ಕೋಟೆ.ಸಂಘದ ಪ್ರಧಾನ ಕಾರ್ಯದರ್ಶಿ ಚೆನ್ನಬಸವ ಬಾಗಲವಾಡ ಮಾನ್ವಿ.ಉಪಾಧ್ಯಕ್ಷ ಸಿಬಿಎಸ್ ಚಾನೆಲ್ ಸಂಪಾದಕ ಶ್ರೀನಿವಾಸ ಚಲವಾದಿ.

ಸಂಘಟನಾ ಕಾರ್ಯದರ್ಶಿ ಎಂಡಿ ಗೌಸ್. ಮಾರ್ಕಂಡಿ.ಸಂಘದ ಸದಸ್ಯರುಗಳು ಸೇರಿದಂತೆ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ವತಿಯಿಂದ ಸನ್ಮಾನಿಸಿ ಶುಭಾಶಯಗಳನ್ನು ತಿಳಿಸಲಾಯಿತು.ನಗರದ ಪತ್ರಕರ್ತರ ಸಂಘದವರಿಂದ ನಗರ ಠಾಣೆ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಸೇರಿ,ಸಿಪಿಐ ಪ್ರಕಾಶ್ ಎಲ್.ಮಾಳಿ ಅವರಿಗೆ ಶಾಲು ಹೊದಿಸಿ, ಹಾರ ಹಾಕಿ ಗೌರವಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ರಾಮಕೃಷ್ಣ ಸಿಡಿ. ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ ತಾಲೂಕು ಅಧ್ಯಕ್ಷರು ಹಾಗೂ ಪ್ರತಿನಿಧಿಗಳು,ಸಾರ್ವಜನಿಕ ಸೇವೆಯಲ್ಲಿ ತೋರಿದ ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಹಾಗೂ ಅಪರಾಧ ನಿಯಂತ್ರಣದಲ್ಲಿ ತೋರಿದ ಚಾತುರ್ಯಕ್ಕಾಗಿ ಮುಖ್ಯಮಂತ್ರಿ ಪದಕ ಲಭಿಸಿರುವುದು ಹೆಮ್ಮೆಯ ವಿಚಾರವಾಗಿದೆ ಅವರಿಗೆ ಕರ್ತವ್ಯನಿಷ್ಠೆ ತೋರಿ ಸಿಪಿಐ ಸ್ಥಾನದಿಂದ ಹೆಚ್ಚಿನ ಉನ್ನತ ಸ್ಥಾನ ದೊರಕಲಿ ಇನ್ನಷ್ಟು ಹೆಚ್ಚಿನ ಪದಕಗಳು ಸರ್ಕಾರದಿಂದ ಪಡೆ-ಯಲಿ ಅದರ ಜೊತೆಗೆ ಆಯುರಾರೋಗ್ಯ ಭಾಗ್ಯ ಸಿಗಲಿ ಎಂದು ಅಭಿಪ್ರಾಯಪಟ್ಟರು.ಸಿಪಿಐ ಪ್ರಕಾಶ್ ಎಲ್.ಮಾಳಿ ಅವರು ಮಾತನಾಡಿ,ಈ ಗೌರವಕ್ಕೆ ಕಾರಣರಾದ ಹಿರಿಯ ಅಧಿಕಾರಿಗಳು,ಸಹೋದ್ಯೋಗಿಗಳು ಹಾಗೂ ಸಾರ್ವಜನಿಕರಿಗೆ ಧನ್ಯವಾದಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಪದಾಧಿಕಾರಿಗಳು, ಸ್ಥಳೀಯ ಪತ್ರಕರ್ತರು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ನೆತ್ತಿ ಸುಡುತ್ತಿದೆ ಬಿಸಿಲು: ತಂಗುದಾಣ ಇಲ್ಲದೆ ಪ್ರಯಾಣಿಕರ ಅಳಲು

• ವಿಶೇಷ ವರದಿ: ಚನ್ನಕೇಶವ ಕಂಪ್ಲಿ



ಬಳ್ಳಾರಿ ಜಿಲ್ಲೆ ಕಂಪ್ಲಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ವೃತ್ತದ ಹಳೆ ಬಸ್ ನಿಲ್ದಾಣದಲ್ಲಿ ದಿನದಿಂದ ದಿನಕ್ಕೆ ತಾಪಮಾನ ಹೆಚ್ಚಾಗುತ್ತಿದ್ದು ಬಿಸಿಲಿನ ದಗೆಯಿಂದ ರಕ್ಷಿಸಿಕೊಳ್ಳಲು ಸಾರ್ವಜನಿಕರು ಪರದಾಡುತ್ತಿದ್ದು ನೆರಳು ಹುಡುಕಿ ಅಲೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ನಿತ್ಯ ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು, ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಿಗೆ ತೆರಳುವ ನೌಕರರು, ದುಡಿಮೆಗೆ ಹೋಗುವ ದಿನಗೂಲಿ ನೌಕರರು, ಕೆಲಸ ಕಾರ್ಯಗಳಿಗೆ ಓಡಾಡುವ ಸಾರ್ವಜನಿಕರು ಸೂಕ್ತ ಬಸ್ ತಂಗುದಾಣಗಳು ಇಲ್ಲದೆ ಬಿಸಿನಿಲಲ್ಲಿ ನಿಲ್ಲುವ ಶಿಕ್ಷೆ ಅನುಭವಿಸುತ್ತಿದ್ದಾರೆ.

ಕಂಪ್ಲಿ ನಗರ ವೇಗವಾಗಿ ಬೆಳೆಯುತ್ತಿದ್ದರೂ ನಗರದಲ್ಲಿ ಬಸ್ ತಂಗುದಾಣಗಳ ಕೊರತೆ ಎದ್ದು ಕಾಣುತ್ತಿದೆ. ಅಗತ್ಯ ಸ್ಥಳಗಳಲ್ಲಿ ತಂಗುದಾಣಗಳು ಇಲ್ಲದೆ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದು, ರಸ್ತೆಯ ಬದಿಯ ಮರಗಳು, ವಾಣಿಜ್ಯ ಮಳಿಗೆಗಳನ್ನು ಆಶ್ರಯಿಸಬೇಕಾಗಿದೆ.

ನಗರದ ಬಹುತೇಕ ಭಾಗಗಳಿಗೆ ಕೆಎರ್‌ಟಿಸಿ ಹಾಗೂ ಖಾಸಗಿ ಬಸ್‌ಗಳು ಸಂಚರಿಸುತ್ತಿದ್ದರೂ ಪ್ರಯಾಣಿಕರು ಬಸ್‌ಗಳನ್ನು ಹತ್ತಲು ಬಸ್ ತಂಗುದಾಣಗಳ ಕೊರತೆ ಇದೆ. ಬಿಸಿಲಿನಿಂದ ರಕ್ಷಣೆ ಪಡೆದುಕೊಳ್ಳಲು ನೆತ್ತಿಯ ಮೇಲೆ ನೆರಳಿನ ಸೂರು ಕಲ್ಪಿಸದ ಸ್ಥಳೀಯ ಆಡಳಿತ ಹಾಗೂ ಜನಪ್ರತಿನಿಧಿಗಳ ವಿರುದ್ಧ ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ನಗರದ ಪ್ರಮುಖ ರಸ್ತೆಗಳ ಇಕ್ಕೆಲಗಳಲ್ಲಿ ಸಮರ್ಪಕವಾದ ಬಸ್ ತಂಗುದಾಣಗಳು ಇಲ್ಲದಿರುವುದರಿಂದ ಪ್ರಯಾಣಿಕರು ಬಸ್‌ಗಾಗಿ ಬಿಸಿಲಿನಲ್ಲಿ ನಿಲ್ಲಬೇಕು. ಬಸ್ ಬರುವವರೆಗಾದರೂ ವಿರಮಿಸಲು ಯಾವುದೇ ಸೌಲಭ್ಯಗಳು ಇಲ್ಲ. ನೆರಳು ಹುಡುಕಿಕೊಂಡು ಹೋದರೆ ಬಸ್‌ಗಳು ತಪ್ಪುವ ಭಯದಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬಿಸಿಲಿನಲ್ಲಿ ನಿಲ್ಲುತ್ತಿದ್ದಾರೆ.

ನಗರದ ಬಸ್ ನಿಲ್ದಾಣ ಉತ್ತಮವಾಗಿದ್ದು ಕುಡಿಯುವ ನೀರು, ಆಸನ, ಸಹಿತ ಮೂಲಸೌಕರ್ಯಗಳು ಇವೆ. ಆದರೆ, ನಗರದ ಪ್ರಮುಖ ವೃತ್ತಗಳಿಂದ ಬೇರೆ ಊರುಗಳಿಗೆ ತೆರಳುವ ಸ್ಥಳಗಳಲ್ಲಿ ತಂಗುದಾಣಗಳು ಇಲ್ಲ. ಹಾಗಾಗಿ ಪ್ರಯಾಣಿಕರು ಪಾದಾಚಾರಿ ಮಾರ್ಗ ಅಥವಾ ರಸ್ತೆಯ ಮೇಲೆ ನಿಲ್ಲಬೇಕು, ವಯಸ್ಸಾದವರು, ಮಕ್ಕಳು ನಿಲ್ಲಲಾಗದೆ ರಸ್ತೆಯ ಬದಿಯಲ್ಲಿ ಕೂರಬೇಕು.

ಪಾದಚಾರಿ ಮಾರ್ಗವನ್ನು ಬೀದಿ ಬದಿ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದು ಅಲ್ಲಿ ನಿಲ್ಲಲು ಜಾಗವಿಲ್ಲದೆ ಪ್ರಯಾಣಿಕರು ರಸ್ತೆಯ ಮೇಲೆ ಬಂದು ನಿಲ್ಲಬೇಕು. ವಾಹನಗಳು ರಸ್ತೆಯಲ್ಲಿ ಹೋಗುವಾಗ ಉಗುಳುವ ಹೊಗೆ, ದೂಳು ಸೇವನೆ ಮಾಡಬೇಕು, ಕೆಲವೊಮ್ಮೆ ವಾಹನಗಳು ಮೈಮೇಲೆ ಬಂದ ಅನುಭವವಾಗುತ್ತದೆ ಎನ್ನುತ್ತಾರೆ ಪ್ರಯಾಣಿಕರು.

ಮಳೆ ಬಂದರೆ ಸಮೀಪದ ಮರ ಗಿಡಗಳ ಬುಡದಲ್ಲಿ ಆಶ್ರಯ ಪಡೆಯಬೇಕು, ಇಲ್ಲವಾದರೆ ವಾಣಿಜ್ಯ ಮಳಿಗೆಗಳ ಮುಂದೆ ನಿಲ್ಲಬೇಕು. ಸ್ಥಳೀಯ ಆಡಳಿತ ಅಗತ್ಯವಿರುವ ಕಡೆಗಳಲ್ಲಿ ಬಸ್ ತಂಗುದಾಣ ನಿರ್ಮಾಣ ಮಾಡಿದರೆ ಅನುಕೂಲವಾಗುತ್ತದೆ ಎನ್ನುತ್ತಾರೆ ನಾಗರಿಕರಾದ ಹರೀಶ ಲಂಬಾಣಿ.


ಡಾಕ್ಟರ್ ಬಿಆರ್ ಅಂಬೇಡ್ಕರ್ ವೃತ್ತದಲ್ಲಿ ಬಸ್ ತಂಬುದಾಣವಿದ್ದರೂ ಪ್ರಯಾಣಿಕರು ಹೆಚ್ಚು ಬಳಕೆ ಮಾಡುವುದಿಲ್ಲ. ಬಿಕ್ಷುಕರು ಹಾಗೂ ನಿರ್ಗತಿಕರ ವಿಶ್ರಾಂತಿ ತಾಣವಾಗಿ ಬದಲಾಗಿದೆ. ಹಗಲು, ರಾತ್ರಿ ಮಲಗಲು ಬಳಕೆಯಾಗುತ್ತದೆ. ಕೆಲವು ತಂಗುದಾಣಗಳು ನಿರ್ವಹಣೆ ಕೊರತೆಯಿಂದ ಕುಡುಕರ ಮೋಜಿನ ತಾಣವಾಗಿದೆ. ಮದ್ಯಸೇವನೆಗೆ ಹಾಗೂ ವಿಶ್ರಾಂತಿ ಪಡೆಯಲು ಬಳಕೆಯಾಗುತ್ತಿದೆ.

ಪ್ರತಿನಿತ್ಯ ಗ್ರಾಮಗಳಿಂದ ಹಾಗೂ ನೆರೆಯ ಜಿಲ್ಲೆಗಳಿಂದ ಸಾವಿರಾರು ಜನರು ಕೊಳ್ಳೇಗಾಲಕ್ಕೆ ಬರುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಸಮಸ್ಯೆ ಅನುಭವಿಸುತ್ತಿದ್ದಾರೆ. ಹೋಟೆಲ್‌ಗಳಲ್ಲಿ ನೀರು ಕುಡಿಯಲು ಹೋಗಲು ಮುಜುಗರವಾಗುತ್ತದೆ, ಹಾಗಾಗಿ, ಬಹಳಷ್ಟು ಮಂದಿ ತಂಪು ಪಾನೀಯ ಹಾಗೂ ಬಾಟಲಿ ನೀರು ಖರೀದಿಸುತ್ತಾರೆ. ಸ್ಥಳೀಯ ಸಂಸ್ಥೆಗಳು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಪ್ರಯಾಣಿಕ ಹರೀಶ ಲಂಬಾಣಿ ಮಲ್ಲಮ್ಮ ನುಡಿ ಪತ್ರಿಕೆಗೆ ತಿಳಿಸಿದರು.

> ಬಿಸಿಲಿನ ದಗೆ ಹೆಚ್ಚಾಗಿರುವುದರಿಂದ ತಂಗುದಾಣ ನಿರ್ಮಾಣ ಮಾಡಿದರೆ ವಿದ್ಯಾರ್ಥಿನಿಯರಿಗೆ ಅನುಕೂಲವಾಗುತ್ತದೆ. ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ ಮಾಡಬೇಕು.
>
> –ದಾಸರಿ ಮೀನಾಕ್ಷಿ
>
> ಸ್ಫೂರ್ತಿ ನರ್ಸಿಂಗ್ ಕಾಲೇಜ್ ವಿದ್ಯಾರ್ಥಿನಿ

# ಡಾ.ಬಾಬು ಜಗಜೀವನರಾಮ್ ಜನ್ಮದಿನಾಚರಣೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಕಂಪ್ಲಿ ತಾಲೂಕಿನ ಕಂಪ್ಲಿ ತಾಲೂಕು ಆಡಳಿತ ಕಚೇರಿ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ಭಾರತದ ಮಾಜಿ ಉಪ ಪ್ರಧಾನಮಂತ್ರಿ ಹಾಗೂ ಹಸಿರು ಕ್ರಾಂತಿ ಹರಿಕಾರರಾದ ಡಾ.ಬಾಬು ಜಗಜೀವನರಾಮ್ ಅವರು 119ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶವು ಇಂದು ಆಹಾರ ಭದ್ರತೆಯಲ್ಲಿ ಸ್ವಾವಲಂಬನೆ ಸಾಧಿಸಲು ಅಂದಿನ ದಿನಗಳಲ್ಲಿ ದೇಶದ ಧೀಮಂತ ನಾಯಕ, ಮಾಜಿ ಉಪಪ್ರಧಾನಿ ಹಾಗೂ ಭಾರತದ ಹಸಿರು ಕ್ರಾಂತಿಯ ಮೂಲ ಪುರುಷ ಡಾ.ಬಾಬು ಜಗಜೀವನರಾಮ್ ಅವರು ಹಾಕಿಕೊಟ್ಟ ಭದ್ರಬುನಾದಿಯೇ ಕಾರಣ ಎಂದು ಸ್ಮರಿಸಿದರು.

ಡಾ.ಬಾಬು ಜಗಜೀವನರಾಮ್ ಅವರ ಜೀವನಶೈಲಿಯು ಇಂದಿನ 'ಸುಸ್ಥಿರ ಅಭಿವೃದ್ಧಿ' ಕಲ್ಪನೆಗೆ ಮಾದರಿಯಾಗಿದೆ. ಸತ್ಯ, ಪ್ರಾಮಾಣಿಕತೆ ಮತ್ತು ಸಮಾನತೆಯ ಬಗ್ಗೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಾದ ಲಕ್ಷ್ಮಣ್ ನಾಯಕ್ ಸಮಾಜ ಕಲ್ಯಾಣ ಇಲಾಖೆಯ ನಿಲಯ ಪಾಲಕರು ವಿರುಪಾಕ್ಷಪ್ಪ ಹಾಗೂ ಪ್ರೌಢಶಾಲೆ ಟಿಎಂ ಬಸವರಾಜ್ ತಾಲೂಕು ಆಡಳಿತ ಸಿಬ್ಬಂದಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿಗಳು ಹಾಗೂ ದಲಿತ ಮುಖಂಡರು ಈ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಾಗಾರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಬನಶಂಕರಿ 3ನೇ ಹಂತದ ಐಟಿಐ ಲೇಔಟ್‌ನಲ್ಲಿರುವ ಶ್ರೀ ಕೃಷ್ಣ ಪಿಯು ಕಾಲೇಜಿನಲ್ಲಿ ಶ್ರೀ ಕೃಷ್ಣ ಸಂಸ್ಥೆ ಹಾಗೂ ಆಕಾಶ್ ಎಜುಕೇಶನ್ ಸರ್ವಿಸಸ್ ಇವರ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪೂರೈಸಿದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಾಗಾರವನ್ನು ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಆಕಾಶ್ ಎಜುಕೇಶನ್ ಸರ್ವಿಸಸ್ ನಿರ್ದೇಶಕರಾದ ಶ್ರೀ ಹರೀಶ್, ಜಯನಗರ ಕೇಂದ್ರದ ಮುಖ್ಯಸ್ಥರಾದ ಶ್ರೀ ಗಿರೀಶ್, ರಾಜ್ಯ ನಿರ್ದೇಶಕರಾದ ಶ್ರೀ ರಾಜೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಜೊತೆಗೆ ಶ್ರೀ ಕೃಷ್ಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ. ರುಕ್ಮಾಂಗದ ನಾಯ್ಡು, ಶೈಕ್ಷಣಿಕ ನಿರ್ದೇಶಕರಾದ ಪ್ರೊ. ಎಸ್.ಪಿ. ಮನೋಹರ್, ಶಾಲಾ ನಿರ್ದೇಶಕರಾದ ಶ್ರೀಮತಿ ಶಾಂತಲಾ ರವಿಶಂಕರ್, ಐಸಿಐಸಿಇ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಪದ್ಮನವನೀತ್, ರಾಜ್ಯ ಪಠ್ಯ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ವನಿತಾ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು. ಮುಖ್ಯ ಅತಿಥಿಯಾದ ಶ್ರೀ ರಾಜೇಶ್ ಅವರು ಮಾತನಾಡುತ್ತಾ, ಎಸ್‌ಎಸ್‌ಎಲ್‌ಸಿ ನಂತರ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಆಯ್ಕೆ ಮಾಡಿಕೊಳ್ಳಬಹುದಾದ ವಿವಿಧ ಕೋರ್ಸ್‌ಗಳ ಬಗ್ಗೆ ವಿವರಿಸಿದರು. ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ. ರುಕ್ಮಾಂಗದ ನಾಯ್ಡು ಅವರು ಮಾತನಾಡುತ್ತಾ, ಸಂಸ್ಥೆಯಲ್ಲಿ ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇಕಡಾ 100ರಷ್ಟು ಫಲಿತಾಂಶ ಸಾಧನೆಯಾಗುತ್ತಿದೆ ಎಂದು ಹೇಳಿದರು.

# ಪುಸ್ತಕ ಮೇಳ ; ಬುದ್ಧ, ಬಸವ , ಅಂಬೇಡ್ಕರ್ ಅವರ ಜ್ಞಾನ ಭಂಡಾರ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ



ಸಮಸಮಾಜದ ಕನಸು ಕಂಡವರು , ಭಾರತದ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿದವರು , ಜಾತಿ ತಾರತಮ್ಯವನ್ನು ಅಳಿಸಿಹಾಕಿ ಮನುಷ್ಯರೆಲ್ಲ ಒಂದೇ ಎಂದು ಸಾರಿದ ಧೀಮಂತ ನಾಯಕ ಮೇಲು ಕೀಳಿನ ಅಸಮಾನತೆಯ ಸಮಾಜದಲ್ಲಿ ಸಮಾನತೆಯನ್ನು ತರುವುದಕ್ಕಾಗಿ ಶ್ರಮಿಸಿದ ಸಂವಿಧಾನ ಶಿಲ್ಪಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿ ನಿಮಿತ್ತ ವಿಜಯಪುರ ನಗರದಲ್ಲಿ ನಾಲ್ಕು ದಿನಗಳ ಕಾಲ ಪುಸ್ತಕ ಮೇಳ ನಡೆಯಲಿದೆ.

ವಿಜಯಪುರದ ಮೇ ಸಾಹಿತ್ಯ ಬಳಗವು ಈ ಮೂವರೂ ಮಹಾಪುರುಷರ ಜನ್ಮದಿನಗಳನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲು ಮುಂದಾಗಿದ್ದು ಬುದ್ಧ ಎಂದರೆ ವಿಜ್ಞಾನ, ಬಸವ ಎಂದರೆ ಕಾಯಕ-ದಾಸೋಹ, ಬಾಬಾಸಾಹೇಬರೆಂದರೆ ಜ್ಞಾನದ ಪ್ರವಾಹ ಇದ್ದಂತೆ ಜ್ಞಾನದ ಪ್ರವಾಹದಲ್ಲಿ ಈಜಿದವರು ಮಾತ್ರ ಉನ್ನತ ಸ್ಥಾನಕ್ಕೆ ತಲುಪಲು ಸಾಧ್ಯ , ಹಾಗಾಗಿ ನಾಡಿನ ಜ್ಞಾನ-ವಿಜ್ಞಾನ ದಾಸೋಹ ಎಲ್ಲರಿಗೂ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿರುವ 'ಮೇ ಸಾಹಿತ್ಯ ಬಳಗ' ಬುದ್ಧ ಬಸವ ಬಾಬಾಸಾಹೇಬರ ಚಿಂತನೆಗಳನ್ನು ಸಮಾಜಕ್ಕೆ ತಿಳಿಸಿಕೊಡುವ ನಿಟ್ಟಿನಲ್ಲಿ ಐತಿಹಾಸಿಕ ವಿಜಯಪುರ ನಗರದಲ್ಲಿ ನಾಲ್ಕು ದಿನಗಳ ಕಾಲ ಬೃಹತ್ ಪುಸ್ತಕ ಮೇಳವನ್ನು ಏಪ್ರಿಲ್ 10 ರಿಂದ 14 ವರೆಗೆ ಹಮ್ಮಿಕೊಂಡಿದೆ, ಇದು ಕೇವಲ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವಲ್ಲ. ಇದೊಂದು ಸಾಂಸ್ಕೃತಿಕ ಮೇಳ. ನಾಲ್ಕು ದಿನಗಳ ಕಾಲ ಈ ಮೂವರು ಮಹಾಪುರುಷರು ಮಾತ್ರವಲ್ಲದೆ ಫುಲೆ, ಶಾಹು, ಪೆರಿಯಾರ್, ನಾರಾಯಣಗುರು, ಲೋಹಿಯಾರಂಥ ಸಮಾಜ ಚಿಕಿತ್ಸಕರ ಚಿಂತನೆಗಳ ಕಾರ್ಯಾಗಾರ ನಡೆಯಲಿದೆ. ಬಹುಮುಖ್ಯವಾಗಿ ಎಲ್ಲಾ ಜಾತಿ ಜನಾಂಗದವರ ಒಳಗೊಳ್ಳುವಿಕೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು ಪುಸ್ತಕ ಮೇಳದ ನೆಪದಲ್ಲಿ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತ ವರ್ಗಗಳ ಸಾಮಾಜಿಕ ಉನ್ನತಿಗಾಗಿ ಚಿಂತನೆ ನಡೆಯಲಿದೆ. ಡಿಜಿಟಲ್ ಯುಗದಲ್ಲಿ ಮಗ್ನವಾಗಿರುವ ಯುವ ಸಮುದಾಯಕ್ಕೆ ಮಹಾನ್ ವ್ಯಕ್ತಿಗಳನ್ನು ಸ್ಮರಿಸುವ, ಮತ್ತೆ ಅವರ ವಿಚಾರಗಳನ್ನು ಸಮಾಜದಲ್ಲಿ ಬಿತ್ತುವ ಪ್ರಯತ್ನವಾಗಿದ್ದು ಅಳಿವಿನ ಅಂಚಿನಲ್ಲಿರುವ ಪುಸ್ತಕ ಸಂಸ್ಕೃತಿಯನ್ನು ಮರುಸ್ಥಾಪಿಸುವ ಪ್ರಯತ್ನಕ್ಕೆ ನಾವೆಲ್ಲರೂ ಸಾಕ್ಷಿಯಾಗೋಣ, ಮೇ ಸಾಹಿತ್ಯ ಬಳಗದ ಸಣ್ಣ ಪ್ರಯೋಗದಲ್ಲಿ ಕೈಜೋಡಿಸಿ ನಾಲ್ಕು ದಿನಗಳು ಜೊತೆಯಾಗಿರೋಣ ಏಪ್ರಿಲ್ 10 ರಿಂದ 14 ದರ್ಬಾರ್ ಹೈಸ್ಕೂಲ್ ಮೈದಾನ, ವಿಜಯಪುರ.

# ಬಹಮನಿ ಯುಗದ ಚಿಶ್ತಿ ಪರಂಪರೆಯ ಮೊದಲ ಸೂಫಿ



**ಧರ್ಮ-ಮರ್ಮ**

● ಡಾ.ಎಂ.ಮಹ್ಮದ್ ಬಾಷ ಗೂಳ್ಯಂ
ಪ್ರಧಾನ ಸಂಪಾದಕ, ಬೆಂಗಳೂರು

**ಕಳೆದ ಸಂಚಿಕೆಯಿಂದ...**

ಸೂಫಿ ಪಂಥದ ಪ್ರಮುಖ ಹಂತಗಳಾದ ಶರೀಯತ್ (ಬಾಹ್ಯಗ್ರಾಹ್ಯ ಸಿದ್ಧಾಂತ) ಹಾಗೂ ತರೀಖತ್ (ರಹಸ್ಯಾತ್ಮಕ ಆಂತರ್ಯ ಗ್ರಾಹ್ಯ ಸಿದ್ಧಾಂತ) ಎರಡರಲ್ಲೂ ಸಮರ್ಥ ತರಬೇತಿ ಪಡೆದಿದ್ದ ಶೇಖ್ ಬುರಾಹನುದ್ದೀನ್ ಗರೀಬರು ಪ್ರಮುಖ ಖಲೀಫರಾಗಿದ್ದ ಸಯ್ಯದ್ ಜಯಾನುದ್ದೀನ್ ದಾವುದ್ ಶಿರಾಜಿ ದೌಲತಾ ಬಾದಿರವರನ್ನು ಬಹಮನಿ ಯುಗದ ಚಿಶ್ತಿಯಾ ಸೂಫಿ ಪರಂಪರೆಯ ಮೊದಲ ಸೂಫಿ ಎಂದು ನಂಬಲಾಗಿದೆ.

ಅಲ್ಲಾವುದ್ದೀನ್ ಹಸನ್‌ಬಹಮನ್ ಶಾಹನ ಸಮಕಾಲೀನರಾಗಿದ್ದ ಇವರು, ದಖನ್ನಿನ ಬಹಮನಿ ಸಾಮ್ರಾಜ್ಯ, ಸಮಾಜ ಹಾಗೂ ಬಹಮನಿ ಬಾದಶಹರ ಮೇಲೆ ಅತ್ಯಂತ ಪ್ರಭಾವ ಬೀರಿದ ಸೂಫಿ ಸಂತರಾಗಿದ್ದರು. ಸಯ್ಯದ್ ಜೈನುದ್ದೀನ್ ಅವರು ತಮ್ಮ ಸ್ವತಂತ್ರ ವ್ಯಕ್ತಿತ್ವ, ಅಪ್ರತಿಮ ಸಾಹಸ, ಬದ್ಧತೆಯ ಕಾರಣ ಬಹಮನಿ ಸಾಮ್ರಾಜ್ಯದ ಬಾದಶಹಾನಾಗಿದ್ದ ಒಂದನೇ ಮಹಮ್ಮದ್ ಶಾಹನ ಸಾಮ್ರಾಜ್ಯದಲ್ಲಿ ಶರೀಯತ್ ಜಾರಿಗೊಳಿಸುವಂತೆ ಸೂಚಿಸಿದ್ದನ್ನು ನೆನೆಯಬಹುದು. ಇವರ ಬಳಿಕ ಶಾಮ್ನಾ ಮೀರಾನ್ ಎಂದು ಖ್ಯಾತರಾದ ಸಯ್ಯದ್ ಜೈನು ಯೂಸೂಫ್ ಮುರ್ತುದಾಬಾವ್ (ಮೀರಜ್ ಜಿಲ್ಲೆಯಲ್ಲಿ)ನಲ್ಲಿ ಖಾನಖಾ (ಸೂಫಿಕೇಂದ್ರ)ಗಳನ್ನು ಸ್ಥಾಪಿಸುವ ಮೂಲಕ ಸೂಫಿ ಪಂಥದ ಪ್ರಗತಿಗೆ ಕಾರಣಕರ್ತರಾಗಿದ್ದರು.

### ಬಹಮನಿ ಪೂರ್ವ ದಖನಿನ ಸೂಫಿಗಳು

ಬಹುಮನಿ ಸಾಮ್ರಾಜ್ಯದ ಉದಯದ ಪೂರ್ವದಲ್ಲಿ ಕೆಲವು ಚಿಶ್ತಿಯಾ ಪರಂಪರೆಯ ಸೂಫಿಗಳು ದಖನಿಗೆ ಆಗಮಿಸಿರುವ ಕುರಿತು ಆಕರಗಳಿವೆ. ಇವರಲ್ಲಿ ಈಗಾಗಲೇ ದಖನ್ ತಲುಪಿದ್ದ ಸೂಫಿಗಳ ಪೈಕಿ ಖ್ವಾಜಾ ಮೊಯಿನುದ್ದೀನ್ ಅಜ್ಮೀರಿಯ ಸಮಕಾಲೀನ, ಸ್ನೇಹಿತರೂ ಆಗಿದ್ದ ಖ್ವಾಜಾ ಉಥ್ಮನ್ ಹರ್ವಾನಿ ತಮ್ಮ ಹಲವು ಅನುಯಾಯಿಗಳ ಜೊತೆ ಬಿಜಾಪುರದಲ್ಲಿ ನೆಲೆಸಿದ್ದರು. 13ನೆಯ ಶತಮಾನದ ಆದಿಯಲ್ಲಿ ಪಲ್ಲಕ್ಕಿಗಳಲ್ಲಿ ಸವಾರರಾಗಿ ಅತ್ಯಧಿಕ ಅನುಯಾಯಿಗಳ ಜೊತೆ ಬಾಗ್ದಾದ್ ಮಾರ್ಗವಾಗಿ ಭಾರತಕ್ಕೆ ಬಂದು ಹಜ್ರತ್ ಬಖ್ತಿಯಾರ್ ಕಾಕಿ, ಬಾಬಾ ಪರೀದ್ ಗಂಜ್‌ಶಕರ್ ಅವರಿಂದ ಚಿಶ್ತಿಯಾ ಸಿಲ್‌ಸಿಲಾದ ಸೂಫಿ ದೀಕ್ಷೆ ಪಡೆದಿದ್ದರು. ಜೊತೆಗೆ ಹಜ್ರತ್ ನಿಜಾಮುದ್ದೀನ್ ಅವರಿಂದ 'ಸೂಫಿ ಸರಮಸ್ತ್' (ದೈವಿ ತನ್ಮಯ ಸೂಫಿ) ಎಂಬ ಸೂಫಿ ಚಿಂತನೆಯ ನಾಮಗಳಿಸಿ, ಅವರ ಅಣತಿಯಂತೆ ದಖನಿಗೆ ಆಗಮಿಸಿ, ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಸಗರ ಗ್ರಾಮದಲ್ಲಿ ತಮ್ಮ ಜೀವಿತದ ಕೊನೆಯವರೆಗೂ ನೆಲೆಸಿದ್ದರು. ಸೂಫಿ ಸರಮಸ್ತರು ಸಗರ ಪ್ರದೇಶವನ್ನು ಒಳಗೊಂಡಂತೆ ಆಳುತ್ತಿದ್ದ ರಾಜ ಕುಮಾರಾಮನಿಗೆ ಸನ್ನಡತೆಯ ರಾಜ್ಯ ಭಾರ ಮಾಡುವ ಹೀತೋಪದೇಶ ನೀಡಲು, ಅದು




ಯುದ್ಧದಲ್ಲಿ ಬದಲಾಗಿ, ಹಲವು ಅನುಯಾಯಿಗಳ ಪ್ರಾಣತ್ಯಾಗದ ಬಳಿಕ ಸೂಫಿ ಸರಮಸ್ತರ ಮಗಳಾದ ತರಕಶ್‌ಬಿಯಿಂದ ಅವನ ಹತ್ಯೆಯಾಯಿತು. ಈ ಯುದ್ಧದಲ್ಲಿ ಲಖ್ಖಿಖಾನ್ ಅಫ್‌ಘಾನ್ ಹಾಗೂ ನಿಯಾಮತ್ ಖಾನ್‌ಎಂಬ ಉತ್ತರ ಭಾರತದ ಸೈನ್ಯಾಧಿಕಾರಿಗಳು ಸೂಫಿ ಸರಮಸ್ತರಿಗೆ ಸಹಾಯ ಮಾಡಿದ್ದರು. ಈ ಯುದ್ಧದಲ್ಲಿ ಸೂಫಿ ಸರಮಸ್ತರಿಗೆ ಜಯವಾಯಿತು. ವಾಸ್ತವದಲ್ಲಿ ಸರಮಸ್ತರು ಕದನ ಸಂಸ್ಕೃತಿಗೆ ವಿರೋಧಿಯಾಗಿದ್ದು. ಆದರೆ ಇತಿಹಾಸವು ಅನಿವಾರ್ಯವಾಗಿ ಕದನ ಸಂದರ್ಭ ಸೃಷ್ಟಿಸಿ, ಅವರು ಅದನ್ನು ಯುದ್ಧದ ಮೂಲಕ ಸಾಧಿಸಿ ತಮ್ಮ ಸೂಫಿ ಸಂದೇಶವನ್ನು ಯಶಸ್ವಿಯಾಗಿ ಪ್ರಸಾರ ಮಾಡುವಂತಾಯಿತು.

ಇತಿಹಾಸಕಾರ ರಿಚರ್ಡ್ ಮ್ಯಾಕ್ಸವೆಲ್ ಈಟನ್ ಅವರು, ಸೂಫಿ ಸರಮಸ್ತರು ಯೋಧ ಸ್ವರೂಪಿ ಸೂಫಿಯಾಗಿದ್ದು, ಖಡ್ಗದ ಮೂಲಕ ಇಸ್ಲಾಮಿನ ಪ್ರಸಾರ ಮಾಡುವ ಧ್ಯೇಯೋದ್ದೇಶವುಳ್ಳವರಾಗಿದ್ದರು ಎಂಬ ಸಂದೇಹ ವ್ಯಕ್ತಪಡಿಸಿದ್ದಾರೆ. ಆದರೆ ಇದಕ್ಕೆ ಸೂಕ್ತ ಸಾಕ್ಷಾಧಾರಗಳಿಲ್ಲವೆಂದು ಅವರ ವಾದವನ್ನು ಬೇರೆ ಇತಿಹಾಸಕಾರರು ತಳ್ಳಿಹಾಕಿದ್ದಾರೆ. ಮೂಲತಃ ಸೂಫಿ ಸರಮಸ್ತರು ಇರಾಕಿನ ಸಾಮ್ರಾದ ರಾಜಕುಮಾರರಾಗಿದ್ದು, ಸೂಫಿ ಪಥದಲ್ಲಿ ಸಾಗಲು ವಂಶಪಾರಂಪರವಾಗಿ ಒದಗಿಬಂದ ಪಟ್ಟವನ್ನು ಬಿಟ್ಟು ಸಗರಿಗೆ ಬಂದು ಯುದ್ಧ ಮಾಡುವ ಉದ್ದೇಶವೇನಿತ್ತು? ಸೂಫಿ ಮತವು ಮೂಲತಃ ಪ್ರೇಮದ ಸಂದೇಶ ಸಾರುವ ಸಂತಪಥ. ಹಲವು ಸೂಫಿಗಳು ಈ ಪಥದಲ್ಲಿ ಸಾಗಲು ಆ ಕಾಲದ ಮೌಲ್ವಿಗಳ ಕೆಂಗೆಣ್ಣಿಗೆ ಗುರಿಯಾಗಿದ್ದರು ಎಂಬುದನ್ನು ಗಮನಿಸಬೇಕಾಗಿದೆ.

ಇವರ ಹಾಗೆಯೇ ಪ್ರಮುಖ ಚಿಶ್ತಿ ಸೂಫಿ ಮುಂತಜಿಬುದ್ದೀನ್ ಜರಾರಿ ಜಲ್‌ಬಕ್ಷನ ಸಹೋದರ ಶೇಖ್ ಬುರಾಹನುದ್ದೀನ್ ಗರೀಬ್ ಅವರು ಖುಲ್ದಾಬಾದ್‌ನಲ್ಲಿ ನೆಲೆಸಿದ್ದ ಐತಿಹ್ಯಗಳಿವೆ. ಇವರ ಸಮಕಾಲೀನ ನಿಜಾಮುದ್ದೀನ್ ಔಲಿಯಾ ಅವರ ಅನುಯಾಯಿ ಸಯ್ಯದ್ ಯೂಸೂಫ್ ಅಲ್ ಹುಸೇನಿಯವರು.

ಈ ಸಯ್ಯದ್ ಯೂಸೂಫ್-ಅಲ್ ಹುಸೈನಿ(ಸಯ್ಯದ್ ಯೂಸುಫ್ ರಹೆಮತುಲ್ಲಾ) ಅವರೇ, ಸಯ್ಯದ್ ಹುಸೈನಿ ಗೇಸುದರಾಜ್ ಅವರ ತಂದೆಯವರು. ಎರಡು ಸೂಫಿ ಗ್ರಂಥಗಳ ರಚನಾಕಾರರಾಗಿದ್ದ ಯೂಸೂಫ್ ಅಲ್ ಹುಸೈನಿಯವರು ಸಯ್ಯದ್ ರಾಜಾ ಅಥವಾ ಶಾಹ ರಾಜು ಖತ್ತಾಲ್ ಹುಸೇನಿ ಎಂಬ ಹೆಸರಿಗಳಿಂದಲೂ ಪ್ರಸಿದ್ಧರಾಗಿದ್ದರು.


ಮುಂದುವರೆಯುವುದು...



Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)